

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 27 ಗುರುವಾರ 2023

ಸಂಪುಟ: 44 | ಸಂಚಿಕೆ: 12 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪೇ ಇಂಜಿನ್ ಸರ್ಕಾರ!

● ದೇಶದ ಉಜ್ವಲ ಭವಿಷ್ಯಕ್ಕಾಗಿ ಡಬಲ್ ಇಂಜಿನ್ ಸರ್ಕಾರ ಬೇಕೇ ಬೇಕು: ಯೋಗಿ ಆದಿತ್ಯನಾಥ್ ಬಲವಾದ ಪ್ರತಿಪಾದನೆ ● ಕರ್ನಾಟಕಕ್ಕೂ, ಉತ್ತರ ಪ್ರದೇಶಕ್ಕೂ ತ್ರೇತಾಯುಗ ಸಂಬಂಧ

ಮಂಡ್ಯ, ಏ.26(ಮೋಹನ್‌ರಾಜ್)–ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅದು ಪೇ ಇಂಜಿನ್ ಸರ್ಕಾರವಾಗಲಿದೆ ಎಂದು ಆರೋಪಿಸಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ದೇಶದ ಉಜ್ವಲ ಭವಿಷ್ಯಕ್ಕಾಗಿ ಡಬಲ್ ಇಂಜಿನ್ ಸರ್ಕಾರ ಅನಿವಾರ್ಯ ಎಂದು ಬಲವಾಗಿ ಪ್ರತಿಪಾದಿಸಿದರು.

ಬುಧವಾರ ಮಂಡ್ಯದಲ್ಲಿ ರೋಡ್ ಶೋ ನಂತರ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ಬಿಜೆಪಿ ಸಮಾವೇಶ ಹಾಗೂ ಜಿಲ್ಲೆಯ ಏಳು ಕ್ಷೇತ್ರಗಳ ಅಭ್ಯರ್ಥಿಗಳ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನರೇಂದ್ರಮೋದಿ ಸರ್ಕಾರ ಟೀಂ ಇಂಡಿಯಾ ಮಾದರಿಯಲ್ಲಿ ಕೆಲಸ ಮಾಡುತ್ತಿದೆ. ಟೀಂ ಇಂಡಿಯಾದ ಕ್ಯಾಪ್ಟನ್ ಆಗಿ ಮೋದಿ ಅಭಿವೃದ್ಧಿಯ ಕೆಲಸ ಮಾಡುತ್ತಾ, ವಿಶ್ವ ನಾಯಕನಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಮಂಡ್ಯದಲ್ಲಿ ಕಮಲ ಅರಳಿಸಿ ಶಕ್ತಿ ತುಂಬುವ ಜೊತೆಗೆ ಇಲ್ಲಿ ಡಬಲ್ ಇಂಜಿನ್ ಸರ್ಕಾರ ಬರಲು ಸಹಕರಿಸಿ ಎಂದರು.

ವಿಶ್ವದ ಅತೀ ಶಕ್ತಿಯುತ ದೇಶಗಳ ಪೈಕಿ ಭಾರತ 5 ನೇ ಸ್ಥಾನದಲ್ಲಿದೆ. ಇದರ ಜೊತೆಗೆ ಕರ್ನಾಟಕದ ರಾಜಧಾನಿ ಬೆಂಗಳೂರು ಐಟಿ ಕ್ಷೇತ್ರದಲ್ಲಿ ಕ್ರಾಂತಿಯುಂಟು ಮಾಡುತ್ತಿದೆ. ಇದಕ್ಕೆಲ್ಲಾ ಮೋದಿ ಸರ್ಕಾರವೇ ಕಾರಣ ಎಂದರು. 2014ರ ಬಳಿಕ ದೇಶದ ಪ್ರತಿಯೊಂದು ವಲಯ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಕಳೆದ 9 ವರ್ಷದಲ್ಲಿ ಭಾರತ ಸಾಕಷ್ಟು ಅಭಿವೃದ್ಧಿ ಕಂಡಿದೆ. 2014ಕ್ಕೂ ಹಿಂದೆ ದೇಶದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರ ಆರ್ಥಿಕತೆಯಲ್ಲಿ, ಉದ್ಯೋಗ ಸೃಷ್ಟಿಯಲ್ಲಿ, ತಾಂತ್ರಿಕತೆಯಲ್ಲಿ ವಿಫಲವಾಗಿತ್ತು ಎಂದರು.

ರೈತರು, ಬಡವರ್ಗದವರಿಗೆ ಮೋದಿ ಸರ್ಕಾರದಿಂದ ಅನುಕೂಲವಾಗಿದೆ. ಕಿಸಾನ್ ಸಮ್ಮಾನ್ ಯೋಜನೆಯಿಂದ ರೈತರ ಆತ್ಮಹತ್ಯೆ ನಿಂತಿದೆ. ಉತ್ತರ ಪ್ರದೇಶದ ಅಭಿವೃದ್ಧಿ ಹೇಗೆ ಸಾಧ್ಯವಾಯಿತು ಎಂದು ದೇಶದ ಹಲವು ಕಡೆಗೆ ಹೋದಾಗ ನನ್ನನ್ನು ಪ್ರಶ್ನಿಸುತ್ತಾರೆ. ಆ ಅಭಿವೃದ್ಧಿಗೆ ಡಬಲ್ ಇಂಜಿನ್ ಸರ್ಕಾರವೇ ಕಾರಣ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ. ಉತ್ತರ ಪ್ರದೇಶದ ಮಾದರಿ ಅಭಿವೃದ್ಧಿ ಕಾರ್ಯಗಳು ಕರ್ನಾಟಕದಲ್ಲೂ ಅನುಷ್ಠಾನವಾಗುತ್ತಿದ್ದು, ಯುಪಿ ಮಾದರಿಯ ಆಡಳಿತಕ್ಕೆ ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದು ಕರೆ ನೀಡಿದರು.

ಪ್ರಸ್ತುತ ಉತ್ತರ ಪ್ರದೇಶದಲ್ಲಿ ಕರ್ಫ್ಯೂ, ದಂಗೆ, ಗಲಾಟೆ ಇಲ್ಲ ಎಲ್ಲವನ್ನೂ ಹತೋಟಿಗೆ ತಂದಿದ್ದೇವೆ. ಹಿಂದೆ ಇದ್ದ ಸರ್ಕಾರಗಳು ಮಾಡದ ಕೆಲಸವನ್ನು ಕಳೆದ ಏಳು ವರ್ಷದಲ್ಲಿ ಉತ್ತರ ಪ್ರದೇಶದಲ್ಲಿ ನನ್ನ ನೇತೃತ್ವದ ಸರ್ಕಾರ ಮಾಡಿದೆ. ದೇಶದಲ್ಲಿ ಪಿಎಫ್‌ಐ ಸಂಘಟನೆಯನ್ನು ಬಿಜೆಪಿ ಸರ್ಕಾರ ಬ್ಯಾನ್ ಮಾಡಿದೆ. ಅದರಂತೆ ಕರ್ನಾಟಕದಲ್ಲೂ ಬ್ಯಾನ್ ಮಾಡಲಾಗಿದೆ. ಕಾಂಗ್ರೆಸ್‌ನವರು ಪರೋಕ್ಷವಾಗಿ ಪಿಎಫ್‌ಐಗೆ ಸಹಕರಿಸುತ್ತಿದ್ದರು ಎಂದು ಟೀಕಿಸಿದರು.

ಅಯೋಧ್ಯೆಯಲ್ಲಿ ಕರ್ನಾಟಕ ಗೆಸ್ಟ್‌ಹೌಸ್: ಮುಂಬರುವ ಜನವರಿಯಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಸಿದ್ಧವಾಗಲಿದೆ. ಅಯೋಧ್ಯೆಯಲ್ಲಿ ಕರ್ನಾಟಕದವರಿಗಾಗಿ ಗೆಸ್ಟ್ ಹೌಸ್ ನಿರ್ಮಾಣ ಮಾಡಿಕೊಡಲು ಸಿಎಂ ಬಸವರಾಜ ಬೊಮ್ಮಾಯಿ ಮನವಿ ಮಾಡಿದ್ದರು. ಅದರಂತೆ ಗೆಸ್ಟ್‌ಹೌಸ್ ನಿರ್ಮಾಣ ಮಾಡುತ್ತಿದ್ದೇವೆ. ಕರ್ನಾಟಕದ ಜನ ಅಯೋಧ್ಯೆ ನೋಡಲು ಆಗಮಿಸಬೇಕು ಎಂದ ಅವರು, ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು. ಮಂಡ್ಯಕ್ಕೆ ನಾನು ಬಂದಿರುವುದು ಸಂತಸ ತಂದಿದೆ. ಮಂಡ್ಯ ಹಾಗೂ ಉತ್ತರ ಪ್ರದೇಶದ ಸಂಬಂಧ ತ್ರೇತಾಯುಗದಿಂದ ಒಂದಕ್ಕೊಂದು ಸಂಬಂಧವಿದೆ. ಮರ್ಯಾದಾ ಪುರುಷೋತ್ತಮ ಶ್ರೀರಾಮ ಹಾಗೂ ಆಂಜನೇಯನ ವನವಾಸದ ● 9ನೇ ಪುಟಕ್ಕೆ



ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬುಧವಾರ ಮಂಡ್ಯ ನಗರದಲ್ಲಿ ರೋಡ್ ಶೋ ನಡೆಸಿದರು.

ಬೆಳಗಾವಿ ಏರ್‌ಪೋರ್ಟ್‌ನಲ್ಲಿ ಬೊಮ್ಮಾಯಿ ಬೆನ್ನು ತಟ್ಟಿದ ಸಿದ್ದರಾಮಯ್ಯ



ಬೆಳಗಾವಿ: ಸಾಮಾನ್ಯವಾಗಿ ರಾಜಕೀಯದಲ್ಲಿ ಶಾಶ್ವತ ಮಿತ್ರರೂ ಇರುವುದಿಲ್ಲ, ಶತ್ರುಗಳೂ ಇರುವುದಿಲ್ಲ ಎಂಬ ಮಾತಿದೆ. ಬಹಿರಂಗವಾಗಿ ಕಿತ್ತಾಡಿಕೊಂಡವರು, ಟೀಕೆ, ಆರೋಪಗಳನ್ನು ಪುಂಖಾನುಪುಂಖವಾಗಿ ಮಾಡಿದವರು ಮರುದಿನ ಕೈ ಕೈ ಹಿಡಿದುಕೊಂಡು, ಹೆಗಲ ಮೇಲೆ ಕೈ ಹಾಕಿಕೊಂಡು ಓಡಾಡಿದ್ದನ್ನು ನೋಡುತ್ತಾ ಬಂದಿದ್ದೇವೆ.

ಈಗ ಕರ್ನಾಟಕ ವಿಧಾನಸಭೆ ಚುನಾವಣೆಯ ಸಮಯ. ಲಿಂಗಾಯತ ಸಮುದಾಯದ ಮುಖ್ಯಮಂತ್ರಿಗಳು ಭ್ರಷ್ಟರು ಎಂದು ಸಿದ್ದರಾಮಯ್ಯ ಹೇಳಿ ಇಡೀ ಲಿಂಗಾಯತ ಸಮುದಾಯಕ್ಕೆ ಸಿದ್ದರಾಮಯ್ಯ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಬಿಂಬಿಸಿತ್ತು. ಇನ್ನು ನಿನ್ನೆಯಷ್ಟೇ ಬೆಳಗಾವಿಯ ಕಾಗವಾಡದಲ್ಲಿ ಮಾತನಾಡಿದ್ದ ಸಿದ್ದರಾಮಯ್ಯ, ಬಸವರಾಜ ಬೊಮ್ಮಾಯಿ ಅವರಂತಹ ಭ್ರಷ್ಟ ಮುಖ್ಯಮಂತ್ರಿಯನ್ನು ನಾನು ನೋಡಿಲ್ಲ ಎಂದು ಆರೋಪಿಸಿದ್ದರು. ಆದರೆ ಇಂದು ಹಾಲಿ ಮತ್ತು ಮಾಜಿ ಸಿಎಂಗಳು ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿ ಒಬ್ಬರಿಗೊಬ್ಬರು ಖುಷಿಯಿಂದ ನಗುತ್ತಾ ಕೈ ಕೈ ಕುಲುಕಿಕೊಂಡಿದ್ದಾರೆ. ಅಷ್ಟೇ ಅಲ್ಲ, ಸಿದ್ದರಾಮಯ್ಯನವರು ಪ್ರೀತಿಯಿಂದ ಬಸವರಾಜ ಬೊಮ್ಮಾಯಿಯವರ ಹೆಗಲು ತಟ್ಟಿದ್ದಾರೆ. ಇದು ನೋಡುಗರಿಗೆ ಒಂದು ಕ್ಷಣ ಅಚ್ಚರಿ ಹಾಗೂ ನಗು ತರಿಸಿದ್ದಂತೂ ನಿಜ.



SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884304444

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
8884171888

ಏ.30ರಂದು ಮೈಸೂರಲ್ಲಿ ಮೋದಿ ರೋಡ್ ಶೋ

ಓವಲ್ ಮೈದಾನದಲ್ಲಿ ಹೆಲಿಪ್ಯಾಡ್, ರಾಜಮಾರ್ಗದಲ್ಲಿ ಸಿದ್ಧತೆ


ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ರೋಡ್ ಶೋ ಹಿನ್ನೆಲೆಯಲ್ಲಿ ಮೈಸೂರಿನ ರಾಜಮಾರ್ಗದಲ್ಲಿ ಬ್ಯಾರಿಕೇಡ್ ನಿರ್ಮಿಸುತ್ತಿರುವುದು.



ಮೈಸೂರು, ಏ.26(ಆರ್‌ಕೆ)–ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏಪ್ರಿಲ್ 30ರಂದು ಮೈಸೂರಿಗೆ ಆಗಮಿಸಲಿದ್ದಾರೆ.

ಅಂದು ಸಂಜೆ 5.35 ಗಂಟೆಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ಆಗಮಿಸಲಿದ್ದಾರೆ. ಇದಕ್ಕಾಗಿ ಕ್ರಾಫರ್ಡ್ ಹಾಲ್ ಎದುರು ಓವಲ್ ಮೈದಾನದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಲಾಗುತ್ತಿದೆ. ನಂತರ ಕಾರಿನಲ್ಲಿ ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಮೂಲಕ ಗನ್‌ಹೌಸ್ ತಲುಪುವರು. ಅಲ್ಲಿಂದ ತೆರೆದ ವಾಹನದಲ್ಲಿ ಮೈಸೂರಿನ ಬಿಜೆಪಿ ಅಭ್ಯರ್ಥಿಗಳೊಂದಿಗೆ ರೋಡ್ ಶೋ ● 9ನೇ ಪುಟಕ್ಕೆ

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 5,30,85,566 ಮಂದಿಗೆ ಮತದಾನ ಹಕ್ಕು

● ಇದರಲ್ಲಿ ಪುರುಷರು 2,66,82,156, ಮಹಿಳೆಯರು 2,63,98,483 ● ಈ ಬಾರಿ 16,04,285 ಅಧಿಕ ಮತದಾರರು ಸೇರ್ಪಡೆ ● ಮತದಾನದ ಹಕ್ಕು ಪಡೆದ 11,71,558 ಯುವ ಮತದಾರರು ● ಜೊತೆಗೆ 5,71,281 ವಿಶೇಷಚೇತನರು; 1,21,592 ಮಂದಿ 80 ವರ್ಷ ಮೇಲ್ಪಟ್ಟ ಹಿರಿಯರು ● ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಮಾಹಿತಿ

ಬೆಂಗಳೂರು, ಏ.26(ಕೆಎಂಶಿ)– ರಾಜ್ಯ ವಿಧಾನಸಭೆಗೆ ಮೇ 10ರಂದು ನಡೆಯುತ್ತಿರುವ ಚುನಾವಣೆಯಲ್ಲಿ 5,30,85,566 ಮಂದಿ ಮತ ಚಲಾಯಿಸುವ ಹಕ್ಕು ಪಡೆದಿದ್ದಾರೆ. ಕಳೆದ ಬಾರಿಗಿಂತ ಈ ಬಾರಿ ರಾಜ್ಯದಲ್ಲಿ 16,04,285 ಹೆಚ್ಚು ಮತದಾರರು ಪಟ್ಟಿಗೆ ಸೇರ್ಪಡೆಗೊಂಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ, ಮಹಿಳೆಯರಿಗಿಂತ ಪುರುಷರೇ ಹೆಚ್ಚು ಮಂದಿ ಮತದಾನದ ಹಕ್ಕು ಪಡೆದಿದ್ದಾರೆ. ರಾಜ್ಯದಲ್ಲಿ 2,66,82,156 ಪುರುಷರು, 2,63,98,483 ಮಹಿಳೆಯರು ಹಾಗೂ 4927 ಇತರರು ಮತದಾನ ಮಾಡುವ ಹಕ್ಕು ಪಡೆದುಕೊಂಡಿದ್ದಾರೆ. ಕೇಂದ್ರ ಚುನಾವಣಾ ಆಯೋಗ ಮಾರ್ಚ್ 29 ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆ ಮಾಡಿದ ನಂತರ ಏಪ್ರಿಲ್ 20 ರವರೆಗೆ ಮತದಾರರ ನೋಂದಣಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿತ್ತು. ಈ ಅವಧಿಯಲ್ಲಿ ಅರ್ಹತೆ ಪಡೆದ ಎಲ್ಲಾ ಅರ್ಜಿಗಳನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ, ನವೀಕರಿಸಿದ ನಂತರ ಇಷ್ಟು ಮಂದಿ ಮತದಾನದ ಹಕ್ಕು ಪಡೆದಿದ್ದಾರೆ. ಈ ಬಾರಿ ಒಟ್ಟು 11,71,558 ಯುವ ಮತದಾರರು ಪ್ರಥಮ ಬಾರಿಗೆ ತಮ್ಮ ಹಕ್ಕು ಚಲಾಯಿಸುವ ಅವಕಾಶ ಪಡೆದುಕೊಂಡಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು. ಪ್ರಸಕ್ತ ಚುನಾವಣೆಯಲ್ಲಿ 5,71,281 ವಿಶೇಷ ಚೇತನ ಮತದಾರರು ಮತ ● 9ನೇ ಪುಟಕ್ಕೆ



ಗರಿಷ್ಠ 24! ಕನಿಷ್ಠ 5 ಮಂದಿ!!

ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರ ದಲ್ಲಿ ಗರಿಷ್ಠ 24 ಅಭ್ಯರ್ಥಿಗಳು ಕಣದಲ್ಲಿದ್ದರೆ, ಕುಂದಾಪುರ, ತೀರ್ಥಹಳ್ಳಿ, ಯಮಕನಮರಡಿ, ದೇವದುರ್ಗ, ಕಾಪು, ಮಂಗಳೂರು ಹಾಗೂ ಬಂಟ್ವಾಳದಲ್ಲಿ ಕನಿಷ್ಠ ಎಂದರೆ ತಲಾ ಐದು ಅಭ್ಯರ್ಥಿಗಳು ಕಣದಲ್ಲಿ ಉಳಿದುಕೊಂಡಿದ್ದಾರೆ.

ವಯಸ್ಸಾದವರು, ಅಂಗವಿಕಲರಿಗೆ ಏ. 29ರಿಂದ ಮೇ 6ರವರೆಗೆ ಮನೆಯಲ್ಲೇ ಮತದಾನ

ಬೆಂಗಳೂರು: 80 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವವರು ಮತ್ತು ಅಂಗವಿಕಲರಿಗೆ ಏ.29ರಿಂದ ಮೇ 6ರವರೆಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.



80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾಗಿರುವ 80,250 ಮಂದಿ ಹಾಗೂ 19,279 ಅಂಗವಿಕಲರು ಮನೆಯಿಂದಲೇ ಮತದಾನ ಮಾಡಲು ನೋಂದಣಿ ಮಾಡಿಸಿಕೊಂಡಿದ್ದಾರೆ. ಅವರ ಮನೆಗಳಿಗೆ ತೆರಳಿ ಮತಪತ್ರದ ಮೂಲಕ ಮತದಾನಕ್ಕೆ ಅವಕಾಶ ನೀಡಲಾಗುವುದು. ಏ.29ರಿಂದ ಮೇ 6ರ ಅವಧಿಯಲ್ಲಿ ಪ್ರತೀ ಮತದಾರರ ಮನೆಗೆ ಎರಡು ಬಾರಿ ಚುನಾವಣಾ ಸಿಬ್ಬಂದಿ ಭೇಟಿ ನೀಡುವರು. ರಾಜಕೀಯ ಪಕ್ಷಗಳ ಏಜೆಂಟರ ಸಮ್ಮುಖದಲ್ಲೇ ಗೌಪ್ಯವಾಗಿ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗುವುದು. ಚುನಾವಣಾ ಸಿಬ್ಬಂದಿಯ ಭೇಟಿಯ ಮೊದಲು ಸಮಯ ತಿಳಿಸಲಾಗುವುದು. ಎರಡೂ ಬಾರಿ ಮನೆಯಲ್ಲಿರದಿದ್ದರೆ ಪುನಃ ಮತದಾನಕ್ಕೆ ಅವಕಾಶ ಇರುವುದಿಲ್ಲ. ಮನೆಯಿಂದ ಮತ ಚಲಾಯಿಸಲು ನೋಂದಣಿ ಮಾಡಿಸಿಕೊಂಡವರಿಗೆ ಮತಗಟ್ಟೆಗೆ ಬಂದು ಮತದಾನ ಮಾಡಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದರು ಈ ಚುನಾವಣೆಯಲ್ಲಿ ಒಟ್ಟು 5.30 ಕೋಟಿ ಮತದಾರರು ಹಕ್ಕು ಚಲಾಯಿಸುವ ಅರ್ಹತೆ ಹೊಂದಿದ್ದಾರೆ. 263 ಹೆಚ್ಚುವರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಒಟ್ಟು 58,545 ಮತಗಟ್ಟೆಗಳನ್ನು ಮತದಾನಕ್ಕೆ ಸ್ಥಾಪಿಸಲಾಗಿದೆ ಎಂದರು.

ಮೈಸೂರು ಮೈಲಾರಿ ಹೋಟೆಲಲ್ಲಿ ದೋಸೆ ಮಾಡಿ, ಸವಿದ ಪ್ರಿಯಾಂಕ

ಎಲ್ಲರೊಂದಿಗೆ ಕುಳಿತು ದೋಸೆ, ಇಡ್ಲಿ, ಕಾಯ್‌ಚಟ್ನಿ, ಸಾಗು ರುಚಿಗೆ ಮಾರುಹೋದ ಕಾಂಗ್ರೆಸ್ ನಾಯಕಿ!





ಮೈಸೂರು, ಏ. 26(ಆರ್‌ಕೆ)– ಚುನಾವಣಾ ಪ್ರಚಾರಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ, ಇಂದು ಬೆಳಗ್ಗೆ ಅಗ್ರಹಾರ ಬಳಿಯ ಮೈಲಾರಿ ಹೋಟೆಲಿಗೆ ತೆರಳಿ ಇಡ್ಲಿ, ಮಸಾಲ ದೋಸೆ ಸವಿದು ಅಚ್ಚರಿ ಮೂಡಿಸಿದರು.

ಮಂಗಳವಾರ ಮೈಸೂರು ಜಿಲ್ಲೆಯ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಡಾ. ಹೆಚ್.ಸಿ. ಮಹದೇವಪ್ಪ ಸೇರಿದಂತೆ ಇನ್ನಿತರೆ ಕಾಂಗ್ರೆಸ್ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡಿದ ಪ್ರಿಯಾಂಕ ಅವರು, ಮೈಸೂರಿನ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾದಲ್ಲಿ ವಾಸ್ತವ್ಯ ಹೂಡಿದ್ದರು. ಬುಧವಾರ ಬೆಳಗ್ಗೆ 9.30 ಗಂಟೆ ವೇಳೆಗೆ ಅಗ್ರಹಾರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಲಾರಿ ಹೋಟೆಲಿಗೆ ಭೇಟಿ ನೀಡಿದ ಅವರು, ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಬಿಸಿ ಬಿಸಿ ಇಡ್ಲಿ, ಮಸಾಲ ದೋಸೆ, ಚಹಾ ಸೇವಿಸಿದರು. ಯಾವುದೇ ಪೂರ್ವ ಮಾಹಿತಿ ಇಲ್ಲದೇ ದಿಢೀರ್ ಭೇಟಿ ನೀಡಿದ ಪ್ರಿಯಾಂಕ ಅವರನ್ನು ಕಂಡು ಹೋಟೆಲ್ ಮಾಲೀಕ ಲೋಕೇಶ್, ಪತ್ನಿ ಶೃತಿ, ಪುತ್ರಿ ಪಾರ್ವತಿ, ಸಿಬ್ಬಂದಿಯಷ್ಟೇ ಅಲ್ಲ, ಹೋಟೆಲ್‌ನಲ್ಲಿ ಉಪಾಹಾರ ಸೇವಿಸುತ್ತಿದ್ದ ಗ್ರಾಹಕರಿಗೂ ಅಚ್ಚರಿಯೋ ಅಚ್ಚರಿ. ಕೆಲ ಸಮಯ ಏನು ಮಾಡಬೇಕೆಂಬುದು ತಿಳಿಯದೇ ಕಸಿವಿಸಿಗೊಳಗಾದರು. ನಂತರ ಅವರನ್ನು ಪ್ರೀತಿಯಿಂದ ಉಪಚರಿಸಲು ಮುಂದಾದರು.

ಈ ವೇಳೆ ಪ್ರಿಯಾಂಕ ಗಾಂಧಿಗೆ ಡಿ.ಕೆ. ಶಿವಕುಮಾರ್, ಈ ಹೋಟೆಲಿನ ತಿಂಡಿ ವಿಶೇಷತೆ, ಇಡ್ಲಿ–ದೋಸೆ, ಕಾಯಿ ಚಟ್ನಿ, ಸಾಗು ಬಗ್ಗೆ ವಿವರಿಸಿದರು. ಇದರಿಂದ ಪ್ರೇರೇಪಿತರಾದ ಪ್ರಿಯಾಂಕ ಸ್ವತಃ ತಾವೇ ಹೋಟೆಲ್‌ನ ಚಿಕ್ಕ ಅಡುಗೆ ಮನೆಗೆ ಹೋಗಿ ಮಾಲೀಕ ಲೋಕೇಶ್ ಸಲಹೆಯಂತೆ ತಾವೇ ದೋಸೆ ತಯಾರಿಸಿ, ಅದನ್ನು ಸವಿದು ಆನಂದಿಸಿದರು. ಇಡ್ಲಿ–ದೋಸೆ ತಯಾರಿಸುವ ವಿಧಾನ, ಬಳಸುವ ತುಪ್ಪ, ಕಾಯ್‌ಚಟ್ನಿ, ಸಾಗು ● 9ನೇ ಪುಟಕ್ಕೆ

ಪಂಪ್‌ಸೆಟ್ ನೀರಿನ ವಿಚಾರದಲ್ಲಿ ಜಗಳ

ಅತ್ತಿಗೆ, ಆಕೆಯ ಮಗನ ಹತ್ಯೆಗೈದ ಮೈದುನ

ಪಾಂಡವಪುರ, ಏ. 26– ಪಂಪ್‌ಸೆಟ್‌ನಿಂದ ಜಮೀನಿಗೆ ನೀರು ಹಾಯಿಸುವ ವಿಚಾರವಾಗಿ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ ಅತ್ತಿಗೆ ಹಾಗೂ ಆಕೆಯ ಮಗನನ್ನು ಮೈದುನ ಕುಡುಗೋಲಿನಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಪಾಂಡವಪುರ ತಾಲೂಕು ಹೆಗ್ಗಡಹಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಗ್ರಾಮದ ಶಂಕರೇಗೌಡ ಎಂಬುವರ ಪತ್ನಿ ಶಾಂತಮ್ಮ(45) ಮತ್ತು ಆಕೆಯ ಪುತ್ರ ಯಶ್ವಂತ್(17) ಹತ್ಯೆಗೀಡಾದವರಾಗಿದ್ದು, ಇವರನ್ನು ಬರ್ಬರವಾಗಿ ಕೊಲೆ ಮಾಡಿದ ಶಂಕರೇಗೌಡರ ತಮ್ಮ ಸತೀಶ್ ತಾನೇ ಸ್ವತಃ ಪೊಲೀಸರಿಗೆ ಶರಣಾಗಿದ್ದಾನೆ.

ವಿವರ: ಗ್ರಾಮದ ಮಾಯಿಗೌಡ ಎಂಬುವರ ಪುತ್ರರಾದ ಶಂಕರೇಗೌಡ ಮತ್ತು ಸತೀಶನ ಜಮೀನುಗಳು ಅಕ್ಕಪಕ್ಕದಲ್ಲಿದ್ದು, ● 9ನೇ ಪುಟಕ್ಕೆ





ರಾಜ್ಯ ಸರ್ಕಾರಕ್ಕೆ 'ಪರಮ ವಿಶ್ವಾಸದ್ರೋಹಿ' ಸರ್ಕಾರ ಎಂದು ಬಿರುದು ಕೊಡಬೇಕು: ಡಿಕೆಶಿ

- ಡಬಲ್ ಇಂಜಿನ್ ಸರ್ಕಾರ ಜನರಿಗೆ ಚೂರಿ ಹಾಕಿದೆ
- ಎಲ್ಲಾ ಸಮಾಜಕ್ಕೂ ಬಿಜೆಪಿ ಸರ್ಕಾರದಿಂದ ದ್ರೋಹ
- ಕಾಂಗ್ರೆಸ್‌ಗೆ ಈ ಬಾರಿ 150 ಸ್ಥಾನ, ಬಿಜೆಪಿಗೆ 40

ಮೈಸೂರು,ಏ.26(ಎಂಟಿವೈ)–ಮಿತಿ ಮೀರಿದ ಭ್ರಷ್ಟಾಚಾರ, ಕಮಿಷನ್ ದಂಧೆ ಹಾಗೂ ಸುಳ್ಳು ಮೀಸಲಾತಿ ಹಂಚಿಕೆ ವಿಚಾರದಿಂದ ಬಿಜೆಪಿ ಸರ್ಕಾರ ರಾಜ್ಯದ ಜನರನ್ನು ವಂಚಿಸಿದ್ದು, ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ 'ಪರಮ ವಿಶ್ವಾಸ ದ್ರೋಹಿ' ಸರ್ಕಾರ ಎಂದು ಬಿರುದು ಕೊಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ವಿಶ್ವಾಸದ್ರೋಹಿ ಪಕ್ಷ ಎಂದು ಪದೇಪದೆ ಸಾಬೀತಾಗುತ್ತಲೇ ಇದೆ. ಮೀಸಲಾತಿ ವಿಚಾರದಲ್ಲಿ ಜನರಿಗೆ ಚಾಕೋಲೇಟ್ ನೀಡಿದೆ. ಮೀಸಲಾತಿ ಹೆಚ್ಚಳ ಹಾಗೂ ಹಂಚಿಕೆ ವಿಚಾರದಲ್ಲಿ ಅವೈಜ್ಞಾನಿಕ ಕ್ರಮ ಕೈಗೊಂಡಿದೆ. ಚುನಾವಣೆಯಲ್ಲಿ ಮತಗಳಿಸಬಹುದು ಎಂಬ ಏಕೈಕ ದುರುದ್ದೇಶದಿಂದ ಮೀಸಲಾತಿ ಅಸ್ತ್ರ ಪ್ರಯೋಗಿಸಿದೆ. ಆದರೆ, ಅದು ಊರ್ಜಿತವಾಗಿಲ್ಲ. ಕಾನೂನಿನಲ್ಲಿ ತೊಡಕಿರುವುದು ಗೊತ್ತಿದ್ದರೂ ಮೀಸಲಾತಿ ಹೆಚ್ಚಳದ ಪ್ರಸ್ತಾಪ ಕಳುಹಿಸಿದ್ದಾರೆ. ಇದು ಚುನಾವಣೆ ವೇಳೆ ಜೇನುಗೂಡಿಗೆ ಕೈ ಹಾಕಿದಂತಾಗಿದೆ. ನಾವು ಮೀಸಲಾತಿ ಹೆಚ್ಚಿಸಲು ಪ್ರಯತ್ನಪಟ್ಟೆವು. ಆದರೆ, ಕಾನೂನಿನ ತೊಡಕಿನಿಂದ ಅದು ಸಾಧ್ಯವಾಗಲಿಲ್ಲ ಎಂದು ಹೇಳುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಸಂಚು ನಡೆಸಲಾಗಿದೆ. ಆ ಮೂಲಕ ಎಲ್ಲಾ ಸಮಾಜಕ್ಕೂ ಬಿಜೆಪಿ ಸರ್ಕಾರ ದ್ರೋಹ ಮಾಡಿದೆ ಎಂದು ಆರೋಪಿಸಿದರು.

ಬಿಜೆಪಿ ನಾಯಕರಿಗೆ ರಾಜಕೀಯ ಬದ್ಧತೆ ಇಲ್ಲ. ಆರಂಭದಿಂದಲೂ ಮೋಸ ಮಾಡುವುದು, ಸುಳ್ಳು ಹೇಳಿಕೊಂಡು ತಿರುಗುವುದೇ ಇವರ ಕೆಲಸ. ಇದರಿಂದ ಬಿಜೆಪಿ ಸರ್ಕಾರಕ್ಕೆ ಪರಮ ವಿಶ್ವಾಸದ್ರೋಹಿ ಸರ್ಕಾರ ಎಂದು ಬಿರುದು ಕೊಡಬೇಕು ಎಂದು ಲೇವಡಿ ಮಾಡಿದರು.

ರಾಜ್ಯದ ಜನ ದಡ್ಡರಲ್ಲ. ಒಕ್ಕಲಿಗರು ಹಾಗೂ ಲಿಂಗಾಯತರು ಭಿಕ್ಷುಕರಲ್ಲ. ನಾವು ಹಾಗೂ ನಮ್ಮ ಸ್ವಾಮೀಜಿ ಕೇಳಿದ್ದು ಶೇ.16ರಷ್ಟು ಮೀಸಲಾತಿ. ಆದರೆ, ಇವರು ಕೊಟ್ಟಿದ್ದು ಎಷ್ಟು? ಅಲ್ಪಸಂಖ್ಯಾತರಿಗೆ ನೀಡುತ್ತಿದ್ದ ಮೀಸಲಾತಿ ಹಿಂಪಡೆದು ಒಕ್ಕಲಿಗ ಹಾಗೂ ಲಿಂಗಾಯಿತರಿಗೆ ಮೀಸಲಾತಿ ಹಂಚಿಕೆ ಮಾಡಲಾಗಿದೆ. ಇದರಿಂದ ಮುಸ್ಲಿಮರ ಮೇಲೆ ಒಕ್ಕಲಿಗ ಹಾಗೂ ಲಿಂಗಾಯಿತರನ್ನು ಎತ್ತಿಕಟ್ಟುವ ಹುನ್ನಾರ ನಡೆಸಲಾಗಿದೆ. ಮೀಸಲಾತಿ ಕಿತ್ತುಕೊಂಡ ಬಳಿಕ ಮುಸ್ಲಿಮರನ್ನು ದೇಶದಿಂದ ಓಡಿಸಿ ಬಿಡಲು ಸಾಧ್ಯವೇ?. ಸುಪ್ರಿಂಕೋರ್ಟ್ ಮೀಸಲಾತಿ ಕುರಿತು ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಹೆಚ್ಚಳ ಮಾಡಿರುವುದನ್ನು ಷೆಡ್ಯೂಲ್–9ಕ್ಕೆ ಸೇರಿಸದೇ ನಿರ್ಲಕ್ಷಿಸಿದೆ. ಇದನ್ನೇ ಮುಂದಿಟ್ಟುಕೊಂಡು ಎಲ್ಲಾ ಸಮುದಾಯದ ಮೀಸಲಾತಿ ರದ್ದು ಮಾಡುವುದೇ ಬಿಜೆಪಿ ಸರ್ಕಾರದ ಉದ್ದೇಶವಾಗಿದೆ ಎಂದು ದೂರಿದರು.

ಡಬಲ್ ಇಂಜಿನ್ ಸರ್ಕಾರ ಸಮಾಜದ ಬೆನ್ನಿಗೆ ಮಾತ್ರವಲ್ಲದೇ, ಜನರ ಹೃದಯಕ್ಕೆ ಚೂರಿ ಹಾಕಿದೆ. ಮೀಸಲಾತಿ ವಿಚಾರದಲ್ಲಿ ತಾನಾಗಿಯೇ ಹಿಟ್ ವಿಕೆಟ್ ಮಾಡಿಕೊಂಡಿದೆ. ಇದರಿಂದ ಮೂರು ವಿಕೆಟ್‌ಗಳನ್ನು ಬಿಜೆಪಿ ಕಳೆದುಕೊಂಡಿದೆ. ಮೀಸಲಾತಿ ವಿಷಯದಲ್ಲಿ ಸರ್ಕಾರದಿಂದಲೇ ವಂಚನೆಗೆ ಒಳಗಾದ ಒಕ್ಕಲಿಗ, ಲಿಂಗಾಯತ ಹಾಗೂ ಎಸ್ಸಿ–ಎಸ್ಟಿ ಸಮುದಾಯಗಳನ್ನೇ ಬಿಜೆಪಿ ಕಳೆದುಕೊಂಡಿದೆ. ವಂಚನೆ ಹಾಗೂ ದ್ರೋಹಕ್ಕೂ ಒಂದು ಮಿತಿ ಇರುತ್ತದೆ. ಆದರೆ, ಬಿಜೆಪಿ ನಿರ್ಭೀತಿಯಿಂದ ವಂಚನೆ ಮುಂದುವರೆಸಿದೆ ಎಂದು ಡಿ.ಕೆ.ಶಿವಕುಮಾರ್ ಆರೋಪಿಸಿದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದರು. ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಇದ್ದಾರೆ.

ರಕ್ತದಲ್ಲಿ ಬರೆದುಕೊಡುವೆ

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್‌ಗೆ ಪ್ರಚಂಡ ಗೆಲುವು ಲಭಿಸಲಿದೆ. ಶೇ.40ರಷ್ಟು ಕಮಿಷನ್ ಸರ್ಕಾರಕ್ಕೆ 40 ಸೀಟು ಮಾತ್ರ ದೊರೆಯುತ್ತದೆ. ಬಡವರ ಹಾಗೂ ರಾಜ್ಯ ಹಿತ ಬಯಸುವ ಕಾಂಗ್ರೆಸ್‌ಗೆ 150 ಸ್ಥಾನ ದೊರೆಯುತ್ತದೆ. ಇದನ್ನು ನಾನು ನನ್ನ ರಕ್ತದಲ್ಲಿ ಬರೆದು ಕೊಡುತ್ತೇನೆ. ಮೇ 13 ಬಿಜೆಪಿ ಸರ್ಕಾರದ ಶವಯಾತ್ರೆ ನಡೆಯುತ್ತದೆ. ವೀರಶೈವ ಹಾಗೂ ಲಿಂಗಾಯತರ ಬಗ್ಗೆ ಮಾತನಾಡುವ ಬಿಜೆಪಿ ನಾಯಕರು ಅದೇ ಸಮುದಾಯಕ್ಕೆ ಸೇರಿದ ಇಬ್ಬರು ನಾಯಕರಾದ ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿಗೆ ದ್ರೋಹ ಬಗೆದಿದ್ದಾರೆ. ಆ ಇಬ್ಬರು ನಾಯಕರನ್ನು ಕಾಂಗ್ರೆಸ್ ಗೌರವಯುತವಾಗಿ ನಡೆಸಿಕೊಳ್ಳುತ್ತಿದೆ. ನನ್ನ ಧ್ವನಿ ಅಡಗಿಸಲು ಇಡಿಯಿಂದ ನೋಟಿಸ್ ನೀಡಿ ಕಿರುಕುಳ ನೀಡಲಾಗುತ್ತಿದೆ. ನನ್ನ ವಿರುದ್ಧ ಬಿಜೆಪಿ ಕುತಂತ್ರ ಹಾಗೂ ಷಡ್ಯಂತ್ರವನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಅವರು ಏನೇ ಮಾಡಿದರೂ ಜನರ ಆಶೀರ್ವಾದ ನನ್ನ ಮೇಲಿದೆ. **–ಡಿ.ಕೆ.ಶಿವಕುಮಾರ್**

ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ಸಿದ್ದರಾಮಯ್ಯ ಕೊಡುಗೆ ಅಪಾರ

ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಅಭಿಮತ



ಮೈಸೂರು, ಏ.26 (ಎಂಟಿವೈ)– ಮೈಸೂರಿನ ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ಬುಧವಾರ ಬೆಂಬಗಲಿರೊಂದಿಗೆ ಪಾದಯಾತ್ರೆ ನಡೆಸಿ, ಮನೆ ಮನೆಗೆ ತೆರಳಿ ಮತ ಯಾಚಿಸಿದ ಬಳಿಕ ಮಾತನಾಡಿದ ಅವರು, ಮೈಸೂರಿನವರೇ ಆಗಿರುವ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಮೈಸೂರಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಕೊಡುಗೆ ನೀಡಿದ್ದಾರೆ. ಮೈಸೂರಿನ ಬಗ್ಗೆ ಇದ್ದ ಅಪಾರ ಪ್ರೀತಿಯಿಂದಾಗಿ ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವ ಮೂಲಕ ಮಹಾರಾಣಿ ವಾಣಿಜ್ಯ ಕಾಲೇಜು ಮತ್ತು ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್, ಜಯದೇವ ಹೃದ್ರೋಗ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಜಿಲ್ಲಾ ಆಸ್ಪತ್ರೆ, ಆಯುರ್ವೇದಿಕ್ ಆಸ್ಪತ್ರೆ, ನೆಫ್ರೋಲಜಿ ವಿಭಾಗ, ಜಲದರ್ಶಿನಿ ಗೆಸ್ಟ್ ಹೌಸ್ ನೂತನ ಕಟ್ಟಡ, ಹೊಸ ಕೋರ್ಟ್ ಕಟ್ಟಡ, ರಸ್ತೆಗಳ ಅಭಿವೃದ್ಧಿ, ಇನ್ನೂ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಈ ಅಭಿವೃದ್ಧಿ ಕಾರ್ಯಕ್ರಮಗಳೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿವೆ ಎಂದರು.

ಈ ವೇಳೆ ಮಾಜಿ ಉಪಮೇಯರ್ ಮಹಾದೇವು, ಪಕ್ಷದ ವಾರ್ಡ್ ಅಧ್ಯಕ್ಷ ಮಂಜುನಾಥ್, ಚಿಕ್ಕಹನಸೋಗೆ ಪಾಲಾಕ್ಷ, ಕುರುಬಾರಳ್ಳಿ ಪ್ರಕಾಶ, ರವಿ, ಎಸ್.ಆರ್.ನಾಗೇಂದ್ರ, ಹನುಮಂತೇಶ್, ಕುಮಾರ್, ಮೋಹನ್, ಅರುಣ್‌ಕುಮಾರ್, ಡೆಲ್ಲಿ ರವಿ, ಗುರು, ರಾಕೇಶ್, ವಿಜಯ್, ಮಂಜುಳಾ ಲಕ್ಷ್ಮಿನಾರಾಯಣ್ ಹಾಜರಿದ್ದರು.

> “ರಾಜ್ಯದಲ್ಲಿರುವ ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಕಾಲ ಕೂಡಿ ಬಂದಿದೆ. ಕಳೆದ 5 ವರ್ಷದಲ್ಲಿ ಚಾಮರಾಜ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಸಿದ್ದರಾಮಯ್ಯ ಅವಧಿಯಲ್ಲಿ ನಿರ್ಮಾಣವಾದ ಬೃಹತ್ ಆಸ್ಪತ್ರೆಗಳಿಲ್ಲದಿದ್ದರೆ ಕೋವಿಡ್ ಸಮಯದಲ್ಲಿ ದೊಡ್ಡ ದುರಂತ ನಡೆಯುತ್ತಿತ್ತು ಇದನ್ನು ಜನ ಅರ್ಥ ಮಾಡಿಕೊಂಡಿದ್ದಾರೆ. ಇದರಿಂದ ಚಾಮರಾಜ ಕ್ಷೇತ್ರದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಕ್ಕಾಗಿ ಈ ಬಾರಿ ಕಾಂಗ್ರೆಸ್ ಬೆಂಬಲಿಸುವ ಮೂಲಕ ನನ್ನನ್ನು ಆಶೀರ್ವದಿಸಿ. **–ಹರೀಶ್‌ಗೌಡ**

ಮತ ವಿಭಜಿಸಿ ಸಿದ್ದರಾಮಯ್ಯ ಮಣಿಸಲು ಹುನ್ನಾರ

ಕಾಂಗ್ರೆಸ್ ಬೆಂಬಲಿಸಲು ಮತದಾರರಲ್ಲಿ ದಸಂಸ ಮುಖಂಡ ಮನವಿ



ಮೈಸೂರು,ಏ.26(ಪಿಎಂ)–ಮತ ವಿಭಜಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಣಿಸಲು ಹುನ್ನಾರ ನಡೆಸಲಾಗುತ್ತಿದೆ. ಹಾಗಾಗಿ ಮತದಾರರು ಯಾವುದಕ್ಕೂ ಮರುಳಾಗದೇ ಕಾಂಗ್ರೆಸ್ ಬೆಂಬಲಿಸಬೇಕೆಂದು ದಲಿತ ಸಂಘರ್ಷ ಸಮಿತಿ ಮುಖಂಡ ದೇವಗಳ್ಳಿ ಸೋಮಶೇಖರ್ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಕೋಮುವಾದದ ಕಪಿಮುಷ್ಟಿಯಲ್ಲಿ ಸಿಲುಕಿ ನಲುಗುತ್ತಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಕೋಮುವಾದಿ ಪಕ್ಷ ಸೋಲಿಸಬೇಕೆಂದು ದಲಿತ ಸಂಘಟನೆಗಳು ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಬೆಂಬಲಿಸಿವೆ ಎಂದರು.

ಈ ನಡುವೆ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯರನ್ನು ಸೋಲಿಸಲು ಮತ ವಿಭಜನೆಯ ಕುತಂತ್ರ ನಡೆಸಲಾಗುತ್ತಿದೆ. ಕಳೆದ ಬಾರಿಯ ಅಭ್ಯರ್ಥಿಯನ್ನೇ ಈಗಲೂ ಕಣಕ್ಕಿಳಿಸಿದ್ದ ಜೆಡಿಎಸ್ ಕೊನೆ ಕ್ಷಣದಲ್ಲಿ ದಲಿತ ವರ್ಗದ ಡಾ.ಭಾರತಿಶಂಕರ್ ಅವರನ್ನು ಕಣಕ್ಕಿಳಿಸಿದ್ದು, ಆ ಮೂಲಕ ಜೆಡಿಎಸ್, ಬಿಜೆಪಿಯೊಂದಿಗೆ ಶಾಮೀಲಾಗಿ ಕಾಂಗ್ರೆಸ್ ಅಭ್ಯರ್ಥಿ ಸೋಲಿಸಲು ಹುನ್ನಾರ ನಡೆಸುತ್ತಿದೆ. ಬಿಎಸ್‌ಪಿ ಕೂಡ ಇದರಿಂದ ಹೊರತಾಗಿಲ್ಲ ಎಂದು ದೂರಿದರು.

ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸಿಕೊಳ್ಳಬೇಕೆಂಬ ಬದ್ಧತೆ ಈ ಪಕ್ಷಗಳಿಗೆ ಇದ್ದಿದ್ದರೆ ಇಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಬಾರದಿತ್ತು. ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ದಿಟ್ಟ ಹೋರಾಟ ನಡೆಸುತ್ತಿದ್ದಾರೆ. ಇವರನ್ನು ಮಣಿಸಲು ಬಿಜೆಪಿಯವರು ವಾಮಮಾರ್ಗ ಹಿಡಿದಿದ್ದಾರೆ ಎಂದು ಆಪಾದಿಸಿದರು.

ಮುಖಂಡ ಸೋಸಲೆ ಮಹೇಶ್ ಮಾತನಾಡಿ, ಬಿಎಸ್‌ಪಿ ರಾಜ್ಯಾಧ್ಯಕ್ಷ ಡಾ.ಎಂ.ಕೃಷ್ಣಮೂರ್ತಿ ಪಕ್ಷದ ಮತಬ್ಯಾಂಕ್ ಉಳಿಸಿಕೊಳ್ಳಲು ವರುಣದಲ್ಲಿ ಸ್ಪರ್ಧಿಸಿರುವುದಾಗಿ ಹೇಳಿಕೊಂಡಿದ್ದಾರೆ. ಅದು ನಿಜವೇ ಆಗಿದ್ದರೆ ಕ್ಷೇತ್ರದ ಬಿಎಸ್‌ಪಿ ಕಾರ್ಯಕರ್ತರಿಗೆ ಟಿಕೆಟ್ ನೀಡಿ ಮತ ಬ್ಯಾಂಕ್ ಉಳಿಸಿಕೊಳ್ಳಬಹುದಿತ್ತು. ಆದರೆ ದಲಿತ ಮತಗಳನ್ನು ವಿಭಜಿಸಿ ಬಿಜೆಪಿಗೆ ಅನುಕೂಲ ಮಾಡಿಕೊಡಲು ಹೊರಟಿರುವುದು ಇಲ್ಲಿ ಗುಟ್ಟಾಗಿ ಉಳಿದಿಲ್ಲ ಎಂದು ಆರೋಪಿಸಿದರು. ಮೈಸೂರು ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ಮುಖಂಡರಾದ ರವಿಕುಮಾರ್, ಶಿವಣ್ಣ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರು ಕೆ.ಆರ್.ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಸುಂಡಹಳ್ಳಿ ಸೋಮಶೇಖರ್ ಬುಧವಾರ ಅಗ್ರಹಾರ, ರಾಮಾನುಜ ರಸ್ತೆ, ಜೆ.ಪಿ.ನಗರ, ಗೌರಿಶಂಕರನಗರ, ಉತ್ತರಾದಿ ಮಠದ ರಸ್ತೆಗಳ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ವೀರಶೈವ ಮುಖಂಡರಾದ ಶ್ರೀಕಂಠಸ್ವಾಮಿ, ಹದಿನಾರು ಮಹೇಶ್, ಪುಟ್ಟಸ್ವಾಮಿ, ಶಿವಕುಮಾರ್ ಇತರರಿದ್ದರು.

ರಮೇಶ್‌ಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಕೆ.ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಎಚ್.ಎನ್.ರಮೇಶ್ ತುಮಕೂರು ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿಧನ



ಎಸ್.ಎಂ.ಗಂಗಾಧರಯ್ಯ

ಮೈಸೂರು, ಏ. 26– ಮೈಸೂರಿನ ಗೌರಿಶಂಕರನಗರ ನಿವಾಸಿ ಹಾಗೂ ಮಾಜಿ ಯೋಧ ಎಸ್.ಎಂ.ಗಂಗಾಧರಯ್ಯ (90) ಮಂಗಳವಾರ ನಿಧನರಾದರು. ಮೂಲತಃ ಹುಣಸೂರಿನ ಬ್ರಾಹ್ಮಣ ಬೀದಿ ನಿವಾಸಿಯಾದ ಇವರು ಪತ್ನಿ, ರವೀಶ್ (ಗುಂಟೂರಿನ ಐಟಿಸಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್) ಸೇರಿದಂತೆ ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಲಲಿತಾದ್ರಿಪುರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನಸೂರೆಗೊಂಡ ರಿದಂ ಬೀಟ್ ಅಂಡ್ ಸೋಲ್ ಲೈವ್ ಮ್ಯೂಸಿಕ್



ಮೈಸೂರಿನ ಶಾರದಾದೇವಿನಗರದ ನಿನಾದ್ ಮ್ಯೂಸಿಕಲ್ ಟ್ರಸ್ಟ್ ಹಾಗೂ ಫಿಲಂ ಹಿಟ್ಸ್ ಗ್ರೂಪ್ ವತಿಯಿಂದ ಎ.ಆರ್.ರೆಹಮಾನ್, ಆರ್.ಡಿ.ಬರ್ಮನ್, ಜಿ.ಕೆ.ವೆಂಕಟೇಶ್ ಹಾಗೂ ಬಪ್ಪಿಲಹರಿ ಅವರ ಆಯ್ದ ಚಲನಚಿತ್ರಗಳ ಲೈವ್ ಮ್ಯೂಸಿಕ್ 'ರಿದಂ ಬೀಟ್ ಅಂಡ್ ಸೋಲ್' ಕಾರ್ಯಕ್ರಮವನ್ನು ಗಾನಭಾರತಿ (ರಮಾ ಗೋವಿಂದ ಕಲಾ ವೇದಿಕೆ)ಯಲ್ಲಿ ಏರ್ಪಡಿಸಲಾಗಿತ್ತು. ಚಿತ್ರದಲ್ಲಿ ಟ್ರಸ್ಟ್ ಸಂಸ್ಥಾಪಕ, ಖ್ಯಾತ ಕೊಳಲು ವಾದಕ ನೀತು ನಿನಾದ್, ಕೀಬೋರ್ಡ್ ವಾದಕ ಎ.ಎಸ್.ಪ್ರಸನ್ನಕುಮಾರ್, ದೇವಿಕಾ, ಡಾ.ಕುಲದೀಪ್, ಮಹೇಶ್‌ಕುಮಾರ್, ಮನ್ ಮೋಹನ್‌ರಾಜ್, ಸತ್ಯನಾರಾಯಣ, ಸುರೇಶ್‌ಚಂದ್ರ (ಸೂರಿ), ವಕೀಲ ಹಾಗೂ ಗಾಯಕ ಚಂದ್ರಶೇಖರ್ (ಶೇಖಿ) ಇನ್ನಿತರರಿದ್ದಾರೆ.

ಇಂದು ಎಸ್‌ಡಿಎಂ, ಎಂಎಂಕೆ ವಿದ್ಯಾಲಯದಲ್ಲಿ ಸ್ವರ್ಣಾಮೃತ ಪ್ರಾಶನ



ಮೈಸೂರು,ಏ.26–ಮೈಸೂರಿನ ಬಲ್ಲಾಳ್ ವೃತ್ತದಲ್ಲಿರುವ ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯದಲ್ಲಿ ನಾಳೆ(ಏ.27) ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಸ್ವರ್ಣಾಮೃತ ಪ್ರಾಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿವರಗಳಿಗಾಗಿ ಡಾ.ಗುರುರಾಜ ಭಟ್ ಅವರ ಮೊ.988 0856916 ಮೂಲಕ ಸಂಪರ್ಕಿಸಬಹುದು.

ಕೆ.ಆರ್.ನಗರ ಕ್ಷೇತ್ರದ ವೀಕ್ಷಕರಿಂದ ಸಭೆ: ನ್ಯಾಯಸಮ್ಮತ ಚುನಾವಣೆಗೆ ಅಗತ್ಯ ಕ್ರಮ



ಮೈಸೂರು, ಏ.26–ಭಾರತ ಚುನಾವಣಾ ಆಯೋಗದಿಂದ ಕೆಆರ್.ನಗರ ವಿಧಾನಸಭಾ ಕ್ಷೇತ್ರದ ವೀಕ್ಷಕರಾಗಿ ನೇಮಕಗೊಂಡಿರುವ ಯಶು ರುಸ್ತುಂ ಕೆ.ಆರ್.ನಗರ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಚುನಾವಣಾ ಕಾರ್ಯಗಳ ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಮ್ಮುಖದಲ್ಲಿ ಇಂದು ಸಭೆ ನಡೆಸಿದರು.

ಯಾವುದೇ ಲೋಪ ಉಂಟಾಗದಂತೆ ಶಾಂತಿಯುತ ಚುನಾವಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಚುನಾವಣಾ ಕೆಲಸವನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಇದೇ ವೇಳೆ ಕ್ಷೇತ್ರ ವ್ಯಾಪ್ತಿಯಲ್ಲಿ ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಜಿಲ್ಲಾಧಿಕಾರಿಗಳು ವೀಕ್ಷಕರಿಗೆ ವಿವರಿಸಿದರು. ಜಿಲ್ಲೆಯಲ್ಲಿ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಸಹಕರಿಸಬೇಕು. ಚುನಾವಣಾ ಆಯೋಗದಿಂದ ನೀಡಲಾಗಿರುವ ನಿರ್ದೇಶನದಂತೆ ಮತಗಟ್ಟೆಗಳಲ್ಲಿ ಅಗತ್ಯ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ, ಟೇಬಲ್ ಇನ್ನಿತರ ವ್ಯವಸ್ಥೆಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಸೆಕ್ಟರ್ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಕೆಆರ್.ನಗರ ಚುನಾವಣಾಧಿಕಾರಿ ಸುಪ್ರಿಯಾ, ತಹಶೀಲ್ದಾರ್ ಸಂತೋಷ್, ಸೆಕ್ಟರ್ ಅಧಿಕಾರಿಗಳು ಉಪಸ್ಥಿತರಿದ್ದರು.

ಚೆಕ್‌ಪೋಸ್ಟ್‌ಗಳ ಕಾರ್ಯವೈಖರಿ ಪರಿಶೀಲಿಸಿದ ಡಿಸಿ

ಅಕ್ರಮ ಚಟುವಟಿಕೆ ತಡೆಗೆ ಕಟ್ಟಾಜ್ಞೆ



ಮೈಸೂರು, ಏ.26–ವಿಧಾನಸಭಾ ಚುನಾವಣಾ ಸಂಬಂಧ ಜಿಲ್ಲೆಯಲ್ಲಿ ಸ್ಥಾಪಿಸಿರುವ ಚೆಕ್‌ಪೋಸ್ಟ್‌ಗಳಿಗೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಚುನಾವಣಾ ಸಂಬಂಧ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಜಿಲ್ಲೆಯಲ್ಲಿ ಅನೇಕ ಕಡೆ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಇವುಗಳ ಕಾರ್ಯವೈಖರಿ ಕುರಿತಂತೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಅವರು ಹುಣಸೂರು ವಿಧಾನಸಭಾ ಕ್ಷೇತ್ರದ ಜಾಬಗೆರೆ ಗೇಟ್ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ, ಪರಿಶೀಲಿಸಿದರು.

ಚುನಾವಣೆ ನೀತಿಸಂಹಿತೆ ಜಾರಿಯಲ್ಲಿದ್ದು, ಈ ವೇಳೆ ಜನರಿಗೆ ಆಮಿಷವೊಡ್ಡಲು ಹಲವು ಬಗೆಯಲ್ಲಿ ಪ್ರಯತ್ನಗಳು ನಡೆಯುವ ಸಾಧ್ಯತೆಗಳಿರುತ್ತವೆ. ಅಕ್ರಮವಾಗಿ ಹಣ ಹಾಗೂ ಇನ್ನಿತರೆ ಪದಾರ್ಥಗಳ ಸಾಗಣೆ ಮಾಡುವ ಸಂಭವವಿರುತ್ತದೆ. ಹೀಗಾಗಿ ಕಟ್ಟುನಿಟ್ಟಿನ ರೀತಿ ವಾಹನಗಳ ತಪಾಸಣೆ ನಡೆಸಬೇಕು. ಈ ವೇಳೆ ವಿಡಿಯೋ ಚಿತ್ರೀಕರಣ ಮಾಡಬೇಕು. ಯಾವುದೇ ಸಾಮಗ್ರಿಗಳ ಸಾಗಣೆ ಬಗ್ಗೆ ಸಂಶಯ ಬಂದಲ್ಲಿ ಸಮಗ್ರ ತಪಾಸಣೆ ನಡೆಸಿ, ಅಕ್ರಮ ಕಂಡುಬಂದಲ್ಲಿ ಕೂಡಲೇ ಕ್ರಮ ಕೈಗೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಜನ ಅವಕಾಶ ನೀಡುವ ವಿಶ್ವಾಸ



ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್ ನೇತೃತ್ವದಲ್ಲಿ ಎನ್.ಆರ್. ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ತಜಮ್ಮುಲ್ ಅಹ್ಮದ್ ಖಾನ್ ಕಾಂಗ್ರೆಸ್ ಸೇರ್ಪಡೆಗೊಂಡರು.

ಮೈಸೂರು, ಏ.26(ಜಿಎ)–ಇಡೀ ರಾಜ್ಯ ಬದಲಾವಣೆ ಬಯಸಿದ್ದು, ಬಿಜೆಪಿ ದುರಾಡಳಿತಕ್ಕೆ ಬೇಸತ್ತಿರುವ ಜನತೆ ಈ ಬಾರಿ ಕಾಂಗ್ರೆಸ್‌ಗೆ ಅವಕಾಶ ನೀಡಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್ ತಿಳಿಸಿದರು.

ನಗರದ ಬನ್ನಿಮಂಟಪದಲ್ಲಿ ನರಸಿಂಹರಾಜ ಕ್ಷೇತ್ರದ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಾದ್ಯಂತ ಕಾಂಗ್ರೆಸ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಜನರಿಗೆ ಕಾಂಗ್ರೆಸ್ ಮೇಲೆ ಒಲವು ಹೆಚ್ಚಿದೆ. ಈ ಬಾರಿ ಚುನಾವಣೆಯಲ್ಲಿ 140ಕ್ಕೂ ಅಧಿಕ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದು, ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್‌ನಲ್ಲಿ ಕೆಲ ಬೆಳವಣಿಗೆಯಿಂದ ಬೇಸತ್ತು ನಾನು ಪಕ್ಷವನ್ನು ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದು, ನನ್ನ ಈ ನಿರ್ಧಾರವನ್ನು ಬೆಂಬಲಿಸಿ, ಅನೇಕರು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತರೂ ನಿರಂತರವಾಗಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷವನ್ನು ಬಲಪಡಿಸುವ ಕೆಲಸವನ್ನು ಮಾಡಿಕೊಂಡು ಬಂದಿದ್ದೆ. ಆದರೆ, ಕಳೆದ ಆರು ತಿಂಗಳ ಹಿಂದೆ ಮಕ್ಕಳಿಗೆ ಚಾಕ್ಲೇಟ್ ನೀಡಿದ ಹಾಗೇ ಕಂಡ ಕಂಡವರಿಗೆ ಪಕ್ಷದ ಹುದ್ದೆಗಳನ್ನು ನೀಡುವ ಮೂಲಕ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಎನ್.ಆರ್ ಕ್ಷೇತ್ರದಲ್ಲಿ ಪಕ್ಷವನ್ನು ಛಿದ್ರಗೊಳಿಸಿದರು. ಈ ಎಲ್ಲಾ ಬೆಳವಣಿಗೆಗಳಿಂದ ಬೇಸರವಾಗಿ ನಾನು ಪಕ್ಷ ತೊರೆದೆ ಎಂದರು.

ಇದೇ ವೇಳೆ ನರಸಿಂಹರಾಜ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ತಜಮ್ಮುಲ್ ಅಹ್ಮದ್ ಖಾನ್, ಕಾಂಗ್ರೆಸ್ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಅಜೀಜ್ ಸೇಠ್ ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ಉಪಾಧ್ಯಕ್ಷ ಶೈನ್‌ಶಾ, ಕಾರ್ಯದರ್ಶಿ ವಸೀಂ, ಸಾಹುಕಾರ್ ಚನ್ನಯ್ಯ ಬ್ಲಾಕ್ ಅಧ್ಯಕ್ಷ ಮಂಜುನಾಥ್, ಶೌಕತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.4.2023 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 27.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 99ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 7 ಗಂಟೆಗೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಗರಡಿ ಬೀದಿಯಿಂದ ಹೊಸಬೀದಿ 1 ರಿಂದ 5ನೇ ಕ್ರಾಸ್‌ವರೆಗೆ, ಹಳೆ ಮಾಡಲ್ ಹೌಸ್, ಎಸ್‌ಆರ್‌ಟಿ ಗ್ಯಾರೇಜ್ ಮಾರ್ಗವಾಗಿ ನ್ಯೂ ಮಾಡಲ್ ಹೌಸ್‌ನವರೆಗೆ ಭಕ್ತಾದಿಗಳ ಪೂಜೆ ಸ್ವೀಕರಿಸಿ ಗಣಪತಿ ದೇವಸ್ಥಾನದ ಮಾರ್ಗವಾಗಿ ದೇವಸ್ಥಾನ ತಲುಪಿದ ನಂತರ ಮಹಾಮಂಗಳಾರತಿ, ಸ್ಥಳ: ಶ್ರೀ ರೇಣುಕಾದೇವಿ ದೇವಸ್ಥಾನ, ಇಟ್ಟಿಗೆಗೂಡು.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8ರಿಂದ.

■ **ಆದರ್ಶ ಸೇವಾ ಸಂಘ:** ಸಾಮೂಹಿಕ ಧರ್ಮೋಪನಯನ ಮಹೋತ್ಸವ, ಆಚಾರ್ಯತ್ರಯ ಜಯಂತಿ, ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಋಗ್ವೇದ ಪುರಸ್ಸರವಾಗಿ ಸಾಮೂಹಿಕ ಧರ್ಮೋಪನಯನ, ಸ್ಥಳ: ಶ್ರೀ ಮಹಾಜನ ಸಭಾ, ಶ್ರೀ ಸೀತಾರಾಘವ ಪ್ರಾರ್ಥನಾ ಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.25ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ, ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ. ಸೋಮಶೇಖರ್, ಜೆಡಿಎಸ್ ಅಭ್ಯರ್ಥಿ ಕೆ.ವಿ. ಮಲ್ಲೇಶ್ ಅವರೊಂದಿಗೆ ಸಂವಾದ, ಸ್ಥಳ: ಸಂಘದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸ ಮುರಳೀಧರದಾಸ್ ಅವರಿಂದ ಶ್ರೀನಿವಾಸ ಕಲ್ಯಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ “ಒಂದೇ ಕಥೆ” ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಜಿ. ಪುಷ್ಪಲತಾ, ಎಂ. ರಾಘವೇಂದ್ರ, ವ್ಯಾಖ್ಯಾನ–ಡಾ.ಸಿ. ನಾಗಣ್ಣ, 8.30 ಹಾಡು ಹೇಳಿದ ಕಥೆ, 8.45 ಪಂಪನ ಪೆಂಪು, 9.00 ವೀಣೆಯ ಬೆಡಗು ನಾದದ ಸೊಬಗು, 9.30 ಚುನಾವಣೆ 2023 –ವಿಧಾನಸಭಾ ಕ್ಷೇತ್ರ ಪರಿಚಯ, 10.00 ಹೆಚ್.ಟಿ. ಹರೀಶ್ ಪಾಂಡವ್– ಸ್ಯಾಕ್ಸೋಫೋನ್, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 1.00ರಂಗಗೀತೆಗಳು– ಸಂಪೂರ್ಣ ರಾಮಾಯಣ ನಾಟಕದ ಹಾಡುಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ, 5.00 ಮಿಶ್ರ ಮಾಧುರ್ಯ, 6.55 ಕೃಷಿರಂಗ–ಕಿಸಾನ್‌ವಾಣಿ–ಟೊಮ್ಯಾಟೋ ಬೆಳೆಯಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕುರಿತು ಡಾ.ಬಿ. ಪಂಪನಗೌಡ ಅವರೊಂದಿಗೆ ಸಂದರ್ಶನ, 8.15 ಯುವವಾಣಿ –ಅಂತಾರಾಷ್ಟ್ರೀಯ ಶಬ್ದಮಾಲಿನ್ಯ ಜಾಗೃತಿ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ. ನಡೆಸಿಕೊಡುತ್ತಾರೆ ಮೈಸೂರಿನ ಜೆ.ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್‌ನ ವಿದ್ಯಾರ್ಥಿಗಳು, 10.00 ನಾಟಕ “ಬೇರು” ರಚನೆ– ಕೃಷ್ಣಮೂರ್ತಿ ಕವತ್ತಾರ್ ನಿರ್ಮಾಣ ಉಮೇಶ್ ಎಸ್.ಎಸ್.

ಪ್ರಧಾನಿ ಮೋದಿ ಅವರ ಅಭಿವೃದ್ಧಿ ನೋಡಿ ಬಿಜೆಪಿ ಬೆಂಬಲಿಸಿ

ಚಾಮರಾಜದಲ್ಲಿ ನಾಗೇಂದ್ರ ಪರ ಯುಪಿ ಡಿಸಿಎಂ ಬ್ರಜೇಶ್ ಪಾಠಕ್ ಚುನಾವಣಾ ಪ್ರಚಾರ



ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಬಿಜೆಪಿ ಮಹಿಳಾ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಮನವಿ ಮಾಡಿದರು. ಶಾಸಕ ಎಲ್.ನಾಗೇಂದ್ರ ಇತರರಿದ್ದಾರೆ.

ಮೈಸೂರು, ಏ.26(ಆರ್‌ಕೆ)–ಪ್ರಧಾನಿ ನರೇಂದ್ರ ಮೋದಿ ಅವರು ದೇಶ ಹಾಗೂ ರಾಜ್ಯದ ಅಭಿವೃದ್ಧಿಗೆ ನೀಡಿದ ಭಾರೀ ಯೋಜನೆಗಳಿಗೆ ಪ್ರತಿಯಾಗಿ ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಮನವಿ ಮಾಡಿದರು.

ಮೈಸೂರಿನ ವಿಜಯನಗರದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಬಿಜೆಪಿ ಮಹಿಳಾ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ, ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ, ರೈಲು ನಿಲ್ದಾಣಗಳ ಅಭಿವೃದ್ಧಿ ಸೇರಿದಂತೆ ಹಲವು ಯೋಜನೆಗಳನ್ನು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ನೀಡಿದೆ ಎಂದರು.

ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಡಬಲ್ ಎಂಜಿನ್ ಸರ್ಕಾರ ಮಹತ್ವದ ಕೊಡುಗೆ ನೀಡಿದ್ದು, ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ಅತೀ ಹೆಚ್ಚು ಅನುದಾನ ತಂದು, ರಸ್ತೆ, ಚರಂಡಿ, ಶಾಲಾ–ಕಾಲೇಜು ಕಟ್ಟಡಗಳ ರಿಪೇರಿ, ವಿದ್ಯಾರ್ಥಿನಿಲಯಗಳು, ಗ್ರಂಥಾಲಯ ನಿರ್ಮಾಣ, ದೇವಸ್ಥಾನಗಳ ಜೀರ್ಣೋದ್ಧಾರ, ಮಹಿಳಾ ಸ್ವ–ಸಹಾಯ ಸಂಘಗಳ ಚಟುವಟಿಕೆಗಳಿಗೆ ಪ್ರೋತ್ಸಾಹ, ಕೋವಿಡ್ ಸಂಕಷ್ಟದ ಸಂದರ್ಭ ನೆರವು ಹಾಗೂ ಲಸಿಕೆ ಸೇರಿದಂತೆ ಹಲವು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರನ್ನು ಬೆಂಬಲಿಸಿ, ಮತ್ತೊಮ್ಮೆ ಆರಿಸಿ ಕಳುಹಿಸುವಂತೆಯೂ ಮನವಿ ಮಾಡಿದರು.

ಅಭ್ಯರ್ಥಿ ಎಲ್.ನಾಗೇಂದ್ರ ಅವರು ಮಾತನಾಡಿ, ಸರ್ಕಾರ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿ 950 ಕೋಟಿ ರೂ. ಹಣ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡಿದ್ದೇನೆ. ಮಹಿಳೆಯರು, ಮಕ್ಕಳು, ಬಡವರು, ಹಿಂದುಳಿದ ವರ್ಗದವರು, ದಲಿತ ಸಮುದಾಯಗಳ ಕ್ಷೇಮಾಭಿವೃದ್ಧಿಗಾಗಿ ಕಳೆದ ಐದು ವರ್ಷ ನಿರಂತರವಾಗಿ ಕೆಲಸ ಮಾಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಸಾಕಷ್ಟು ಅನುದಾನ ನೀಡಿದೆ. ನನ್ನ ಜನಪರ ಕೆಲಸ ನೋಡಿರುವ ನೀವು ಈ ಬಾರಿಯೂ ಆಶೀರ್ವದಿಸಿ, ಮುಂದೆ ಇನ್ನೂ ಹೆಚ್ಚಿನ ರೀತಿ ಸೇವೆ ಮಾಡಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು. ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಸೇರಿದಂತೆ ಹಲವು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

ಈ ಬಾರಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಖಚಿತ

- ದೆಹಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೀವ್ ಬಬ್ಬರ್ ವಿಶ್ವಾಸ
- ಮೈಸೂರಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ



ಮೈಸೂರಿನ ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ದೆಹಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೀವ್ ಬಬ್ಬರ್ ಮಾತನಾಡಿದರು. ಚಿತ್ರದಲ್ಲಿ ಎನ್.ಆರ್. ಕ್ಷೇತ್ರದ ಅಭ್ಯರ್ಥಿ ಸಂದೇಶ್ ಸ್ವಾಮಿ, ಮುಖಂಡರಾದ ಬಿ.ಪಿ.ಮಂಜುನಾಥ್, ಜಯಪ್ರಕಾಶ್ ಅವರನ್ನು ಕಾಣಬಹುದು.

ಮೈಸೂರು,ಏ.26(ಎಂಟಿವೈ)– ಬಿಜೆಪಿ ಸರ್ಕಾರದ ಸಾಧನೆ ಕಂಡು ಈ ಬಾರಿ ಕರ್ನಾಟಕದ ಜನತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಉತ್ಸುಕರಾಗಿದ್ದು, ಈ ಬಾರಿ ಬಿಜೆಪಿಗೆ 135ಕ್ಕೂ ಹೆಚ್ಚು ಸ್ಥಾನ ದೊರೆಯುತ್ತದೆ ಎಂದು ದೆಹಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೀವ್ ಬಬ್ಬರ್ ತಿಳಿಸಿದ್ದಾರೆ.

ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿರುವ ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಈಗಾಗಲೇ ಪಕ್ಷದ ವತಿಯಿಂದ ನಡೆಸಿದ ಆಂತರಿಕ ಸಮೀಕ್ಷೆಯಲ್ಲಿ ಜನರ ಒಲವು ಬಿಜೆಪಿ ಪರ ಇರುವುದು ದೃಢಪಟ್ಟಿದೆ. ರಾಜ್ಯದ ಜನತೆ ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಸಾಧನೆಯನ್ನು ಮೆಚ್ಚಿದ್ದಾರೆ. ಹಾಗಾಗಿ ಈ ಬಾರಿ 135 ಹೆಚ್ಚು ಸ್ಥಾನ ಬಿಜೆಪಿ ಪಾಲಾಗಲಿದೆ. ಬೇರೊಂದು ಪಕ್ಷದ ಬೆಂಬಲವಿಲ್ಲದೆ, ಬಿಜೆಪಿ ಸ್ವತಂತ್ರವಾಗಿ ಸರ್ಕಾರ ರಚಿಸಲಿದೆ ಎಂದರು.

ಕಾಂಗ್ರೆಸ್ ನಾಯಕರು ಎಷ್ಟೇ ಪ್ರಯತ್ನಿಸಿದರೂ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಈಗಾಗಲೇ ದೇಶದಲ್ಲಿ ಕಾಂಗ್ರೆಸ್ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಕರ್ನಾಟಕದಲ್ಲಿ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಹೋರಾಟವನ್ನು ನಡೆಸುತ್ತಿದೆ. ಆದರೆ ರಾಜ್ಯದ ಜನರು ಈ ಬಾರಿಯೂ ಕಾಂಗ್ರೆಸ್ ನಾಯಕರ ಅಧಿಕಾರಕ್ಕೆ ಬರುವ ಕನಸನ್ನು ನನಸು ಮಾಡುವುದಿಲ್ಲ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಇದ್ದಾಗ ಪ್ರತಿದಿನ ಕೇವಲ 2 ಕಿ.ಮೀ ರಸ್ತೆ ಮಾತ್ರ ಅಭಿವೃದ್ಧಿ ಆಗುತ್ತಿತ್ತು ಆದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಪ್ರತಿದಿನ 39 ಕಿಲೋ ಮೀಟರ್ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಬೆಂಗಳೂರು ಮೈಸೂರು ನಡುವೆ ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಿ ಜನರ ಸೇವೆಗೆ ಲೋಕಾರ್ಪಣೆ ಮಾಡಲಾಗಿದೆ. ಇದರಿಂದಾಗಿ ಮೈಸೂರು ಬೆಂಗಳೂರು ನಡುವಿನ ಪ್ರಯಾಣದ ಅವಧಿ ಇಳಿದಿದೆ. ಮೈಸೂರು ನಗರ ಅಭಿವೃದ್ಧಿಯಾಗುವುದಕ್ಕೆ ಅವಕಾಶವನ್ನು ಸರ್ಕಾರ ನೀಡಿದೆ ಎಂದು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ರಾಜ್ಯ ಬಿಜೆಪಿ ಸರ್ಕಾರವನ್ನು ಶೇ.40 ಕಮಿಷನ್ ಸರ್ಕಾರ ಎಂದು ಆರೋಪಿಸಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಅವರು ಭ್ರಷ್ಟಾಚಾರದ ಆರೋಪದಲ್ಲಿ ಜೈಲಿಗೆ ಹೋಗಿ ಬಂದು, ಈಗ ಬೇಲ್ ಪಡೆದು ಇದ್ದಾರೆ. ಇದೇ ರೀತಿ ಕಾಂಗ್ರೆಸ್‌ನ ಶೇ.50ರಷ್ಟು ನಾಯಕರು ಭ್ರಷ್ಟಾಚಾರದ ಆರೋಪದಲ್ಲಿ ಸಿಲುಕಿದ್ದಾರೆ. ಎಲ್ಲರೂ ಕೂಡ ಬೇಲ್ ಮೇಲಿದ್ದಾರೆ. ಉಳಿದ ಶೇ.50ರಷ್ಟು ನಾಯಕರ ಮೇಲೆ ಎಫ್‌ಐಆರ್ ಆಗಿದೆ. ಕಾಂಗ್ರೆಸ್ ಭ್ರಷ್ಟಾಚಾರ ಪಕ್ಷ ಎಂದು ತಿರುಗೇಟು ನೀಡಿದರು

ನೈತಿಕತೆ ಇಲ್ಲ: ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರ ರಾಜ್ಯ ಬಿಜೆಪಿ ಸರ್ಕಾರ ಒಂದೂವರೆ ಲಕ್ಷ ಕೋಟಿ ರೂ. ಲೂಟಿ ಮಾಡಿದೆ ಎಂದು ಆರೋಪಿಸಿದ್ದಾರೆ. ಆದರೆ ಅವರ ಪತಿ ರಾಬರ್ಟ್ ವಾದ್ರಾ ಕೂಡ ಭ್ರಷ್ಟಾಚಾರದ ಆರೋಪವನ್ನು ಎದುರಿಸುತ್ತಿದ್ದಾರೆ. ಬೇಲ್ ಮೇಲಿದ್ದಾರೆ. ಇದನ್ನು ಮರೆತು ಬಿಜೆಪಿ ಮೇಲೆ ಪ್ರಿಯಾಂಕಾ ಗಾಂಧಿ ಭ್ರಷ್ಟಾಚಾರದ ಆರೋಪ ಮಾಡುವುದಕ್ಕೆ ಯಾವ ನೈತಿಕತೆ ಇದೆ ಎಂದು ವಾಗ್ದಾಳಿ ನಡೆಸಿದರು. ಮುಸ್ಲಿಮರಿಗೆ ನೀಡಲಾಗಿದ್ದ ಶೇ.4ರಷ್ಟು ಮೀಸಲಾತಿಯನ್ನು ಬಿಜೆಪಿ ಸರ್ಕಾರ ರದ್ದುಪಡಿಸಿದೆ. ಈ ಸಮುದಾಯದವರಿಗೆ ಇಡಬ್ಲ್ಯುಎಸ್‌ನಲ್ಲಿ ಮೀಸಲಾತಿಯನ್ನು ನೀಡಿ ಅವರಿಗೂ ಕೂಡ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಟ್ಟಿದೆ. ಬಿಜೆಪಿ ಸರ್ಕಾರ ಎಂದರೆ ಸರ್ವರನ್ನು ಒಳಗೊಂಡ ಅಭಿವೃದ್ಧಿ ಮಾಡುವುದೇ ಕೆಲಸವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ, ಮುಖಂಡರಾದ ಬಿ.ಪಿ.ಮಂಜುನಾಥ್, ಜಯಪ್ರಕಾಶ್, ವಸಂತಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

> ಮೈಸೂರಿನ ಎನ್.ಆರ್.ಕ್ಷೇತ್ರದಲ್ಲಿ ಜನರು ಮೂಲ ಸೌಲಭ್ಯಗಳಿಲ್ಲದೆ ಸಂಕಷ್ಟದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ 5 ಬಾರಿ ಆಯ್ಕೆಯಾಗಿರುವ ಶಾಸಕ ತನ್ವೀರ್ ಸೇಠ್ ಜನರಿಂದ ದೂರ ಉಳಿದಿದ್ದಾರೆ. ಕೋವಿಡ್ ಸಮಯದಲ್ಲಿ ಜನರ ಸಂಕಷ್ಟಕ್ಕೆ ಸ್ಪಂದಿಸಲಿಲ್ಲ. ಕೇಂದ್ರ ಸರ್ಕಾರ ಬಡ ಜನರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲು ಬಿಡುಗಡೆ ಮಾಡಿರುವ ಅನುದಾನ ಬಳಸಿ, ಮನೆ ನಿರ್ಮಿಸಿ ಕೊಟ್ಟಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಸೌಲಭ್ಯಗಳನ್ನು ಜನರಿಗೆ ತಲುಪಿಸದೇ, ವಂಚಿಸಿದ್ದಾರೆ. ಹಾಗಾಗಿ ಕ್ಷೇತ್ರದ ಜನರು ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿ, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ. **–ರಾಜೀವ್ ಬಬ್ಬರ್**



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡರು ಬುಧವಾರ ತಮ್ಮ ಅಪಾರ ಬೆಂಬಲಿಗರೊಂದಿಗೆ ಕೋಟೆ ಹುಂಡಿ, ಎಡಹಳ್ಳಿ, ಧನಗಳ್ಳಿ, ಕೆಂಚಲಗೂಡು, ಡಿ.ಸಾಲುಂಡಿ, ಕೆರೆಹುಂಡಿ, ದೊಡ್ಡಹುಂಡಿ, ದಾರಿಪುರ, ಬರಡನಪುರ, ಜಯಪುರ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರ ನಡೆಸಿದರು. ಈ ವೇಳೆ ಸಾಲುಂಡಿ ಹಾಗೂ ರಾಮನಹುಂಡಿ ಗ್ರಾಮದ ಮುಖಂಡರು, ನೂರಾರು ಯುವಕರು, ಮಹಿಳೆಯರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಪ್ರಚಾರದ ವೇಳೆ ಸ್ಥಳೀಯ ಮುಖಂಡರು ಹಾಜರಿದ್ದರು.

ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗಾಗಿ ಪ್ರಚಾರ ಮಾಡುತ್ತೇನೆ: ಜೆಪಿ

ಮೈಸೂರು,ಏ.26(ಎಂಟಿವೈ)– ಹಲವು ಬಾರಿ ಟಿಕೆಟ್ ತ್ಯಾಗ ಮಾಡಿದ್ದರೂ, ಈ ಬಾರಿಯೂ ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ, ಶಾಸಕ ಎಲ್.ನಾಗೇಂದ್ರ ಗೆಲುವಿಗಾಗಿ ಶ್ರಮಿಸುತ್ತೇನೆ ಎಂದು ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ತಿಳಿಸಿದ್ದಾರೆ.

ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿರುವ ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರಕ್ಕೆ ನನಗೆ ಟಿಕೆಟ್ ನೀಡಬೇಕೆಂದು ರಾಜ್ಯ ಹಾಗೂ ರಾಷ್ಟ್ರದ ನಾಯಕರಿಗೆ ಮನವಿ ಮಾಡಿದ್ದೆ. ನನಗೆ ಟಿಕೆಟ್ ಕೊಡುವ ಭರವಸೆಯನ್ನು ಎಲ್ಲಾ ನಾಯಕರು ನೀಡಿದ್ದರು ಎಂದರು.

ಆದರೆ ಕೊನೆಗಳಿಗೆಯಲ್ಲಿ ನನಗೆ ಟಿಕೆಟ್ ಕೈತಪ್ಪಿದ್ದು, ನನ್ನ ಅಭಿಮಾನಿಗಳು ಹಾಗೂ ಹಿತೈಷಿಗಳು ತೀವ್ರ ಒತ್ತಡ ಹೇರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಒತ್ತಾಯಿಸಿದ್ದರು. ಆ ಕಾರಣದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದೆ. ತಾಂತ್ರಿಕ ಕಾರಣದಿಂದ ನಾಮಪತ್ರ ತಿರಸ್ಕೃತಗೊಂಡಿತ್ತು. ಮುಂದಿನ ದಿನಗಳಲ್ಲಿ ನನಗೆ ನ್ಯಾಯ ಒದಗಿಸುವುದಾಗಿ ವರಿಷ್ಠರು ಭರವಸೆ ನೀಡಿದ್ದಾರೆ. ಹಾಗಾಗಿ ಪಕ್ಷದ ಶಿಸ್ತಿನ ಸಿಪಾಯಿಯಾಗಿ ಪಕ್ಷದ ಅಭ್ಯರ್ಥಿ ಪರವಾಗಿ ಚುನಾವಣಾ ಪ್ರಚಾರ ನಡೆಸುತ್ತೇನೆ ಎಂದು ಜಯಪ್ರಕಾಶ್ ತಿಳಿಸಿದರು.

ನಾಳೆ ಸ್ವಯಂವರ ಪಾರ್ವತೀ ಹೋಮ

ಮೈಸೂರು: ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿರುವ ಶ್ರೀಚಕ್ರಸಹಿತಳಾದ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮಿ ಸನ್ನಿಧಿಯಲ್ಲಿ ಶುಕ್ರವಾರ ಬೆಳಗ್ಗೆ 7.30ಕ್ಕೆ ಅವಿವಾಹಿತ ವಧು–ವರರಿಗೆ ಶೀಘ್ರ ವಿವಾಹಕ್ಕಾಗಿ ಪ್ರತ್ಯೇಕವಾದ ಪೂಜೆ ಮತ್ತು ಸಂಕಲ್ಪ ಹೋಮ ಮಾಡಿಸಲಾಗುವುದು. ಬೆಳಗ್ಗೆ 7.45ಕ್ಕೆ ಪ್ರಾರಂಭವಾಗಿ 10 ಗಂಟೆಗೆ ಪೂರ್ಣಾಹುತಿ. ವಿವರಗಳಿಗೆ ಮೈಕುಮಾರ್ (ಜಾತಕ ವಿಮರ್ಶಕ)ರ ಮೊ. 9845183399, 9342183392 ಸಂಪರ್ಕಿಸಬಹುದು.

ಫಾತಿಮಾ ಪಿರ್ದೋಸಿಗೆ ಉನ್ನತ ಶ್ರೇಣಿ



ಮೈಸೂರು,ಏ.26–ಮೈಸೂರು ಸಾತಗಳ್ಳಿಯ ಸಂತ ಜೋಸೆಫ್ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿ ಫಾತಿಮಾ ಪಿರ್ದೋಸಿ, ಕಳೆದ ವಾರ್ಷಿಕ ಪರೀಕ್ಷೆಯಲ್ಲಿ 547 (600ಕ್ಕೆ) ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.



ಮೈಸೂರಿನ ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಶ್ರದ್ಧಾಭಕ್ತಿಯಿಂದ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಮುದ್ದುಬಸವಣ್ಣ, ಸುಂದರರಾಜ್, ಮಲ್ಲಿಕಾರ್ಜುನಸ್ವಾಮಿ, ಶ್ರೀಮತಿ ಜ್ಯೋತಿ, ಮಲ್ಲಿಕಾ ಹಾಗೂ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.

ಮೀಸಲು ಹೆಸರಲ್ಲಿ ಬಿಜೆಪಿ ಮಹಾಮೋಸ

ಮೈಸೂರಿನಲ್ಲಿ ಡಬಲ್ ಇಂಜಿನ್ ಸರ್ಕಾರದ ವಿರುದ್ಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಗಳ ಸುರಿಮಳೆ

- ಸುಪ್ರೀಂಕೋರ್ಟ್‌ನಲ್ಲಿ ಮೀಸಲಾತಿಯನ್ನು ಏಕೆ ಸಮರ್ಥಿಸಿಕೊಳ್ಳಲಿಲ್ಲ?
- ಮೋದಿ, ಬೊಮ್ಮಾಯಿ ಲಿಂಗಾಯತ, ಒಕ್ಕಲಿಗರ ಕ್ಷಮೆ ಕೇಳಬೇಕು



ಮೈಸೂರು,ಏ.26(ಎಂಟಿವೈ)– ಚುನಾವಣೆಯಲ್ಲಿ ರಾಜಕೀಯ ಲಾಭ ಮಾಡಿಕೊಳ್ಳುವ ಏಕೈಕ ಉದ್ದೇಶದಿಂದ ಮೀಸಲಾತಿ ಹೆಚ್ಚಳ ಅಸ್ತ್ರವನ್ನು ಪ್ರಯೋಗಿಸಿರುವ ಬಿಜೆಪಿ ಸರ್ಕಾರ, ಸುಪ್ರಿಂಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿ ಸಮರ್ಥಿಸಿಕೊಳ್ಳಲಾಗದೆ ಜನರಿಗೆ ದ್ರೋಹ ಬಗೆದಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗಿನ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಹೆಸರು ಹೇಳಿಕೊಂಡು ರಾಜ್ಯದ ಜನತೆಗೆ ಬಿಜೆಪಿ ಸರ್ಕಾರ ದ್ರೋಹ ಬಗೆದಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೀಸಲಾತಿ ಹೆಚ್ಚಳ ಆದೇಶ ಸಮರ್ಥಿಸಿಕೊಳ್ಳಲು ಸುಪ್ರೀಂಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಲಿಲ್ಲ. ಮೀಸಲಾತಿ ಹೆಚ್ಚಳದ ಹೆಸರಲ್ಲಿ ಲಿಂಗಾಯತ, ಒಕ್ಕಲಿಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಸಮುದಾಯಗಳಿಗೆ ಅಪಮಾನ ಮಾಡಿದೆ. 2002ರಲ್ಲಿ ಜಾರಿಗೆ ತಂದಿದ್ದ ಮೀಸಲಾತಿಯನ್ನು ಮರು ಜಾರಿ ಮಾಡುವುದಾಗಿ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಇದರಿಂದ ಅವೈಜ್ಞಾನಿಕವಾಗಿ ಮಾಡಿದ್ದ ಮೀಸಲಾತಿ ಹಂಚಿಕೆಯಿಂದ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯ ವಂಚನೆಗೆ ಒಳಗಾಗಲಿದೆ ಎಂದರು.

ರಾಜ್ಯ ಬಿಜೆಪಿ ಸರ್ಕಾರದ ದ್ರೋಹದಿಂದಾಗಿ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯ ಪ್ರವರ್ಗ 3ರಲ್ಲೇ ಮುಂದುವರೆಯಲಿವೆ. ಕಳೆದ ತಿಂಗಳು ಸರ್ಕಾರ ಹೊರಡಿಸಿದ್ದ ಆದೇಶದಂತೆ ಹೆಚ್ಚುವರಿ ಶೇ.2 ಮೀಸಲಾತಿ ಸಿಗುವುದಿಲ್ಲ. ಚುನಾವಣೆ ವೇಳೆ ಈ ಸರ್ಕಾರ ಆತುರವಾಗಿ ಕೈಗೊಂಡ ನಿರ್ಧಾರದಿಂದಾಗಿ ಗೊಂದಲ ಹಾಗೂ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿದೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಸರ್ಕಾರ ಹೊರಡಿಸಿದ್ದ ಮೀಸಲಾತಿ ಹೆಚ್ಚಳ ಆದೇಶಕ್ಕೆ ಬಿಜೆಪಿಯೇ ತಡೆ ತಂದಿದೆ. ಇದು ಕ್ಷಮಿಸಲಾರದ ಅಪರಾಧ ಹಾಗೂ ಪಾಪ ಕೃತ್ಯವಾಗಿದೆ. ಚುನಾವಣೆ ಸಮಯದಲ್ಲಿ ಮೀಸಲಾತಿ ಹೆಚ್ಚಳ ಹೆಸರಿನಲ್ಲಿ ಈ ಸಮುದಾಯಗಳಿಗೆ ಲಾಲಿಪಾಪ್ ಕೊಟ್ಟು ಯಾಮಾರಿಸುವ ಪ್ರಯತ್ನ ನಡೆದಿದೆ ಎಂದು ದೂರಿದರು.

ಬಹಿರಂಗ ಕ್ಷಮೆ ಯಾಚನೆಗೆ ಆಗ್ರಹ: ಡಬಲ್ ಇಂಜಿನ್ ಸರ್ಕಾರ ಇಷ್ಟು ದಿನ ಸುಳ್ಳು ಹೇಳಿಕೊಂಡೇ ಬಂದಿದೆ. ರಾಜ್ಯದ ಜನತೆಗೆ ಡಬಲ್ ದ್ರೋಹ ಬಗೆದಿದೆ. ಈ ಹಿಂದೆ ಪಿಎಸ್‌ಐ, ಉಪನ್ಯಾಸಕರು, ಜೂನಿಯರ್ ಇಂಜಿನಿಯರ್ ಸೇರಿದಂತೆ ವಿವಿಧ ನೇಮಕಾತಿಯಲ್ಲಿ ಅಕ್ರಮ ನಡೆಸಿ ಹಣ ಲೂಟಿ ಮಾಡಿದೆ. ಗುತ್ತಿಗೆದಾರರಿಂದ ಶೇ.40ರಷ್ಟು ಕಮಿಷನ್ ಪಡೆದು ಸಾವಿರಾರು ಕೋಟಿ ಹಣ ಲೂಟಿ ಮಾಡಿದೆ. ಇದೀಗ ಮೀಸಲಾತಿ ವಿಚಾರದಲ್ಲಿ ನಾಟಕವಾಡಿದೆ. ಇದರಿಂದ ಕೂಡಲೇ ಮೋದಿ ಹಾಗೂ ಬೊಮ್ಮಾಯಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡ, ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯದವರಿಂದ ಬಹಿರಂಗ ಕ್ಷಮೆ ಕೇಳಬೇಕು ಎಂದವರು ಆಗ್ರಹಿಸಿದರು. ಗೋಷ್ಠಿಯಲ್ಲಿ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ವಕ್ತಾರ ಎಂ.ಲಕ್ಷ್ಮಣ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಇದ್ದರು.

ಬಿಜೆಪಿಗೆ ನವ ಪ್ರಶ್ನೆ

ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಕ್ಕೆ ರಣದೀಪ್ ಸಿಂಗ್ ಸುರ್ಜೇವಾಲ 9 ಪ್ರಶ್ನೆ ಕೇಳಿ, ಸಮರ್ಪಕ ಉತ್ತರ ನೀಡುವಂತೆ ಆಗ್ರಹಿಸಿದರು. ಲಿಂಗಾಯತರು, ಒಕ್ಕಲಿಗರು, ಎಸ್ಸಿ, ಎಸ್ಟಿಗಳಿಗೆ 'ಮೀಸಲಾತಿಯ ವಂಚನೆ' ಏಕೆ ಮಾಡಿದ್ದೀರಿ?, ನೀವು ಸುಪ್ರೀಂ ಕೋರ್ಟ್‌ನಲ್ಲಿ ಮೀಸಲಾತಿಯನ್ನು ಏಕೆ ಸಮರ್ಥಿಸಿಕೊಳ್ಳಲಿಲ್ಲ?, ಮೀಸಲಾತಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಅಫಿಡವಿಟ್ ಬೊಮ್ಮಾಯಿ–ಮೋದಿ ಸರ್ಕಾರ ಏಕೆ ಸಲ್ಲಿಸಲಿಲ್ಲ?, ಮಾ.14ರಂದು ಸಂಸತ್ತಿನಲ್ಲಿ ಎಸ್ಸಿ–ಎಸ್ಟಿ ಮೀಸಲಾತಿ ಹೆಚ್ಚಳವನ್ನು ಮೋದಿ ಸರ್ಕಾರ ಏಕೆ ತಿರಸ್ಕರಿಸಿತು?, ಎಸ್ಸಿ–ಎಸ್ಟಿ ಮೀಸಲಾತಿ ಹೆಚ್ಚಳ ಕಾನೂನನ್ನು ಕೇಂದ್ರ ಸರ್ಕಾರ ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಏಕೆ ಸೇರಿಸಲಿಲ್ಲ? ಎಸ್ಸಿ, ಎಸ್ಟಿ, ಒಬಿಸಿ, ಲಿಂಗಾಯತರು, ಒಕ್ಕಲಿಗರು ಮತ್ತು ಇತರರ ಆಕಾಂಕ್ಷೆಗಳನ್ನು ಪೂರೈಸಲು ನೀವು ಮೀಸಲಾತಿಯ ಶೇ.50ರ ಮಿತಿಯನ್ನು ಹೆಚ್ಚಿಸಲು ಏಕೆ ನಿರಾಕರಿಸುತ್ತಿದ್ದೀರಿ?, ನೀವು ಅಲ್ಪಸಂಖ್ಯಾತರ ಮೀಸಲಾತಿಯನ್ನು ಏಕೆ ಗುರಿಯಾಗಿಸಿಕೊಂಡಿದ್ದೀರಿ?, ಬೊಮ್ಮಾಯಿ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೇಳಿಕೆ ನೀಡುವ ಮೂಲಕ ಮೀಸಲಾತಿ ಕುರಿತ ತನ್ನದೇ ಆದ ಸರ್ಕಾರಿ ಆದೇಶವನ್ನು ಏಕೆ ತಡೆ ಹಿಡಿಯಲಾಗಿದೆ?, ಮೀಸಲಾತಿಯ ಹೆಸರಿನಲ್ಲಿ ಬಿಜೆಪಿ ಮಾಡಿದ ದ್ರೋಹಕ್ಕಾಗಿ ಎಸ್ಸಿ, ಎಸ್ಟಿ, ಲಿಂಗಾಯತರು, ಒಕ್ಕಲಿಗರು ಮತ್ತು ಇತರರನ್ನು ಪ್ರಧಾನಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸುತ್ತಾರೆಯೇ? ಎಂದು ಸುರ್ಜೇವಾಲ ಪ್ರಶ್ನಿಸಿದರು.



ನಕ್ಕರೆ ಅದೇ ಸ್ವರ್ಗ

ವಿಮರ್ಶಕರು : (ಸಾಂಸಾರಿಕ ಶಬ್ದಕೋಶ ಕುರಿತು ಮೆಚ್ಚುಗೆ ಸೂಚಿಸಿ) ಇಷ್ಟು ಪದಗಳನ್ನು ಕಲೆ ಹಾಕೋಕೆ ಹೇಗೆ ಸಾಧ್ಯವಾಯ್ತು?

ಅವರು : ನನ್ನ ಹೆಂಡತಿ ಬಹಳ ವಾಚಾಳಿ, ಮಾತಿಗೆ ಮಾತು ಬೆಳೆದಾಗಲೆಲ್ಲಾ ಸೃಷ್ಟಿಯಾದ ಪದಗಳು ಇವು.

ಮೈಸೂರು ಮಿತ್ರ

ಗುರುವಾರ, 27 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಧೈರ್ಯವೇ ಪ್ರಥಮ ಮಾನವ ಗುಣ, ಏಕೆಂದರೆ ಅದರಿಂದಲೇ ಉಳಿದೆಲ್ಲಾ ಗುಣಗಳು ಉದ್ಭವಿಸುತ್ತವೆ. – ವಿನ್‌ಸ್ಟನ್ ಚರ್ಚಿಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪುಣ್ಯವಂತ ಮುಟ್ಟಿದ್ದೆಲ್ಲಾ ಚಿನ್ನ

ನಿಮ್ಮ ಪತ್ರಗಳು

ಮತವನ್ನು ಯಾರಿಗೂ ಮಾರಿಕೊಳ್ಳುವುದು ಬೇಡ

ಮಾನ್ಯರೆ,

ಚುನಾವಣಾ ಕಾವು ರಂಗೇರುತ್ತಿದೆ. ನಾ ಮೇಲು ತಾ ಮೇಲು ಎಂಬಂತೆ ರಾಜಕೀಯ ಪಕ್ಷಗಳು ಚುನಾವಣಾ ಪ್ರಚಾರ ಮಾಡುತ್ತಿವೆ. ನಾಗರಿಕರ ಮುಂದೆ ಮತ ಕೇಳಲು ಹೋಗುತ್ತಿದ್ದಂತೆ ಅಭ್ಯರ್ಥಿಗಳ ಕರಗಳು ಜೋಡಿಸಲ್ಪಡುತ್ತವೆ. ಇದೇ ಮತದಾರರಿಗಿರುವ ಶಕ್ತಿ ಅಲ್ಲವೇ? ನಮ್ಮನ್ನು ಆಳುವ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ನಾಗರಿಕ ಆಲೋಚನೆ ಮಾಡುವುದು ಅತ್ಯಗತ್ಯ. ಐದು ವರ್ಷ ನಮ್ಮನ್ನು ಆಳುವ ಅಧಿಕಾರವನ್ನು ಅವರ ಕೈಮೇಲಿಟ್ಟು ಸುಮ್ಮನೇ ಮೂಖ ಪ್ರೇಕ್ಷಕರಾಗಿ ಬಿಡುತ್ತೇವೆ. ಇನ್ನಾದರೂ ನಾವು ಎಚ್ಚೆತ್ತುಕೊಂಡು ಸೂಕ್ತ ನಾಯಕನನ್ನು ಆಯ್ಕೆ ಮಾಡಬೇಕು.

ಇಂದು ಪಕ್ಷಗಳು ಹಣದ ಆಮಿಷವನ್ನು ತೋರಿಸಿ ಮತವನ್ನು ಖರೀದಿ ಮಾಡುತ್ತಿವೆ ಎನ್ನಬಹುದು. ಮತದಾರರಿಗೆ ಹಲವು ಆಮಿಷಗಳನ್ನು ತೋರಿಸಿ, ಆಶ್ವಾಸನೆಗಳ ಹೊಳೆಯನ್ನು ಹರಿಸಿ, ಕೈಮುಗಿದು ಅಭಿಮಾನ ತೋರಿಸಿ, ಇನ್ನು ಹಲವು ನಾಟಕೀಯ ಆಟಗಳನ್ನು ಮತದಾರರ ಎದುರು ತೋರಿಸಿ ಹೇಗಾದರೂ ಮಾಡಿ ಅವರ ಓಟನ್ನು ಪಡೆಯಲೇಬೇಕೆಂದು ಅಭ್ಯರ್ಥಿಗಳು ಟೊಂಕಕಟ್ಟಿ ನಿಂತಿದ್ದಾರೆ. ಆದರೇ ಇನ್ನು ಹಲವು ನಾಗರಿಕರಿಗೆ ಸರಿಯಾಗಿ ಅರ್ಥವಾಗಿಲ್ಲವೇನೋ ತಮ್ಮ ಶಕ್ತಿ ಏನೆಂಬುದು?

ನನ್ನೊಬ್ಬನಿಂದ ಏನಾಗುವುದು ಎಂದು ಒಬ್ಬಬ್ಬರ ಬಾಯಲ್ಲಿ ಸಹಜವಾಗಿ ಮಾತು ಹೊರಬೀಳುತ್ತಿವೆ. ಅದೇ ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ ಎಂಬುದು.

ದೇಶ ಬದಲಿಸುವ ದೈತ್ಯ ಶಕ್ತಿ ನಾಗರಿಕರಿಗಿದೆ. ನಮಗೆ ಬೇಕಾದ ರೀತಿಯ ಆಡಳಿತವನ್ನು ನಾವು ಪಡೆಯುವ ಸುವರ್ಣ ಅವಕಾಶವೇ ಈ ಐದು ವರ್ಷಕೊಮ್ಮೆ ಬರುವ ಚುನಾವಣೆ. ಇದರಲ್ಲಿ ನಾವು ಯಾವುದೇ ಆಮಿಷಗಳಿಗೆ ಒಳಗಾಗಬಾರದು. ಬಣ್ಣ ಬಣ್ಣದ ಮಾತುಗಳಿಗೆ ಬೆರಗಾಗಬಾರದು. ನಮ್ಮ ಶಕ್ತಿ ಏನೆಂಬುದನ್ನು ಬುದ್ಧಿಜೀವಿಗಳಾದ ನಾವು ಮೊದಲು ಅರಿಯಬೇಕು. ಗ್ರಾಮೀಣ ಜನತೆಗೆ ಈ ಮತದ ಶಕ್ತಿಯ ಬಗ್ಗೆ ಸುತ್ತಲಿನ ಬುದ್ಧಿವಂತ ನಾಗರಿಕರು ಅರಿವು ಮೂಡಿಸುವಂತಾಗಬೇಕು. ಸೂಕ್ತ, ಪ್ರಬಲ ಮತ್ತು ನಿಷ್ಪಕ್ಷಪಾತ ಅಭ್ಯರ್ಥಿಯ ಆಯ್ಕೆ ಮಾಡಿ ನಮ್ಮ ಮುಂದಿನ ಬದುಕನ್ನು ಹಸನು ಮಾಡಿಕೊಳ್ಳಲು ನಾವು ಮುಂದಾಗಬೇಕು. ಕಾಟಾಚಾರದ ಓಟು ನಮ್ಮದಾಗಬಾರದು. ನಮ್ಮ ದೇಶ ನಮಗೆ ನೀಡಿರುವ ಈ ಅದ್ಭುತ ಮತ ಶಕ್ತಿಯನ್ನು ಸದುಪಯೋಗಪಡಿಸಿಕೊಂಡು ಎಲ್ಲರೂ ಒಗ್ಗೂಡಿ ನಮ್ಮ ಮುಂದಿನ ನಾಯಕರನ್ನು ಆಯ್ಕೆ ಮಾಡುವಲ್ಲಿ ಮೇ 10 ರಂದು ಎಲ್ಲರೂ ತಪ್ಪದೇ ನಮ್ಮ ಮತದಾನವನ್ನು ಮಾಡೋಣ.

–ಅನಿಲ್ ರಾಜ, ಗೀತಾ ಭಾರತಿ ಶಾಲೆ, ಸಿದ್ಧಾರ್ಥನಗರ, ಮೈಸೂರು

ಕಂದಾಯ ಪಾವತಿ ಅವಧಿ ವಿಸ್ತರಿಸಿ

ಮಾನ್ಯರೆ,

ಮೈಸೂರು ನಗರದ ಎಲ್ಲಾ ವಲಯ ಕಛೇರಿಗಳಲ್ಲೂ 2023–24ನೇ ಸಾಲಿನ ಮನೆ ಕಂದಾಯವನ್ನು ಏಪ್ರಿಲ್ ತಿಂಗಳಲ್ಲಿ ಪಾವತಿ ಮಾಡಿದರೆ ಶೇ. 5 ರಷ್ಟು ರಿಯಾಯಿತಿಯಲ್ಲಿ ಪಾವತಿಸಲು ಅವಕಾಶ ಇರುತ್ತದೆ. ಈ ಅವಧಿಯಲ್ಲೇ ಮೈಸೂರಿನ ಅರ್ಧದಷ್ಟು ಜನರು ಕಂದಾಯ ಪಾವತಿಸುತ್ತಾರೆ.

ಆದರೆ ಕೆಲವು ವಲಯ ಕಛೇರಿಗಳಲ್ಲಿ ಕಂದಾಯ ಪಾವತಿಸುವ "ಪ್ರಿಂಟ್ ಔಟ್" ತೆಗೆದುಕೊಡಲು ಅಲ್ಲಿ ಸಿಬ್ಬಂದಿಯೇ ಇರುವುದಿಲ್ಲ. ಕಾರಣ ಕೇಳಿದರೆ ಅವರು ಎಲೆಕ್ಷನ್ ಡ್ಯೂಟಿಗೆ ಹೋಗಿದ್ದಾರೆ. ನೀವು ಹತ್ತಿರದ ಬ್ರೌಸಿಂಗ್ ಸೆಂಟರ್‌ಗೆ ಹೋಗಿ ತೆಗೆದುಕೊಂಡು ಬಂದು ಹಣ ಕಟ್ಟಿ ಎನ್ನುತ್ತಾರೆ. ಕೆಲವು ಬ್ರೌಸಿಂಗ್ ಸೆಂಟರ್‌ಗಳಲ್ಲಿ 50 ರಿಂದ 100 ರೂಪಾಯಿಗಳನ್ನು ಬಲವಂತವಾಗಿ ವಸೂಲಿ ಮಾಡುತ್ತಾರೆ. ವಿಧಿ ಇಲ್ಲದೆ ಸಾರ್ವಜನಿಕರು ಕೊಟ್ಟು ಬರುತ್ತಾರೆ. ಆದರೆ ಈ ಪ್ರಿಂಟ್ ಔಟ್ ಅನ್ನು ಎಲ್ಲಾ ವಲಯ ಕಛೇರಿಗಳಲ್ಲಿ "ಪುಕ್ಕಟೆ" ತೆಗೆದುಕೊಡುವ ಸೌಲಭ್ಯವಿದೆ. ಈ ಕಾರಣದಿಂದ ಶೇ.5 ರಿಯಾಯಿತಿಯನ್ನು ಮೇ ತಿಂಗಳ ಅಂತ್ಯದವರೆಗೂ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಮೈಸೂರು ನಗರ ಪಾಲಿಕೆಯ ಆಯುಕ್ತರಲ್ಲಿ ಮನವಿ.

– ಬೂಕನಕೆರೆ ವಿಜೇಂದ್ರ, ಮೈಸೂರು.

ಚುನಾವಣಾ ಅಕ್ರಮದ ಮತ್ತೊಂದು ಮಾರ್ಗ

ಮಾನ್ಯರೆ,

ಈಗಾಗಲೇ ಚುನಾವಣೆಯನ್ನು ಅಕ್ರಮವಾಗಿ ಗೆಲ್ಲಲು ಹಣ, ಹೆಂಡ, ಸೀರೆ, ಪಂಚೆ, ಧೋತಿ, ತೋಳ್ಬಲ, ಮಿಕ್ಸಿ, ಕುಕ್ಕರ್, ಜಾತಿ, ಧರ್ಮ, ಸುಳ್ಳು ಭರವಸೆ ಹೀಗೆ ಸಾಕಷ್ಟು ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳ ದುರುಪಯೋಗವು ಆಗುತ್ತಿದೆ. ಈಗ ಮಾಹಿತಿ ತಂತ್ರಜ್ಞಾನದ ಮೂಲಕ ಮತ್ತೊಂದು ರೀತಿಯ ವಂಚನೆ ಪತ್ತೆ ಹಚ್ಚಲಾಗಿದೆ.

ಒಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡಿ ಜನರ ಮನಸ್ಸು ಗೆದ್ದು ಚುನಾವಣೆ ಗೆಲ್ಲುವುದನ್ನು ಹೊರತುಪಡಿಸಿ ಇತರ ಎಲ್ಲಾ ಮಾರ್ಗಗಳ ಹುಡುಕಾಟ ಮಾತ್ರ ಯಶಸ್ವಿಯಾಗಿ ಸಾಗುತ್ತಿದೆ. ಜನರನ್ನು ಮರಳು ಮಾಡುವುದು ಒಂದು ಕಡೆ, ಚುನಾವಣಾ ಪ್ರಕ್ರಿಯೆಯನ್ನೇ ವಂಚಿಸುವುದು ಮತ್ತೊಂದು ಕಡೆ. ವಾಸ್ತವ ಮಾತ್ರ ಜನರೇ ಆರಿಸಿದ ಜನಪ್ರತಿನಿಧಿಗಳು ಎಂಬ ಪ್ರಜಾಪ್ರಭುತ್ವ ಹೆಸರಿನ ಒಂದು ಅಣಕ.

–ಅಂಕರಾಜು, ಜಿ.ಎಸ್.ಎಸ್.ಎಸ್, ಮೈಸೂರು

ನೀತಿ ಸಂಹಿತೆಯಿಂದ ಸಾರ್ವಜನಿಕರಿಗೆ ಪ್ರಾಣ ಸಂಕಟ!!

ಮಾನ್ಯರೆ,

ಇನ್ನೇನು ಕೆಲವೇ ದಿನಗಳಲ್ಲಿ ನಡೆಯುವ ವಿಧಾನಸಭೆ ಚುನಾವಣೆ ಪ್ರಯುಕ್ತ ನೀತಿ ಸಂಹಿತೆಯನ್ನು ಜಾರಿಗೊಳಿಸಲಾಗಿದೆ. ಇದರಿಂದ ಜನ ಸಾಮಾನ್ಯರಿಗೆ ತೊಂದರೆಯೇ ವಿನಃ ಮತ್ತೇನೂ ಅನುಕೂಲ ಇಲ್ಲ. ಕೆಲಸಕ್ಕೆಂದು ಸಾರ್ವಜನಿಕರು ಯಾವ ಸರ್ಕಾರಿ ಕಚೇರಿಗೆ ಹೋದರೂ ಅಲ್ಲಿ ಯಾವ ಅಧಿಕಾರಿಯೂ ಸೀಟಿನಲ್ಲಿ ಇರುವುದಿಲ್ಲ. ಅಲ್ಲಿರುವ ಸಿಬ್ಬಂದಿಯನ್ನು ಕೇಳಿದರೆ ಅವರಿಂದ ಒಂದೇ ಉತ್ತರ ಚುನಾವಣಾ ಕರ್ತವ್ಯಕ್ಕೆ ತೆರಳಿದ್ದಾರೆ. ಚುನಾವಣೆ ಮುಗಿದ ನಂತರ ಬಂದು ಭೇಟಿ ಮಾಡಿ ಎಂದು ಸಬೂಬು ಹೇಳುತ್ತಾರೆ. ಜನರಿಂದಲೇ ಆಯ್ಕೆಯಾಗಿರುವ ಅಧಿಕಾರಿಗಳು ಹೀಗೆ ಜನರಿಗೆ ತೊಂದರೆ ಕೊಡುವುದು ಯಾವ ನ್ಯಾಯ? ಅವರು ಚುನಾವಣಾ ನಿಮಿತ್ತ ಬೇರೆ ಕಡೆ ತೆರಳಿದರೆ ಆ ಜಾಗದಲ್ಲಿ ಪರ್ಯಾಯ ವ್ಯವಸ್ಥೆಯಾಗಿ ಮತ್ತೊಬ್ಬ ಅಧಿಕಾರಿಯನ್ನು ನೇಮಿಸಬಹುದಲ್ಲ. ಅದು ಬಿಟ್ಟು ಹೀಗೆ ತಿಂಗಳಾನುಗಟ್ಟಳೆ ನೀತಿ ಸಂಹಿತೆ ಅಂತ ನೆಪವೊಡ್ಡಿ ಆಗುವ ಕೆಲಸಗಳನ್ನು ಮುಂದೂಡಲ್ಪಟ್ಟರೆ ಹೇಗೆ? ನಾನು ಸ್ವರಾಲಯ ಸಂಗೀತ ಸಂಸ್ಥೆಯನ್ನು ಕಳೆದ 33 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದೇನೆ. ನವೀಕರಣಕ್ಕೆಂದು ಕಲಾಮಂದಿರಕ್ಕೆ ಹೋದಾಗ ಅಲ್ಲಿನ ಸಿಬ್ಬಂದಿ ನೀವು ಚುನಾವಣೆ ಮುಗಿದ ನಂತರ ಬನ್ನಿ ಎಂದು ಹಾರಿಕೆಯ ಉತ್ತರ ಕೊಟ್ಟರು. ತಕ್ಷಣ ಆಗಬೇಕಾದ ಕೆಲವೊಂದು ಕೆಲಸಗಳನ್ನು ಹೀಗೆ ಮುಂದೂಡಲ್ಪಟ್ಟರೆ ಮುಂದೆ ತುಂಬಾ ತೊಂದರೆಯಾಗುತ್ತದೆ. ದಯವಿಟ್ಟು ಈ ನೀತಿಸಂಹಿತೆ ಹೇಗೆ ಪ್ರಾಮುಖ್ಯವೋ ಹಾಗೂ ಸಾರ್ವಜನಿಕರ ಕೆಲಸಗಳು ಅಷ್ಟೇ ಉಪಯುಕ್ತ ಎಂದು ತಿಳಿದು ಮುಂದೆ ಹೀಗಾಗದಂತೆ ಎಚ್ಚರ ವಹಿಸಲಿ.

–ವಿದುಷಿ ಡಾ.ಸುಮ ಹರಿನಾಥ್, ರಾಮಕೃಷ್ಣನಗರ, ಮೈಸೂರು




ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ರಾಜಕಾರಣದಲ್ಲಿ ಮಹಿಳೆಗೆ ಸಮಾನಾವಕಾಶ ಇನ್ನೂ ಮರೀಚಿಕೆ

> ಹೆಣ್ಣು ಮಕ್ಕಳನ್ನು ರಾಜಕೀಯ ಸ್ಪರ್ಧೆಗೆ ಇಳಿಯಲು ಮತ್ತು ಜನ ಸಂಪರ್ಕ ಬೆಳೆಸಿಕೊಳ್ಳಲು ಉತ್ತೇಜನವನ್ನು ಕುಟುಂಬ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ನೀಡುವುದು; ಸಣ್ಣ ವಯಸ್ಸಿನಿಂದಲೇ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಅವಶ್ಯವಾದ ತರಬೇತಿಯನ್ನು ನೀಡುವುದು; ರಾಜಕೀಯ ಪರಿಸರದಲ್ಲಿ ಅನುಭವಾತ್ಮಕ ಜ್ಞಾನವನ್ನೊದಗಿಸುವುದು; ರಾಜಕೀಯ ಪಕ್ಷಗಳಲ್ಲಿ ಇರುವ ಮಹಿಳಾ ಘಟಕಗಳು ತಮ್ಮ ಧ್ವನಿಯನ್ನು ಗಟ್ಟಿ ಮಾಡಿಕೊಂಡು, ಮಹಿಳೆಯರಿಗೆ ಸ್ಥಾನಗಳನ್ನು ನೀಡಲೇಬೇಕೆಂದು ಹಕ್ಕೊತ್ತಾಯ ಮಾಡುವುದು; ಚುನಾವಣೆಗಳಲ್ಲಿ ಸ್ಪರ್ಧಿಸಲು ಸಿದ್ಧರಾದ ಮಹಿಳಾ 'ನಿರ್ಣಾಯಕ ಸಮೂಹ'ಗಳನ್ನು ದೇಶದ ಎಲ್ಲೆಡೆ ಸೃಷ್ಟಿಸುವುದು ಮತ್ತು ನಿರಂತರವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಮಹಿಳೆಯರ ರಾಜಕೀಯ ಒಳಗೊಳ್ಳುವಿಕೆಯ ಅಗತ್ಯದ ಬಗ್ಗೆ ಚರ್ಚೆ-ಸಂವಾದಗಳನ್ನು ನಡೆಸುವುದು-ಈ ಎಲ್ಲ ಚಟುವಟಿಕೆಗಳು ಏಕಕಾಲದಲ್ಲಿ ನಡೆದರೆ ಮಾತ್ರ ಮುಂಬರುವ 25-50 ವರ್ಷಗಳಲ್ಲಿಯಾದರೂ ರಾಜಕಾರಣದಲ್ಲಿ ಲಿಂಗ ಸಮಾನತೆಯ ಗಾಳಿ ಬೀಸಬಹುದೇನೋ.



ಕರ್ನಾಟಕ ವಿಧಾನಸಭೆಗೆ ಚುನಾವಣೆ 16ನೇ ಬಾರಿಗೆ ನಡೆಯಲಿದ್ದು. 2613 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಇವರಲ್ಲಿ 2419 ಪುರುಷರಾದರೆ 193 ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ಒಬ್ಬರು. ಈ ಬಾರಿ ಸ್ಪರ್ಧಿಸಿರುವ 193 ಮಹಿಳೆಯರಲ್ಲಿ 64 ಮಂದಿ, ಎಂದರೆ ಶೇ.33ರಷ್ಟು ಸ್ವತಂತ್ರ ಅಭ್ಯರ್ಥಿಗಳಾದರೆ, ಅನುಕ್ರಮವಾಗಿ ಆಮ್ ಆದ್ಮಿ, ಬಿಜೆಪಿ, ಜೆಡಿಎಸ್, ಕರ್ನಾಟಕ ರಾಷ್ಟ್ರ ಸಮಿತಿ, ಕಾಂಗ್ರೆಸ್ ಮತ್ತು ಕಲ್ಯಾಣರಾಜ್ಯ ಪ್ರಗತಿ ಪಕ್ಷಗಳಿಂದ 17, 16, 15, 11, 11 ಮತ್ತು 10 ಮಹಿಳೆಯರಿಗೆ ಟಿಕೆಟ್ ನೀಡಲಾಗಿದ್ದು, ಇನ್ನುಳಿದ ಮಹಿಳಾ ಅಭ್ಯರ್ಥಿಗಳಿಗೆ ಸ್ಪರ್ಧಾವಕಾಶವನ್ನು ನೀಡಿರುವುದು 20ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಇತರ ಪಕ್ಷಗಳು. ಮತ್ತದೇ ಪುರುಷ ಕೇಂದ್ರಿತ ಚುನಾವಣಾ ಕಣ, ಶೇ.10ನ್ನೂ ದಾಟದಿರುವ ಮಹಿಳಾ ಅಭ್ಯರ್ಥಿಗಳ ಪ್ರಮಾಣ–ಇದು ಈ ಬಾರಿಯೂ ಕಂಡು ಬರುತ್ತಿರುವ ಚಿತ್ರ.

ರಾಜಕಾರಣದಲ್ಲಿ ಮಹಿಳೆಯರ ಕಡಿಮೆ ಪ್ರಾತಿನಿಧ್ಯ ಜಾಗತಿಕ ಪ್ರಚಲಿತ ಪ್ರವೃತ್ತಿ. ಈ ಪ್ರವೃತ್ತಿಯಲ್ಲಿ ವಿವಿಧ ದೇಶಗಳ ನಡುವೆ ವ್ಯತ್ಯಾಸಗಳಿದ್ದರೂ ಮಹಿಳೆಯರು ಮೇಲ್ಮಟ್ಟದ ರಾಜಕೀಯ ಸ್ಥಾನಗಳನ್ನು ಪಡೆಯುವುದಕ್ಕೆ ಬಹುತೇಕ ದೇಶಗಳಲ್ಲಿ ಇಂದಿಗೂ ಸಾಧ್ಯವಾಗಿಲ್ಲ. ಮಹಿಳೆಯರ ಕಡಿಮೆ ಪ್ರಾತಿನಿಧ್ಯಕ್ಕೆ ಕಾರಣಗಳನ್ನು ಗುರುತಿಸಿ, ಈ ಅಸಮತೋಲನವನ್ನು ಸರಿದೂಗಿಸಲು ನಾವು ಮುಂದೇನು ಮಾಡಬಹುದು ಎಂದು ಆಲೋಚಿಸುವ ಮುನ್ನ ಅವರ ರಾಜಕೀಯ ಭಾಗವಹಿಸುವಿಕೆಯನ್ನು ಕುರಿತು ಇಂಟರ್ ಪಾರ್ಲಿಮೆಂಟರಿ ಯೂನಿಯನ್ ಮತ್ತು ಯು.ನ್.ವಿಮೆನ್ ಮತ್ತು ವಿಮೆನ್ ಇನ್ ಪಾಲಿಟಿಕ್ಸ್ ಸಂಸ್ಥೆಗಳು ಈ ವರ್ಷದ ಆರಂಭದಲ್ಲಿ ಬಿಡುಗಡೆ ಮಾಡಿದ ಕೆಲ ಅಂಕಿ– ಅಂಶಗಳತ್ತ ಗಮನಹರಿಸುವುದು ಪ್ರಸ್ತುತ. ಈ ವರದಿಗಳ ಪ್ರಕಾರ ಜಗತ್ತಿನಲ್ಲಿರುವ 195 ದೇಶಗಳಲ್ಲಿ 31 ದೇಶಗಳಲ್ಲಿ, ಎಂದರೆ ಶೇ.16 ರಷ್ಟರಲ್ಲಿ ಮಾತ್ರ ಮಹಿಳೆಯರು ದೇಶ ಅಥವಾ ಸರ್ಕಾರಗಳ ಮುಖ್ಯಸ್ಥರ ಸ್ಥಾನದಲ್ಲಿ ಇದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಅಧಿಕಾರದ ಮೇಲ್ಮಟ್ಟದ ಸ್ಥಾನಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಇನ್ನೂ 130 ವರ್ಷಗಳಾದರೂ ಸಾಧ್ಯವಾಗುವುದಿಲ್ಲ ಎಂದು ಈ ವರದಿಗಳು ತಿಳಿಸಿವೆ.

ಬೀಜಿಂಗ್‌ನಲ್ಲಿ 1995 ರಲ್ಲಿ ನಡೆದ ವಿಶ್ವ ಮಹಿಳಾ ಸಮ್ಮೇಳನದಲ್ಲಿಯೇ ರಾಜಕೀಯ ವಲಯದಲ್ಲಿ ಕಂಡು ಬರುತ್ತಿರುವ ಲಿಂಗಾಂತರವನ್ನು ಕಡಿಮೆ ಮಾಡಿ ಎಲ್ಲ ದೇಶಗಳಲ್ಲಿ, ಎಲ್ಲ ಮಟ್ಟಗಳಲ್ಲೂ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕೆಂಬ ಗುರಿಯನ್ನು ಹಾಕಿಕೊಳ್ಳಲಾಯಿತು. ಆದರೆ ಇಂದಿಗೂ ಈ ಆಶಯವನ್ನು ಸ್ವಲ್ಪ ಮಟ್ಟಿಗೂ ಸಾಕಾರ ಮಾಡಲಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಏಕೆ ಮಹಿಳೆಯರಿಗೆ ರಾಜಕೀಯ ವಲಯದಲ್ಲಿರುವ ಲಿಂಗಾಧಾರಿತ ತಡೆಗೋಡೆಗಳನ್ನು ಬೇಧಿಸಲು ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಬಹು ಆಯಾಮಗಳಿಂದ ಪರಿಶೀಲಿಸಿ, ಇನ್ನು ಮುಂದಾದರೂ ಮಹಿಳೆಯರ ರಾಜಕೀಯ ಪ್ರವೇಶವನ್ನು ಹೆಚ್ಚಿಸಲು ಹೇಗೆ ಕಾರ್ಯ ಪ್ರವೃತ್ತರಾಗಬೇಕು ಎಂಬುದಕ್ಕೆ ಕಾರ್ಯ ಸೂಚಿಯನ್ನು ಹಾಕಿಕೊಳ್ಳಬೇಕು.

ರಾಜಕಾರಣದಲ್ಲಿ ಮಹಿಳಾ ಪ್ರಾತಿನಿಧ್ಯ ಗೌಣವಾಗಿರುವುದಕ್ಕೆ ನಾವು ಪುರುಷ ಪ್ರಧಾನ ಮೌಲ್ಯಾಚರಣೆಗಳೇ ಕಾರಣ ಎಂದು ಬಹುಕಾಲದಿಂದ ಹೇಳುತ್ತಲೇ ಬಂದಿದ್ದೇವೆ. ಇದು ನಿಜವೂ ಹೌದು. ಆದರೆ ಮಹಿಳೆಯರು ಅಧಿಕಾರ ಸ್ಥಾನಗಳನ್ನು ಪಡೆಯಲಾಗದಿರಲು ಕೇವಲ ಪುರುಷ ಪ್ರಾಧಾನ್ಯತೆಯಷ್ಟೇ ಕಾರಣವೇ ಅಥವಾ ಅವರ ಬದುಕನ್ನು ಶತಮಾನಗಳಿಂದ ಸುತ್ತುವರೆದಿರುವ ಜೈವಿಕ–ಸಾಮಾಜಿಕ–ಸಾಂಸ್ಕೃತಿಕ ಅಡ್ಡಿಗಳೂ ಕಾರಣವೇ ಎಂಬುದನ್ನು ಪರಿಶೀಲಿಸಬೇಕು. ಈ ಅಡ್ಡಿಗಳನ್ನು ಗುರುತಿಸಿದ ಮೇಲೆ ಅವುಗಳನ್ನು ಬೇಧಿಸಿ ಹೊರಬರಲು ಅವಶ್ಯವಾದ ಪರಿಸರವನ್ನು ಸೃಷ್ಟಿ ಮಾಡಲು ಪ್ರಜ್ಞಾಪೂರ್ವಕವಾದ ಪ್ರಯತ್ನಗಳು ಸಮಾಜದ ಎಲ್ಲ ಸಂಸ್ಥೆಗಳಲ್ಲಿಯೂ ನಡೆಯಬೇಕು. ಅದಕ್ಕೂ ಮುನ್ನ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ತಡೆಗೋಡೆಗಳನ್ನು ನಿರ್ಮಿಸುತ್ತಿರುವಂಥ ಅಂಶಗಳು ಯಾವುವು ಎಂಬುದರತ್ತ ಗಮನ ಹರಿಸಬೇಕಾಗಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸದಿರುವುದಕ್ಕೆ ಸಮಾಜ ವಿಜ್ಞಾನಿಗಳು ಮೂರು ಪ್ರಮುಖ ಕಾರಣಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ ರಾಜಕೀಯ ಪ್ರವೇಶಾಕಾಂಕ್ಷೆಗಳಲ್ಲಿ ಕಂಡು ಬರುವ ಲಿಂಗಾಂತರ, ಮತದಾರರ ಪೂರ್ವಾಗ್ರಹ ಮತ್ತು ರಾಜಕೀಯ ಪಕ್ಷಗಳ ಪೂರ್ವಾಗ್ರಹ. ಈ ಪರಿಕಲ್ಪನೆಗಳು ಆಚರಣೆಗಳಾಗಿ ಹೇಗೆ ಪರಿವರ್ತಿತವಾಗುತ್ತವೆ ಎಂದು ನೋಡೋಣ.

ರಾಜಕೀಯ ಪ್ರವೇಶಾಕಾಂಕ್ಷಿಗಳಲ್ಲಿ ಕಂಡು ಬರುವ ಲಿಂಗಾಂತರ ಇಂದಿಗೂ ಬಹುಸಂಖ್ಯಾತ ಕುಟುಂಬಗಳಲ್ಲಿ ರಾಜಕೀಯ ಪ್ರವೇಶ ಮಾಡಲು ಅಗತ್ಯವಾದ ಮಹತ್ವಾಕಾಂಕ್ಷೆಗಳನ್ನು ಹೊಂದಲು ಹೆಣ್ಣು ಮಕ್ಕಳಿಗೆ ಪೂರಕ ವಾತಾವರಣವಾಗಲಿ, ಅದಕ್ಕೆ ಅಗತ್ಯವಾದ ಸಂಪರ್ಕ ಜಾಲಗಳನ್ನು ಬೆಳೆಸಿಕೊಳ್ಳಲಾಗಲೀ ಅವಕಾಶಗಳು ಇರುವುದಿಲ್ಲ. ರಾಜಕಾರಣ ಎನ್ನುವುದು ಹೆಣ್ಣು ಮಕ್ಕಳಿಗೆ ಸುರಕ್ಷಿತ ವಲಯವಲ್ಲ, ಏಕೆಂದರೆ ಇಲ್ಲಿ ಅಪಾಯಕಾರಿ ಸ್ಪರ್ಧೆ ಇದೆ, ಎಲ್ಲಕ್ಕಿಂತ ಮಿಗಿಲಾಗಿ ಹಣ ಮತ್ತು ತೋಳ್ಬಲಗಳಿಗೆ ಆದ್ಯತೆ ನೀಡುವ ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಮಹಿಳೆಯರಿಗೆ ಬೆಂಬಲವಿಲ್ಲ–ಇವೇ ಮುಂತಾದ ನಕಾರಾತ್ಮಕ ಮೌಲ್ಯಗಳನ್ನೇ ಸಮಾಜೀಕರಣದ ಪ್ರಕ್ರಿಯೆಯಲ್ಲಿ ಎತ್ತಿ ಹಿಡಿದು ಕುಟುಂಬದ ಮಟ್ಟದಲ್ಲಿಯೇ ಅವರಲ್ಲಿ ಅಧೈರ್ಯವನ್ನು ಮೂಡಿಸಲಾಗುತ್ತದೆ. ಹೆಣ್ಣು ಮಕ್ಕಳ ಜೀವನದ ಆದ್ಯತೆಗಳು ವಿವಾಹ ಮತ್ತು ತಾಯ್ತನಗಳೇ ಹೊರತು ವೃತ್ತಿಯಲ್ಲಿ ಮೇಲ್ಮುಖ ಚಲನೆ ಅಥವಾ ಯಶಸ್ಸನ್ನು ಸಾಧಿಸುವುದಲ್ಲ ಎಂಬ ಮೌಲ್ಯಾಚರಣೆಗಳನ್ನು ಪ್ರತಿಪಾದಿಸುವ ಈ ಸಾಮಾಜಿಕ ವ್ಯವಸ್ಥೆ ಅವರು ತಮ್ಮ ಆಕಾಂಕ್ಷೆಗಳನ್ನು ಹತ್ತಿಕ್ಕಲು ಉತ್ತೇಜಿಸುತ್ತದೆ. ರಾಜಕೀಯ ಪ್ರವೇಶದ ಹಂಬಲವಿರುವ ಹೆಣ್ಣು ಮಕ್ಕಳ ಬಗ್ಗೆ ನಕಾರಾತ್ಮಕವಾದ ಚಿತ್ರಣಗಳನ್ನು ಸೃಷ್ಟಿಸಿ ತಮ್ಮ ಜನ್ಮಸಿದ್ಧ ಹಕ್ಕನ್ನು ಪಡೆಯಲು ಪ್ರಯತ್ನಿಸಿದರೆ, ಅವರಲ್ಲಿ ಅಪರಾಧಿ ಪ್ರಜ್ಞೆ ಮೂಡಿಸಲಾಗುತ್ತದೆ. ಮಹಿಳಾ ಮೀಸಲಾತಿ ಇದೆ ಎಂಬ ಕಾರಣಕ್ಕಾಗಿ ರಾಜಕೀಯ ಪ್ರವೇಶ ಪಡೆದರೂ ಕುಟುಂಬದ ಅಥವಾ ಪಕ್ಷಗಳ ಪುರುಷರ ಆಜ್ಞಾಧಾರಕರಂತೆ ಮಹಿಳೆಯರು ನಡೆದುಕೊಳ್ಳಬೇಕು, ಅವರು ಮೇಲ್ಮಟ್ಟದ ರಾಜಕೀಯ ಸ್ಥಾನಗಳನ್ನು ಪಡೆಯಲು ಆಶಿಸಬಾರದು ಎಂಬುದೇ ಅತ್ಯಂತ ಪ್ರಚಲಿತ ಸಾಂಸ್ಕೃತಿಕ ಮೌಲ್ಯ.

ಮತದಾರರ ಪೂರ್ವಾಗ್ರಹ

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣವನ್ನು ಪ್ರವೇಶಿಸಲು ಅಡ್ಡಿ ಬರುವ ಮತ್ತೊಂದು ಕಾರಣವೆಂದರೆ ಅವರ ಪರವಾಗಿ ಮತದಾರರ ಒಲವು ತೀರಾ ಕಡಿಮೆ ಮಟ್ಟದಲ್ಲಿರುವುದು ಎಂದು ಅನೇಕ ಅಧ್ಯಯನಗಳು ಸೂಚಿಸುತ್ತಿವೆ. ಚುನಾವಣೆಗಳಲ್ಲಿ ಮಹಿಳೆಯರ ಯಶಸ್ಸಿನ ಪ್ರಮಾಣವನ್ನು ಪುರುಷರೊಡನೆ ತುಲನೆ ಮಾಡಿ ನೋಡಿದಾಗ, ಮಹಿಳೆಯರೇ ಅಧಿಕ ಅಥವಾ ಸಮಸಂಖ್ಯೆಯಲ್ಲಿರುವ ಮತ ಕ್ಷೇತ್ರಗಳಲ್ಲೂ ಅವರ ಪರವಾಗಿ ಮತಗಳು ಬರುತ್ತಿಲ್ಲವೇಕೆ? ಮಹಿಳಾ ಅಭ್ಯರ್ಥಿಗಳ ಸಾಮರ್ಥ್ಯಗಳನ್ನು ಧನಾತ್ಮಕವಾಗಿ ಬಿಂಬಿಸುವ ಸಂಸ್ಕೃತಿ, ಪಕ್ಷಗಳ ಪ್ರಚಾರ ವಲಯದಲ್ಲಾಗಲೀ, ಅನೇಕ ಮಾಧ್ಯಮ ವರದಿಗಳಲ್ಲಾಗಲೀ ಇಲ್ಲದಿರುವುದು, ಸ್ವತಃ ಮಹಿಳೆಯರೇ ಆಕ್ರಮಣಕಾರಿ ಪ್ರಚಾರದಲ್ಲಿ ತೊಡಗಲು ಹಿಂದೇಟು ಹಾಕುವುದು ಮತದಾರರು ಅವರತ್ತ ಒಲವನ್ನು ತೋರದಿರಲು ಕಾರಣವಾಗುತ್ತವೆ. ರಾಜಕೀಯ ನಾಯಕರಾಗಿ ಮಹಿಳೆಯರ ಸಾಧನೆಗಳಿಗೆ ಗೋಚರತೆ ದೊರೆಯದಿರುವುದು, ಅವರ ವೈಫಲ್ಯಗಳನ್ನು ವೈಭವೀಕರಿಸುವುದು ಕೂಡ ಮತದಾರರ ಪೂರ್ವಾಗ್ರಹಗಳಿಗೆ ಪ್ರಮುಖ ಕಾರಣಗಳು.

ರಾಜಕೀಯ ಪಕ್ಷಗಳ ಪೂರ್ವಾಗ್ರಹ

ರಾಜಕಾರಣ ಎನ್ನುವುದು ಮೂಲತಃ ಅಧಿಕಾರ ಗಳಿಸುವ ಮತ್ತು ಅದನ್ನು ಉಳಿಸಿಕೊಳ್ಳುವ ವ್ಯವಸ್ಥೆ. ಲಿಂಗ ಅಸಮಾನತೆ ಅತ್ಯಂತ ತೀವ್ರ ಸ್ವರೂಪದಲ್ಲಿ ವ್ಯಕ್ತವಾಗುವುದೇ ಪುರುಷ ಪರಮಾಧಿಕಾರ ಮತ್ತು ಸ್ತ್ರೀಯ ಪರಾಧೀನತೆಯನ್ನು ಎತ್ತಿ ಹಿಡಿಯುವುದರಲ್ಲಿ. ರಾಜಕೀಯ ಸಂಸ್ಥೆಗಿಂತ ಇದಕ್ಕೆ ಮತ್ತೊಂದು ನಿದರ್ಶನ ಬೇಕಿಲ್ಲ. 'ಮಹಿಳೆಯರು ಗೆಲ್ಲುವ ಅಭ್ಯರ್ಥಿಗಳಲ್ಲ', 'ಅವರಿಗೆ ಹಣ ಬೆಂಬಲವಿಲ್ಲ', 'ಅವರಿಗೆ ರಾಜಕೀಯ ಅನುಭವವಿಲ್ಲ' 'ಅವರ ಕೌಟುಂಬಿಕ ಜವಾಬ್ದಾರಿಗಳು ಅವರನ್ನು ಸಕ್ರಿಯವಾಗಿ, ಸಮಾಯಾತೀತವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ'–ಇವೇ ಮುಂತಾದ ನಕಾರಾತ್ಮಕ ಸಂದೇಶಗಳನ್ನು ನೀಡಿ ಮತದಾರರಲ್ಲಿ ಪುರುಷ ಕೇಂದ್ರಿತ ರಾಜಕಾರಣ ಪೂರ್ವಾಗ್ರಹಗಳನ್ನು ಬಿತ್ತುತ್ತಲೇ ಬಂದಿದೆ.

ಮುಂದಿನ ದಾರಿಗಳೇನು?

ಇನ್ನು ಮುಂದಾದರೂ ಮಹಿಳೆಯರನ್ನು ಒಳಗೊಳ್ಳುವ ರಾಜಕೀಯ ವ್ಯವಸ್ಥೆಯನ್ನು ಸೃಷ್ಟಿಸುವುದು ಹೇಗೆ? ಚುನಾವಣೆಗಳಲ್ಲಿ ಸ್ಪರ್ಧಿಸಲು ಅವರಿಗೆ ಸಂವಿಧಾನಾತ್ಮಕ ಅವಕಾಶಗಳೇ ಇದ್ದರೂ ಪಕ್ಷ ರಾಜಕಾರಣ ಅದಕ್ಕೆ ಆಸ್ಪದ ನೀಡುವುದಿಲ್ಲ. ಎಲ್ಲಿಯವರೆಗೆ ಮಹಿಳೆಯರಿಗೆ ಅವರ ಜನಸಂಖ್ಯೆಗೆ ತಕ್ಕಂತೆ ಪಾಲು ನೀಡುವುದಿಲ್ಲವೋ, ಅಲ್ಲಿಯವರೆಗೆ ಮಹಿಳೆಯರ ರಾಜಕೀಯ ಸೀಮಾಂತೀಕರಣ ಮುಂದುವರೆಯುತ್ತದೆ. ಈ ಆಶಯ ಕಾಯಿದೆಯ ಸ್ವರೂಪವನ್ನು ತಳೆಯುವವರೆಗೂ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಸ್ಥಾನಗಳನ್ನು ನಿಗದಿಪಡಿಸಲೇಬೇಕು.

ಇದರ ಜೊತೆ–ಜೊತೆಗೆ ಹೆಣ್ಣು ಮಕ್ಕಳನ್ನು ರಾಜಕೀಯ ಸ್ಪರ್ಧೆಗೆ ಇಳಿಯಲು ಮತ್ತು ಜನ ಸಂಪರ್ಕ ಬೆಳೆಸಿಕೊಳ್ಳಲು ಉತ್ತೇಜನವನ್ನು ಕುಟುಂಬ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ನೀಡುವುದು; ಸಣ್ಣ ವಯಸ್ಸಿನಿಂದಲೇ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಲು ಅವಶ್ಯವಾದ ತರಬೇತಿಯನ್ನು ನೀಡುವುದು; ರಾಜಕೀಯ ಪರಿಸರದಲ್ಲಿ ಅನುಭವಾತ್ಮಕ ಜ್ಞಾನವನ್ನೊದಗಿಸುವುದು; ರಾಜಕೀಯ ಪಕ್ಷಗಳಲ್ಲಿ ಇರುವ ಮಹಿಳಾ ಘಟಕಗಳು ತಮ್ಮ ಧ್ವನಿಯನ್ನು ಗಟ್ಟಿ ಮಾಡಿಕೊಂಡು, ಮಹಿಳೆಯರಿಗೆ ಸ್ಥಾನಗಳನ್ನು ನೀಡಲೇಬೇಕೆಂದು ಹಕ್ಕೊತ್ತಾಯ ಮಾಡುವುದು; ಚುನಾವಣೆಗಳಲ್ಲಿ ಸ್ಪರ್ಧಿಸಲು ಸಿದ್ಧರಾದ ಮಹಿಳಾ 'ನಿರ್ಣಾಯಕ ಸಮೂಹ'ಗಳನ್ನು ದೇಶದ ಎಲ್ಲೆಡೆ ಸೃಷ್ಟಿಸುವುದು ಮತ್ತು ನಿರಂತರವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಮಹಿಳೆಯರ ರಾಜಕೀಯ ಒಳಗೊಳ್ಳುವಿಕೆಯ ಅಗತ್ಯದ ಬಗ್ಗೆ ಚರ್ಚೆ–ಸಂವಾದಗಳನ್ನು ನಡೆಸುವುದು–ಈ ಎಲ್ಲ ಚಟುವಟಿಕೆಗಳು ಏಕಕಾಲದಲ್ಲಿ ನಡೆದರೆ ಮಾತ್ರ ಮುಂಬರುವ 25–50 ವರ್ಷಗಳಲ್ಲಿಯಾದರೂ ರಾಜಕಾರಣದಲ್ಲಿ ಲಿಂಗ ಸಮಾನತೆಯ ಗಾಳಿ ಬೀಸಬಹುದೇನೋ.

ಮತ್ತೊಮ್ಮೆ ಆರ್‌ಸಿಬಿ ಮಣಿಸಿದ ಕೆಕೆಆರ್



ಬೆಂಗಳೂರು, ಏ. 26– ಸತತ ನಾಲ್ಕು ಪಂದ್ಯಗಳಲ್ಲಿ ಸೋಲು ಕಂಡಿದ್ದ ಕೋಲ್ಕತ್ತಾ ನೈಟ್‌ರೈಡರ್ಸ್, ಕೊನೆಗೂ ಗೆಲುವಿನ ಸಮಾಧಾನ ಕಂಡಿದೆ. ಕೆಕೆಆರ್ ತಂಡದ ಸಂಘಟಿತ ಬ್ಯಾಟಿಂಗ್ ಹಾಗೂ ಆಕರ್ಷಕ ಸ್ಪಿನ್‌ದಾಳಿಯ ಮುಂದೆ ಮಂಡಿಯೂರಿದ ಆರ್‌ಸಿಬಿ 21 ರನ್‌ಗಳ ಸೋಲು ಕಂಡಿತು. ಅದರೊಂದಿಗೆ ಹಾಲಿ ಐಪಿಎಲ್‌ನಲ್ಲಿ ಆರ್‌ಸಿಬಿ 4 ಪಂದ್ಯಗಳಲ್ಲಿ ಸೋಲು ಕಂಡಂತಾಗಿದೆ. ಇದರಲ್ಲಿ ಎರಡು ಸೋಲುಗಳು ಕೆಕೆಆರ್ ವಿರುದ್ಧವೇ ಬಂದಂತಾಗಿದೆ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ತಂಡ ಆರಂಭಿಕ ಆಟಗಾರ ಜೇಸನ್ ರಾಯ್ ಹಾಗೂ ನಾಯಕ ನಿತೀಶ್ ರಾಣಾ ಸ್ಫೋಟಕ ಬ್ಯಾಟಿಂಗ್‌ನಿಂದ 5 ವಿಕೆಟ್‌ಗೆ 200 ರನ್ ಪೇರಿಸಿತ್ತು. ಗೆಲುವಿಗೆ 201 ರನ್ ಚೇಸಿಂಗ್ ಮಾಡಲು ಆರಂಭಿಸಿದ ಆರ್‌ಸಿಬಿ ಆರಂಭದಿಂದಲೇ ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಾ ಸಾಗಿತು. ವಿರಾಟ್‌ಕೊಹ್ಲಿ ಅರ್ಧಶತಕ ಬಾರಿಸಿದರೂ ಅದು ತಂಡದ ಗೆಲುವಿಗೆ ಸಾಧ್ಯವಾಗಲಿಲ್ಲ. ಇದರಿಂದಾಗಿ ನಿಗದಿತ ಓವರ್‌ಗಳ ಅಂತ್ಯಕ್ಕೆ ಆರ್‌ಸಿಬಿ 8 ವಿಕೆಟ್‌ಗೆ 179 ರನ್ ಬಾರಿಸಲಷ್ಟೇ ಶಕ್ತವಾಗಿ ಸೋಲು ಕಂಡಿತು. ಸತತ ಸೋಲುಗಳಿಂದ ಕಂಗೆಟ್ಟಿದ್ದ ಕೆಕೆಆರ್ ತಂಡಕ್ಕೆ ಆರ್‌ಸಿಬಿ ಗೆಲುವು ದಯಪಾಲಿಸಿದಂತಾಗಿದೆ.

ಟಾಸ್ ಗೆದ್ದ ಬೆನ್ನಲ್ಲಿಯೇ ವಿರಾಟ್ ಕೊಹ್ಲಿ ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದು ನಿತೀಶ್ ರಾಣಾ ಸಂಭ್ರಮಕ್ಕೆ ಕಾರಣವಾಗಿತ್ತು. 2ನೇ ಇನ್ನಿಂಗ್ಸ್ ವೇಳೆಗೆ ಪಿಚ್ ನಿಧಾನಗತಿಯದ್ದಾಗಬಹುದು ಎಂದು ಅಂದಾಜಿಸಿದ್ದು ನಿಜವಾಯಿತು. ಕೆಕೆಆರ್ ಬ್ಯಾಟಿಂಗ್ ವೇಳೆಯಲ್ಲೂ ರನ್‌ಗಾಗಿ ತಡಕಾಡಿತಾದರೂ, ರಾಯ್ ಹಾಗೂ ರಾಣಾ ಸ್ಫೋಟಕ ಇನ್ನಿಂಗ್ಸ್‌ನಿಂದ ದೊಡ್ಡ ಮೊತ್ತ ಪೇರಿಸಿತ್ತು.

ಇನ್ನೊಂದೆಡೆ ಆರ್‌ಸಿಬಿ ಆರಂಭ ಸ್ಫೋಟಕವಾಗಿತ್ತಾದರೂ, ನಿಗದಿತ ಸಮಯದಲ್ಲಿ ವರುಣ್ ಚಕ್ರವರ್ತಿ ಹಾಗೂ ಸುಯಾಶ್ ಶರ್ಮ ವಿಕೆಟ್ ಉರುಳಿಸುವ ಮೂಲಕ ತಂಡದ ಗೆಲುವಿಗೆ ಕಾರಣರಾದರು. ಆರ್‌ಸಿಬಿ ಬ್ಯಾಟಿಂಗ್ ವೇಳೆ ಮಹಿಪಾಲ್ ಲೋಮ್ರರ್ ಆಡುವವರೆಗೂ ತಂಡ ಜಯದ ನಿರೀಕ್ಷೆ ಇಟ್ಟಿತ್ತಾದರೂ ಆ ಬಳಿಕ ಕೆಕೆಆರ್ ಪಂದ್ಯದ ಮೇಲೆ ಹಿಡಿತ ಸಾಧಿಸಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
- FRONT OFFICE ASSISTANT (lady candidate)
- ACCOUNTANT
- HELPER (Boys)

contact 9448067939 9739569260

WANTED
- Cutting machine operator
- Printing machine helpers
- Punching machine operators
- Lamination machine operator

9739569260 9742215777

ಮಾರುವವರು/ಕೊಳ್ಳುವವರು

20x30 ಮನೆ Ground + 1st Floor 55 ಲಕ್ಷ, ದಟ್ಟಗಳ್ಳಿ

9945042875

S.C.E.T. School Hinkal, Mysuru

WANTED TEACHERS

Fluency in English is must
- English: M.A, B.Ed
- Primary Teachers: D.Ed/NTT
- Hindi: M.A B.Ed
- P.E.T: B.PEd/M.PEd
- Office Asst.: B.Com or M.Com

Email your resumes to: chikkammaschoolhinkal@gmail.com

Contact: 0821-2302079 / 8867280449

IMMEDIATE REQUIREMENT

TELECALLERS

FEMALE - 3 POSTS

WITH GOOD COMMUNICATION SKILLS AND REAL ESTATE EXPERIENCE. FRESHERS CAN ALSO APPLY.

OFFICE LOCATION: SARASWATHIPURAM

CONTACT: 8792892155

ROOF WATERPROOFING

GET READY FOR MONSOON

7 YEARS WARRANTY

WITH ELASTOMERIC TECHNOLOGY

REDUCE HEAT UPTO 50% THIS SUMMER

PRICE STARTS FROM ₹30

9611526934 | 9611692311

HARD & SHINE CHEMICALS — Changing The Way The World Does Concrete

---

ಶ್ರೀ ಗೌರಿಶಂಕರ ಟ್ರಾವೆಲ್ಸ್

29–4–23 (4 ದಿನ): ಚಿತ್ರದುರ್ಗ, ಹಂಪಿ, ಕೂಡಲ ಸಂಗಮ, ಬಾದಾಮಿ ಇತ್ಯಾದಿ. 12–5–23 (6 ದಿನ): ಗುರುವಾಯೂರು, ಮುನ್ನಾರ್, ತ್ರಿವೇಂಡ್ರಂ, ಆಲಪ್ಪಿ ಇತ್ಯಾದಿ. 21–5–23 (1 ದಿನ): ಘಾಟಿ ಸುಬ್ರಮಣ್ಯ, ಇಶಾಫೌಂಡೇಷನ್. 26–5–23 (4 ದಿನ): ಶಿರಡಿ, ತ್ರಯ್ಯಂಬಕೇಶ್ವರ್, ಘೃಶ್ಣೇಶ್ವರ್, ಭೀಮಾಶಂಕರ.

ವಿಮಾನ / ಬಸ್ / ಊಟ / ರೂಂ.

Mob: 9620002114

ತಕ್ಷಣ ಬೇಕಾಗಿದ್ದಾರೆ

(ಮಾರ್ಕೆಟಿಂಗ್ ಅಲ್ಲ) ಕರ್ನಾಟಕದಾದ್ಯಂತ MNC ಕಂಪನಿ ಮತ್ತು ಆಫೀಸ್‌ಗಳಿಗೆ 7th, SSLC, PUC, ITI, Dip ಮತ್ತು Any ಡಿಗ್ರಿ ಪಾಸ್/ಫೇಲ್ ಆದಂತ ಯುವಕ/ಯುವತಿಯರು ಬೇಕಾಗಿದ್ದಾರೆ. ESI+PF ನೊಂದಿಗೆ ವಸತಿಯೂಟವಿರುತ್ತದೆ ಸಂಬಳ + OT, 17000-46000

9144646753, 8389985041

HERBAL CURE WELLNESS

PART TIME JOBS

(Part Time / Full Time Jobs) ಮೊಬೈಲ್ ಮೂಲಕ ನಮ್ಮ ಆಯುರ್ವೇದ ಉತ್ಪನ್ನಗಳನ್ನು ಪ್ರಚಾರ ಮಾಡುವ ಮೂಲಕ ದಿನಗಳಲ್ಲಿ 500 ರಿಂದ 5,000 ರವರೆಗೂ ಗಳಿಸಿ. ಸಂಪರ್ಕಿಸಿ:

8197695295

INVEST IN MYSORE

ರಿಂಗ್ ರಸ್ತೆಯಿಂದ 0.5 ಕಿ.ಮೀ ಅಂತರದಲ್ಲಿ ಹಳೆ ಕೆಸರೆ ಹತ್ತಿರ ನಿವೇಶನಗಳು ಲಭ್ಯವಿದೆ

30X40

7022252235

ಮಾರಾಟಕ್ಕಿದೆ

ಬಳಸಿದ ಅಡಿಗೆ ಸಲಕರಣೆಗಳು ಮತ್ತು ಬಂಕರ್ ಮಂಚಗಳು

ವಿವರಗಳಿಗಾಗಿ ಸಂಪರ್ಕಿಸಿ:

9880379822

GOLD COMPANY

ಗಿರವಿ ಚಿನ್ನಾಭರಣ ಖರೀದಿ

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ. ಕೂಡಲೇ ಸಂಪರ್ಕಿಸಿ:–

9964522225

Join ASFT Fashion Design Courses
- Certification Course
- Diploma Course
- Advance Diploma Course

Alpha School of Fashion Technology & Interior Design

AT: SRIRAMPURA, GOKULAM, UDAYAGIRI, MYSORE

Mob: 7829937469, 9901803394

KISSHT Finance Company

Office work & Telecalling ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. Any Degree. 10,000 Fixed salary + incentive.

Mob: 8884455559

ತುರ್ತಾಗಿ ಬೇಕಾಗಿದ್ದಾರೆ

ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು, ಮೇಗಳಾಪುರದಲ್ಲಿರುವ, S.R. ಇಂಡಸ್ಟ್ರೀ ವಾಟರ್ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸಲು ಈ ಕೆಳಕಂಡ ಆಪರೇಟರ್ ಬೇಕಾಗಿದ್ದಾರೆ. Autoblowing, Filling, Labelling & Sink Scraping Labour. ಸಂಪರ್ಕಿಸಿ:

9972729997, 9900134961

REQUIRED FEMALE TELECALLERS

Required Female Telecallers for financial institutions. Qualification: SSLC or PUC with computer knowledge & salary around 7000 + incentives. Work place: SLV ENTERPRISES #2060, 2nd Floor, Vaibhav Complex, Near 101 Ganapati Temple, Agrahara, Mysore-570 004

9513965656, 0821-4281421

ಸೈಟ್ ಫಾರ್ ಸೇಲ್

30x40, ಈಸ್ಟ್ ಫೇಸಿಂಗ್ ಮುಡಾ ಖಾತೆ, ಜ್ಞಾನಭಾರತಿ ಲೇಔಟ್, ದಡದಹಳ್ಳಿ, ಮೈಸೂರು, ಜೆ.ಪಿ.ನಗರದ ರಿಂಗ್ ರೋಡ್‌ನಿಂದ 5 ಕಿ.ಮೀ. ದೂರ.

Mob: 9342123373

ಛತ್ರ ಖಾಲಿ ಇದೆ

2023 ಮೇ 9 – 10 ಮತ್ತು 24 – 25 ಹಾಗೂ ಇತರೆ ಶುಭ ದಿನಗಳಲ್ಲಿ ಕಲ್ಯಾಣ ಭವನ ಖಾಲಿ ಇದೆ. ಸಂಪರ್ಕಿಸಿ:

ದಿವ್ಯರೂಪ ಕಲ್ಯಾಣ ಭವನ

ವಿಜಯನಗರ 2ನೇ ಹಂತ, ಮೈಸೂರು

9448051099, 9880253653

ಬೇಕಾಗಿದ್ದಾರೆ

Zoo ಹತ್ತಿರದ ಮನೆಯೊಂದರಲ್ಲಿ ಸಸ್ಯಾಹಾರಿ ಅಡುಗೆ ಕೆಲಸ ಮಾಡಲು ಹೆಂಗಸರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:

Mob: 9742176440

ಬೇಕಾಗಿದ್ದಾರೆ

18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು. ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು.

7483960098, 9739292222

ತಕ್ಷಣ ಬೇಕಾಗಿದ್ದಾರೆ

ಲಕ್ಷ್ಮೀ ಡ್ರೈವಿಂಗ್ ಶಾಲೆಯಲ್ಲಿ ಕೆಲಸ ಮಾಡಲು
1) ನುರಿತ ಡ್ರೈವರ್‌ಗಳು – 2
2) ಮಹಿಳಾ Receptionist - 1

ವಿಜಯನಗರ, ಹೆಬ್ಬಾಳ್ ನಲ್ಲಿ ವಾಸವಾಗಿರುವವರಿಗೆ ಮೊದಲ ಆದ್ಯತೆ.

Mob: 9986445196

ಎಲ್ಲಾ ಜಾತಿಯ ವಧು–ವರರ ಮಾಹಿತಿ ಕೇಂದ್ರ

Degree, M.A., M.Sc, M.Com, MBA, Engineer, Doctor's ವಿವಾಹ ನೋಂದಣಿಗೆ ಕರೆ ಮಾಡಿ (2nd Marriage Also)

9164743059

WANTED

Drawing Teacher : Diploma in Drawing, Music Teacher : Vidwat/ Bachelor in Carnatic, Abacus Teacher : Trained in Abacus and Vedic Maths

9148102123

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer

ಪಂಡಿತ್ ಸಂತೋಷ್. 9741250896

ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೌಲ್ಯ ಅಕಾಡೆಮಿ

ಕೋಚಿಂಗ್ ಸೆಂಟರ್, ವಿವೇಕಾನಂದನಗರ, ಮೈಸೂರು. ಪ್ರವೇಶ ಪ್ರಾರಂಭ 2023–24 ಬ್ಯಾಚ್. 6th, 7th, 8th, 9th, 10th CBSE, State, Ist & IInd PUC Science. 2nd PUC Supplementary Classes 30 days. (For failed students). Science (PCMB).

Mob: 8197969078

ವಧು ಬೇಕಾಗಿದೆ

ಮೈಸೂರಿನಲ್ಲಿ ವಾಸ, ವಿಧುರ, ವಿಚ್ಛೇದಿತ, ಲಿಂಗಾಯಿತ, 5.7", B.Com., 42, ಮಕ್ಕಳಿಲ್ಲ, ಉತ್ತಮ ದೇಹದಾರ್ಢ್ಯ ಹೊಂದಿರುವ, ಆರೋಗ್ಯವಂತ ಸ್ವಂತ ಮನೆ, ಸ್ವ–ವ್ಯವಹಾರ ಇರುವ ಗೌರವಸ್ಥ ಕುಟುಂಬದಿಂದ ಬಂದಿರುವ ಆರ್ಥಿಕತೆ ಚೆನ್ನಾಗಿರುವ ಬೆಂಮ್ಮ ಬೆಳವಾಡಿ ಗ್ರಾಮದಲ್ಲಿ ಸ್ವಿರಾಸ್ತಿ, ಚರಾಸ್ತಿ ಇರುವ ಲಿಂಗಾಯಿತ ಸುಂದರ, ಎರಡನೇ ವರಕ್ಕೆ ಬಡವರು ಮತ್ತು ಜಾತಿಯ ವಯಸ್ಸಿನ ಅಭ್ಯಂತರವಿಲ್ಲದ, ಆರೋಗ್ಯವಂತ, ವಿಚ್ಛೇದಿತ ವಿಧವೆ, ಅನಾಥೆ ಕನ್ಯೆ ಬೇಕಾಗಿದ್ದಾರೆ, 2ನೇ ಮದುವೆಗೆ, ನೇರ ಮಾತುಕತೆಗೆ ಒತ್ತು, ಭದ್ರತೆಗೆ (Security) ಯೋಚಿಸುವಂತಿಲ್ಲ, ಸೂಕ್ತ ವಿರ್ಚಾಡು ಮಾಡಿದೆ. ಮಧ್ಯವರ್ತಿಗಳಿಗೆ ಅವಕಾಶವಿದೆ. ಅಭಿಪ್ರಾಯವಿದ್ದಲ್ಲಿ ವರ್ಣರಂಜಿತ ಭಾವಚಿತ್ರ (ಇತ್ತೀಚಿನ) ಮತ್ತು ವಿವರಣೆ ಸಹಿತ ಮುಂದುವರೆಯಿರಿ.

Whatsapp: 99001-60390

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ: 7406375196, 9880548596

ಬೇಕಾಗಿದ್ದಾರೆ

1.) ಮಹಿಳಾ ಸೆಕ್ಯೂರಿಟಿ ಗಾರ್ಡ್ ಸಮಯ: 11AM to 9PM ಸ್ಥಳ ಹಡ್ಸನ್ ವೃತ್ತ
2. ಮಹಿಳಾ ಹೌಸ್ ಕೀಪರ್ ಸ್ಥಳ: GSSS ಮಹಿಳಾ ಕಾಲೇಜ್ ಹಾಸ್ಟೆಲ್, ಮೇಟಗಳ್ಳಿ
3) ಸೆಕ್ಯೂರಿಟಿ ಗಾರ್ಡ್‌ಗಳು, ಸ್ಥಳ: ಎನ್.ಆರ್. ಮೊಹಲ್ಲಾ, ಸಿಟಿ ಸುತ್ತಮುತ್ತ ಹಾಗೂ ಶ್ರೀರಂಗಪಟ್ಟಣ

7795426261 9242406261

ಬೇಕಾಗಿದ್ದಾರೆ

1) Accountant: ವಿದ್ಯಾರ್ಹತೆ: B.Com (Female Only) ಅನುಭವ: 01 or 2 Years (Computer Knowledge Expert with Excell & Tally ವಿದ್ಯಾರ್ಹತೆ: BE/Diploma Civil Graduates Construction / Field Work) ಅನುಭವ : 01 or 2 Years(Male Only, 2) SUPERVISOR, OFFICE BOYS (BASIC COMPUTER SKILL) Age Limit : 23-40 Yrs (Males Only) Office Location : Siddartha Nagar Mysore

Office: 0821-3588801

Ph: 9538320877, 7259382467

Sudarshan Saur SOLAR WATER HEATER

ATTRACTIVE OFFER

ಸೇಲ್ಸ್&ಸರ್ವೀಸ್

10 ವರ್ಷಗಳ ಗ್ಯಾರಂಟಿ

Bajaj Finserv Available

SUNZONE SOLAR SYSTEM

Vishwamanava Double Road, Kuvempunagar, Mysuru

9845175443

(30X40) SALE

@ "OLIVE ENCLAVE" Mys - B'Lore High Way 3km from Columbia Hospital. 28 Lakhs

9538839926

ಟಿವಿ ರಿಪೇರಿ

ಎಲ್‌ಸಿಡಿ, ಎಲ್‌ಇಡಿ ಟಿವಿ

Service at your doorstep.

Mob: 9880066886

ಬೇಕಾಗಿದ್ದಾರೆ

ಮೈಸೂರು ಕಾಫಿ ಕೆಫೆಗೆ ಕಾಫೀ / ಟೀ ಮಾಡುವುದಕ್ಕೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು: 20 ರಿಂದ 35ರ ಒಳಗೆ.

Mob: 7259483181

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ – (30 yrs to 55 yrs).
2) ಹೌಸ್‌ಕೀಪಿಂಗ್ ಸೂಪರ್‌ವೈಸರ್ಸ್.
3) ಹೌಸ್‌ಕೀಪಿಂಗ್ ಹುಡುಗರು.

PF, ESI ಮತ್ತು ಊಟದ ವ್ಯವಸ್ಥೆ ಇರುತ್ತದೆ.

9739166772, 9880419847

ವಿಶ್ವಾಸಾರ್ಹ ಬ್ಯಾಂಕ್ ಸಂಸ್ಥೆಯಲ್ಲಿ ಉದ್ಯೋಗ ಅವಕಾಶ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ

ಕೇಂದ್ರ, ರಾಜ್ಯ, ಸಾರ್ವಜನಿಕ ಸಂಸ್ಥೆಯ ನಿವೃತ್ತ ನೌಕರರು ಹಾಜರಾಗಬಹುದು, ವಿದ್ಯಾರ್ಹತೆ SSLC, Above Any Degree, ವಯಸ್ಸು 30 ವರ್ಷದಿಂದ 66 ವರ್ಷ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಬ್ಯಾಂಕ್ ಪಾಸ್ (1st Page) ತರಬೇತಿಯ ಶಿಬಿರ 5 ದಿವಸಗಳು ನಡೆಯುತ್ತದೆ. ಊಟದ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ ತರಬೇತಿಯ ಶಿಬಿರ ನಡೆಯುವ ದಿನಾಂಕ 27–04–2023 ಸಮಯ 10.30ರಿಂದ 3.30 ಸ್ಥಳ: ದೊಡ್ಡ ಗಡಿಯಾರದ ಹತ್ತಿರ ಮೈಸೂರು

9449068132, 9480055885

WANTED RESIDENTIAL TEACHERS IN MYSORE CITY
- English
- Social Science
- Physical Education

9449320140

ಮನೆಯಿಂದಲೇ ಕೆಲಸ

ಪೆನ್ಸಿಲ್ ಪ್ಯಾಕಿಂಗ್, ಸ್ಟೋರಿ ರೈಟಿಂಗ್, ಫಾರಂ ಫಿಲ್ಲಿಂಗ್, ಡೇಟಾ ಎಂಟ್ರಿ, ಮೆಡಿಕಲ್ ಬಾಕ್ಸ್ ಪ್ಯಾಕಿಂಗ್, ಫುಡ್ ಪ್ಯಾಕಿಂಗ್ ಹುದ್ದೆಗಳು, ವಯೋಮಿತಿ ಇಲ್ಲ. ಗಳಿಸಿ ವಾರಕ್ಕೆ 10,000 ದಿಂದ 15,000. ಸಂಪರ್ಕಿಸಿ:

Mob: 7349431254

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ

ವಿಜಯನಗರ ಮತ್ತು ಜೆ.ಪಿ. ನಗರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಬಳ: 9000 (12 ಗಂಟೆ).

9901607889, 8710040058

Change of Name

I, Vinay Adithya Subrahmanya, residing at #134, 5th Cross, 2nd Main, 1st Stage, Vijaynagar, Mysuru-570 017, have changed my name from Vinay Adithya S. to Vinay Adithya Subrahmanya on my own free will. In addition, I confirm the correction in my father's name from Subramanya S. to Subrahmanya Surappa. I have sworn in before Notary Marasegowda, on 26-04-2023. In all my future records and dealings, I will be known as Vinay Adithya Subrahmanya, S/o Subrahmanya Surappa.

Sd/- Vinay Adithya Subrahmanya

ಬೇಕಾಗಿದ್ದಾರೆ

01) ವಿದ್ಯಾರ್ಹತೆ: BE / Diploma Civil Graduates (Female only). ಅನುಭವ: 01 or 02 years. 02) ವಿದ್ಯಾರ್ಹತೆ: PUC and above (Field work). ಅನುಭವ: 01 or 02 years (Male only). ಸಂಪರ್ಕಿಸಿ:

9945362868, 9448044290

ಉದ್ಯೋಗಾವಕಾಶ

ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರೂ, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಹಾಗೂ ಹೌಸ್‌ಕೀಪಿಂಗ್ ಕೆಲಸಕ್ಕೆ ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ: 7/10/PUC, ANM, GNM ಪಾಸ್ / ಫೇಲ್. ತಿಂಗಳ ಸಂಬಳ: Rs. 9000 to Rs. 18,000.

9606514441, 0821-4242351, 7349278501

---

50 LAKHS

WANTED FINANCE (Loan) On Resort Land Documents, (Worth 2 Crore)

9739627282

ಬೇಕಾಗಿದ್ದಾರೆ

ಮೇಟಗಳ್ಳಿ ಸಿಪೆಟ್ (CIPET) ಕಾಲೇಜ್ ಹತ್ತಿರ ಇರುವ ಕೋಳಿ ಫುಡ್ ಕಾರ್ಖಾನೆಯಲ್ಲಿ ಲೋಡಿಂಗ್, ಅನ್‌ಲೋಡಿಂಗ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಸಂಬಳ ತಿಂಗಳಿಗೆ 16,300 ರೂಪಾಯಿಗಳು ಸಂಪರ್ಕಿಸಿ: ಸಾಯಿ ಕೃಪ ಎಂಟರ್‌ಪ್ರೈಸಸ್

ಬೋರೇಗೌಡ – 8050905152
ರತ್ನಯ್ಯ – 9900889325
ಪ್ರಕಾಶ – 8971460235

ಸೈಟುಗಳು ಮಾರಾಟಕ್ಕಿವೆ

MUDA Approved ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್, ಮೈಸೂರು.

Mob: 8050345574

ಸಂಪು ಕ್ಲೀನಿಂಗ್

ಸಂಪರ್ಕಿಸಿ: 9591815191

JOBNET

ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.

9731891409

LEARN WITH THE LEADER

Architectural / Civil CAD

Mechanical CAD

Electrical CAD

CADD® CENTRE

Skills Driven Job Led

V.V. Mohalla 0821-4006323

Saraswathipuram 0821-4288882

Match Makers, Bride/ Grooms ವಧು ವರರ ಮಾಹಿತಿ ಕೇಂದ್ರ

1) ಡಾಕ್ಟರ್ ಶ್ರೀಮಂತನಿಗೆ ವಧುಬೇಕು. 2) ಮನೆ ಅಳಿಯ ವಧುವಿಗೆ ವರಬೇಕು (PUC, 34 ವರ್ಷ) ಒಂಟಿ 28 ವಧುಗಳಿಗೆ ವರ ಬೇಕು. ಎಲ್ಲಾ ಜಾತಿಯ Govt/Pravate ಡಾಕ್ಟರ್, ಇಂಜಿನಿಯರ್, Degree All Education ವಧುಗಳು/ವರಗಳಿದ್ದಾರೆ. 1st Marriage/Divorcee ವಿಧವೆಯರು/ವಿಧುರರರು, ಕರ್ನಾಟಕಾದ್ಯಂತ 32 ಕಚೇರಿಗಳಿವೆ ಎಲ್ಲಾ ಕಚೇರಿಯ ಲಕ್ಷಾಂತರದಲ್ಲಿ ಆಯ್ಕೆ ಮಾಡಿ

7975728012

ಮದ್ದೂರಿನಲ್ಲಿ ಮನೆ ಮಾರಾಟಕ್ಕಿದೆ

3500 Sq.ft., 3 ಮನೆಯುಳ್ಳ, ಬಾಡಿಗೆ ಬರುತ್ತಿರುವ, ಜಾಗ ಕೋಟೆ ಬೀದಿ ಮದ್ದೂರಿನಲ್ಲಿ ಮಾರಾಟಕ್ಕಿದೆ, ಅವಶ್ಯಕತೆ ಇದ್ದರೆ ಮಾತ್ರ

9019597699

FOR SALE

18,000 Sqft. Land Gayathripuram Mysore

9739627282

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ವಿಶೇಷ ಮಹಾಸಭೆ

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ವಿಶೇಷ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ: 01–05–2023 ರಂದು ಸೋಮವಾರ ಬೆಳಿಗ್ಗೆ 10.30ರ ವೇಳೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ ಮೂಡಾ ಗ್ರೌಂಡ್ ಆವರಣ ಪಕ್ಕ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು–570018 ಇಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಸಂಘದ ಸದಸ್ಯರೆಲ್ಲರೂ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ

ಬೇಕಾಗಿದ್ದಾರೆ

ಕಂಪ್ಯೂಟರ್ ಆಫೀಸ್ನಲ್ಲಿ "ಸರ್ವೀಸ್ ಇಂಜಿನಿಯರ್" ಕೆಲಸಕ್ಕೆ ITI/PUC/Dip ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹಾರ್ಡ್‌ವೇರ್ ಮತ್ತು ನೆಟ್ವರ್ಕಿಂಗ್, ಕಂಪ್ಯೂಟರ್ ರಿಪೇರಿಯಲ್ಲಿ ಅನುಭವ ಮತ್ತು ದ್ವಿಚಕ್ರ ವಾಹನವುಳ್ಳವರಿಗೆ ಹೆಚ್ಚಿನ ಆದ್ಯತೆ

9845111623

ಸೈಟು ಮಾರಾಟಕ್ಕಿದೆ

DTCP ಅಪ್ರೂವ್ಡ್ 9-11ಎ ಖಾತೆ, 40x50, 40x40, 30x40 ಬ್ಯಾಂಕ್ ಲೋನ್ ದೊರೆಯುತ್ತದೆ ಮಾಲೀಕರಿಂದ ನೇರವಾಗಿ ಮಾರಾಟ ಮೈಸೂರು–ಬನ್ನೂರು ರಸ್ತೆ

9945558166

ಬೇಕಾಗಿದ್ದಾರೆ

ಮೈಸೂರು ಸಿಟಿ, ಹೆಬ್ಬಾಳು, ವಿಜಯನಗರಕ್ಕೆ ಈ ಕೆಳಗಿನ ಕೆಲಸಗಾರರು ಬೇಕಾಗಿದ್ದಾರೆ.
1) ಸೆಕ್ಯೂರಿಟಿ ಗಾರ್ಡ್–ಪುರುಷ (12 Hrs) Edu: 10th/PUC Age: Below 45 Yrs
2) ಹೆಲ್ಪರು–ಮಹಿಳೆಯರು (10 Hrs) Edu: 10th Pass/Fail Age:Below 40 Yrs

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9739199355 9483853975

ಬೇಕಾಗಿದ್ದಾರೆ

ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary : 13000-21000+ESI+PF ವಿದ್ಯಾರ್ಹತೆ: 10th, PUC, ITI, Diploma & Any Degree ಇಂದೇ ಸಂಪರ್ಕಿಸಿ:

9035734821

ತಕ್ಷಣ ಬೇಕಾಗಿದ್ದಾರೆ

ಕುವೆಂಪುನಗರ ಮತ್ತು ಗಂಗೋತ್ರಿಯ ಜೆ.ಸಿ.ಕಾಲೇಜ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ: 15500+W/o ಊಟ ತಿಂಡಿ ಸೌಲಭ್ಯವಿರುತ್ತದೆ.

9620777819 9880727819

ಬಾಡಿಗೆಗೆ

ಕಛೇರಿ, ವಾಣಿಜ್ಯ, ಬ್ಯಾಂಕ್ ಮೊದಲನೇ ಮಹಡಿ 2000 Sq.Ft. ನಿರ್ಮಲ ಆಸ್ಪತ್ರೆ (OLD) ಹತ್ತಿರ ಟಿ.ನರಸೀಪುರ ಮೇನ್ ರಸ್ತೆ, ಗಿರಿದರ್ಶಿನಿ ಬಡಾವಣೆ, ಆಲನಹಳ್ಳಿ, ಮೈಸೂರು

9964346133 9986205201

LAND FOR SALE

20 Gunta Land for Sale at Jettihundi Grama

9902081832

SITE FOR SALE

30X40 E/F Vishwaprajna Badavane Near Suvarna Nagara

9731937223

SITE FOR SALE

40X60 W/F, Form No-3 Kamadenu Badavane, Bogadi

9902081832

ಬೇಕಾಗಿದ್ದಾರೆ

ನುಡಿ ಕನ್ನಡ ಟೈಪಿಂಗ್ ಮಾಡಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಶ್ರೀರಾಘವೇಂದ್ರ ಎಂಟರ್‌ಪ್ರೈಸಸ್ ಪೂರ್ವ ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ಡಾ॥ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ವೃತ್ತ ಸಾತಗಳ್ಳಿ ಬಡಾವಣೆ, ಮೈಸೂರು

ಮಹಾದೇವಿ 9535292036 7259631189

ತಕ್ಷಣ ಬೇಕಾಗಿದ್ದಾರೆ

Toyota, ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್‌ಬಜಾರ್‌ಗಳಿಗೆ 5th, 10th, PUC, Degree ITI, Diplomaದವರು ನೇರ ನೇಮಕಾತಿಯಿದೆ. 18,000/- 56,000/- ವಸತಿಯೂಟವಿದೆ.

9731670789

ಬೇಕಾಗಿದ್ದಾರೆ

ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಹೆಬ್ಬಾಳು ಮತ್ತು ಮೈಸೂರು ನಗರ.

7829393555 9739376831

JOB'S @ MYSORE

Age - (18-24), 10th, PUC, BBM ಯಾದ Only Freshers *No Fee* EARN (8400-16,500) PM * ಪರಸ್ಥಳದವರಿಗೆ ಮಾತ್ರ ವಸತಿ, ವಿವರಗಳೊಂದಿಗೆ ನೇರ ಸಂಪರ್ಕಿಸಿ

ಕಾವ್ಯ: 9342827788

(Walk - In 11 AM to 3PM)

ಬೇಕಾಗಿದ್ದಾರೆ

1. ಶಾಲಾ ವಾಹನಕ್ಕೆ ಚಾಲಕರು (ಸ್ಕೂಲ್ ಬಸ್ ಡ್ರೈವರ್) ಬೇಕಾಗಿದ್ದಾರೆ.
2. ಸ್ಕೂಲ್ ಆಯಾ ಹಾಗೂ ಅಟೆಂಡರ್ ಬೇಕಾಗಿದ್ದಾರೆ. ಅಗ್ರಹಾರ, ಸಿದ್ಧಾರ್ಥಲೇಔಟ್, ನಜರ್‌ಬಾದ್, ಎನ್.ಆರ್.ಮೊಹಲ್ಲಾ, ಬೆಳವಾಡಿ, ಹೂಟಗಳ್ಳಿ, ಮೇಟಗಳ್ಳಿ, ವಿಜಯನಗರ ಈ ಸ್ಥಳಗಳಲ್ಲಿ ಇರುವವರು ಸಂಪರ್ಕಿಸಿ:

8431315761

ಬೇಕಾಗಿದ್ದಾರೆ

Shift (ಪಾಳಿಯಲ್ಲಿ) Helpers ಕೆಲಸ ನಿರ್ವಹಿಸಲು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಮಿಕಲ್ ಫ್ಯಾಕ್ಟರಿಯಲ್ಲಿ, ವಯಸ್ಸು 18 ರಿಂದ 45 ರೊಳಗೆ, ಪುರುಷರು ಮಾತ್ರ, ಒಳ್ಳೆಯ ವೇತನ ರೂ.11,750/– ಹಾಗೂ ಇ.ಎಸ್.ಐ, ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ

9731976148

ಟೂರ್ಸ್ & ಟ್ರಾವೆಲ್ಸ್

28 ಜೂನ್ 2023– 13 ದಿನಗಳು ದೆಹಲಿ–ಅಮರನಾಥ–ಕಾಶ್ಮೀರ–ವೈಷ್ಣೋದೇವಿ–ವಾಘಾಗಡಿ–ಲವಾ ಖುಷಾ/ಅಮೃತಸರ ಜನ್ಮಸ್ಥಳ 9 ಜುಲೈ 2023 – 6 ದಿನಗಳು–ಕಾಶ್ಮೀರ–ಗುಲ್ಮರ್–ಸೋನಾಮಾರ್ಗ್–ಬಾಲ್ತಾಲ್–ಅಮರನಾಥ್ ಹಿಮಲಿಂಗ್ ದರ್ಶನ್–ಕಾಶ್ಮೀರ

ಏಷ್ಯನ್ ಟೂರ್ಸ್ ಮತ್ತು ಟ್ರಾವೆಲ್ಸ್ ರಾಮಕೃಷ್ಣ

9342287551

ಬೇಕಾಗಿದ್ದಾರೆ

ಕಂಪ್ಯೂಟರ್ ಟೀಚರ್ ಕಂ. ಕಂಪ್ಯೂಟರ್ ಆಪರೇಟರ್ Tally, Basic, DTP Compulsory ಮತ್ತು ಹೋಟೆಲ್‌ನಲ್ಲಿ ಅಡುಗೆ ಮತ್ತು ಚಾಟ್ಸ್ ಮಾಡಲು ಬೇಕಾಗಿದ್ದಾರೆ.

9110689792

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಹೂಟಗಳ್ಳಿ, ಮೇಟಗಳ್ಳಿ, ಮತ್ತು ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಉತ್ತಮ ಹಾಗೂ ಆಕರ್ಷಕ ವೇತನ PF, ESI ಮತ್ತು ಇತರೆ ಸೌಲಭ್ಯಗಳು ದೊರೆಯುತ್ತದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಗಿನ ಫೋನ್ ನಂಬರನ್ನು ಸಂಪರ್ಕಿಸಿ:

6364857751, 6364857753

ತಕ್ಷಣ ಬೇಕಾಗಿದ್ದಾರೆ

ಕೇರ್ಗಳ್ಳಿ ಹತ್ತಿರ ಲೇಔಟ್ ಹಾಗೂ ಬನ್ನಿಮಂಟಪ, ಸಿಟಿಬಸ್‌ಸ್ಟಾಂಡ್, ವಿದ್ಯಾರಣ್ಯಪುರಂ, ಹೆಬ್ಬಾಳ್, ಇಲವಾಲ, ಮಾರಶೆಟ್ಟಿಹಳ್ಳಿ, ಪ್ರದೇಶಗಳಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಊಟ & ವಸತಿ ESI & PF ಇರುತ್ತದೆ. ವಯಸ್ಸು 25 ರಿಂದ 60 ವರ್ಷ

9632049421

WANTED

Insurance Advisers For SBI LIFE

Qualification - SSLC & above

Age Min-25 Yrs

Maximum-65 Yrs

Contact:Manager

9880536727

ಹೆಲ್ತ್ ಕೇರ್ ತರಬೇತಿ

SSLC/PUC ಆದವರಿಗೆ ಡಿಪ್ಲೋಮೋ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM/GNM ಆದವರಿಗೆ ಕೆಲಸವಿದೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ ಮೈಸೂರು

9916908454

ಬೇಕಾಗಿದ್ದಾರೆ

ಶಾಲೆಯಲ್ಲಿ ಕೆಲಸ ಮಾಡಲು ಹೌಸ್ ಕೀಪಿಂಗ್ ಸ್ಟಾಫ್, ಆಯಾ, ಡ್ರೈವರ್ ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ

9148102123

ಶಿರಡಿ ಪ್ರವಾಸ

12-May 2023

3 ಜ್ಯೋತಿರ್ಲಿಂಗ ಸಮೇತ 4 ದಿನಗಳು ಪಂಡರಾಪುರ, ಶನಿಸಿಂಗಪುರ, ಗೃಷ್ಣೇಶ್ವರ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ, ಭೀಮಾಶಂಕರ.

MYTHRI TRAVELS

9482421499

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಜೆಡಿಎಸ್ ಭದ್ರಕೋಟೆಯಲ್ಲಿ ಯೋಗಿ ಭರ್ಜರಿ ರೋಡ್ ಶೋ





ಮಂಡ್ಯ, ಏ.26(ಮೋಹನ್‌ರಾಜ್)– ಜೆಡಿಎಸ್ ಭದ್ರಕೋಟೆ ಎಂದೇ ಕರೆಯಲ್ಪಡುವ ಸಕ್ಕರೆ ನಾಡು ಮಂಡ್ಯದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭರ್ಜರಿ ರೋಡ್ ಶೋ ನಡೆಸಿದರು.

ನಗರದ ಸಂಜಯ ವೃತ್ತದಿಂದ ಆರಂಭವಾದ ರೋಡ್ ಶೋ ಮಹಾವೀರ ಚಿತ್ರ ಮಂದಿರದವರೆಗೂ ಸಾಗಿತು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಯೋಗಿ ಬರುತ್ತಿದ್ದಂತೆ ಹರ್ಷೋದ್ಗಾರದಿಂದ ಜಯಘೋಷ ಮೊಳಗಿಸುತ್ತಾ, ಬಿಡಿ ಹೂ ಹಾಗೂ ಕೇಸರಿ ಪಟಗಳನ್ನು ಎಸೆಯುತ್ತಿದ್ದ ದೃಶ್ಯ ಕಂಡು ಬಂತು.

ಬೆಳಗ್ಗೆ 11 ಗಂಟೆಗೆ ಆರಂಭವಾಗಬೇಕಿದ್ದ ರೋಡ್ ಶೋ 12.15ಕ್ಕೆ ಆರಂಭವಾಯಿತು. ಲಕ್ನೋನಿಂದ ವಿಶೇಷ ವಿಮಾನದ ಮೂಲಕ ಮೈಸೂರಿನ ಮಂಡಕಹಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಯೋಗಿ, ಅಲ್ಲಿಂದ ವಿಶೇಷ ಹೆಲಿಕ್ಯಾಪ್ಟರ್‌ನಲ್ಲಿ ಮಂಡ್ಯ ನಗರದ ಪಿಇಎಸ್ ಕಾಲೇಜು ಆವರಣದಲ್ಲಿರುವ ಕೆಸಿಎ ಕ್ರಿಕೆಟ್ ಕ್ರೀಡಾಂಗಣಕ್ಕೆ ಆಗಮಿಸಿದರು. ಅಲ್ಲಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಯೋಗಿ ಅವರನ್ನು ಸ್ವಾಗತಿಸ ಲಾಯಿತು. ಬಳಿಕ ರಸ್ತೆ ಮೂಲಕ ಪಿಇಎಸ್ ಕಾಲೇಜು ರಸ್ತೆ ಬೆಂಗಳೂರು– ಮೈಸೂರು ಹೆದ್ದಾರಿ ಮೂಲಕ ಸಂಜಯ ವೃತ್ತಕ್ಕೆ ಆಗಮಿಸಿದರು. ಯೋಗಿ ಆಗಮಿಸುತ್ತಿದ್ದಂತೆಯೇ ಪೂರ್ಣಕುಂಭ ಸ್ವಾಗತ ಕೋರಲಾಯಿತು. ನೆರೆದಿದ್ದ ಕಲಾ ತಂಡ, ಪೂಜಾ ತಂಡ ಹಾಗೂ ಸಾಂಸ್ಕೃತಿಕ ತಂಡಗಳು ಯುಪಿ ಸಿಎಂಗೆ ಭರ್ಜರಿ ಸ್ವಾಗತ ನೀಡಿದವು. ಅಲ್ಲಿಂದ ತೆರೆದ ವಾಹನದಲ್ಲಿ 500 ಮೀಟರ್ ರೋಡ್ ಶೋ ನಡೆಸಿದ ಯೋಗಿ, ಮಂಡ್ಯ ಜಿಲ್ಲೆಯ ಏಳು ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು.

ರೋಡ್ ಶೋನಲ್ಲಿ ತೆರೆದ ವಾಹನದಲ್ಲಿ ಬಿಜೆಪಿ ಅಭ್ಯರ್ಥಿಗಳಾದ ಅಶೋಕ್ ಜಯರಾಂ, ಕೆ.ಸಿ.ನಾರಾಯಣಗೌಡ, ಇಂಡುವಾಳು ಸಚ್ಚಿದಾನಂದ, ಮುನಿರಾಜು, ಡಾ.ಇಂದ್ರೇಶ್, ಸುಧಾ ಶಿವರಾಮೇಗೌಡ, ಎಸ್.ಪಿ.ಸ್ವಾಮಿ ಇದ್ದರು. ಮಂಡ್ಯ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ನೇತೃತ್ವದಲ್ಲಿ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗಿತ್ತು.

ಯೋಗಿ ಆಗಮನದ ಹಿನ್ನಲೆಯಲ್ಲಿ ಎಸ್‌ಪಿಜಿ ತಂಡ ವೇದಿಕೆ ಹಾಗೂ ರೋಡ್ ಶೋ ಸಾಗುವ ರಸ್ತೆಯನ್ನು ಪರಿಶೀಲನೆ ನಡೆಸಿದ್ದರು. ಮೋದಿ ಆಗಮಿಸಿದ್ದ ಸಂದರ್ಭದಲ್ಲಿ ರೋಡ್ ಶೋ ಮಾದರಿಯಂತೆ ಇಲ್ಲೂ ಸಹ ರಸ್ತೆಯ ಎರಡು ಬದಿಯಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿತ್ತು. ಯೋಗಿ ಆಗಮಿಸುವ ಅರ್ಧ ಗಂಟೆ ಮುಂಚೆಯೇ ಬೆಂಗಳೂರು– ಮೈಸೂರು ರಸ್ತೆಯನ್ನು ಬಂದ್ ಮಾಡಲಾಗಿತ್ತು. ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ರಸ್ತೆ ಬಂದ್ ಆಗಿತ್ತು.

ಅತಂತ್ರ ಫಲಿತಾಂಶದ ಹಗಲು ಕನಸು ಕಾಣುತ್ತಿದ್ದಾರೆ

ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ಸಂಸದೆ ಸುಮಲತಾ ಕುಹುಕ



ಮಂಡ್ಯ,ಏ.26(ಮೋಹನ್‌ರಾಜ್)– ರಾಜ್ಯದಲ್ಲಿ ಅತಂತ್ರ ಫಲಿತಾಂಶ ಬರಲಿದೆ. ನಾನು ಮುಖ್ಯಮಂತ್ರಿ ಆಗಬಹುದೆಂದು ಯಾರೋ ಒಬ್ಬರು ಕನಸು ಕಾಣುತ್ತಾ ಕುಳಿತಿದ್ದಾರೆ ಎಂದು ಹೆಸರೇಳದೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಸಂಸದೆ ಸುಮಲತಾ ಅಂಬರೀಶ್ ಕುಹುಕವಾಡಿದರು.

ಬುಧವಾರ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಆಯೋಜಿಸಿದ್ದ ಬಿಜೆಪಿ ಪಕ್ಷದ ಬೃಹತ್ ಸಮಾವೇಶ ಹಾಗೂ ಜಿಲ್ಲೆಯ ಏಳು ಕ್ಷೇತ್ರಗಳ ಅಭ್ಯರ್ಥಿಗಳ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಫಲಿತಾಂಶ ಅತಂತ್ರವಾದರೆ ನಾನೇ ಸಿಎಂ ಆಗಬೇಕು ಎಂದು ಕನಸು ಕಾಣುತ್ತಿದ್ದಾರೆ. ಅತಂತ್ರವಾದರೆ ಸರ್ಕಾರ ರಚಿಸಬಹುದೆಂಬ ಅವರ ಹಗಲುಗನಸು ನನಸಾಗಲ್ಲ. ಮಂಡ್ಯದಲ್ಲಿ ಬದಲಾವಣೆ ಬೇಕಿದೆ. ಕಳೆದ ಬಾರಿ ಚುನಾವಣೆಯಲ್ಲಿ ಒಂದು ಪಕ್ಷದ 7ಕ್ಕೆ 7 ಶಾಸಕರನ್ನು ಆಯ್ಕೆ ಮಾಡಿದ್ದೀರಿ. ಅವರೆಲ್ಲಾ ಯಾವ ಕೆಲಸ ಮಾಡಿದ್ದಾರೆ ಒಂದನ್ನಾದರೂ ತೋರಿಸಿ ಎಂದು ಗುಡುಗಿದರು.

ಉತ್ತರ ಪ್ರದೇಶ ಒಂದು ಕಾಲದಲ್ಲಿ ಗೂಂಡಾ ರಾಜ್ಯವಾಗಿತ್ತು. ಜನರು ಓಡಾಡಲು ಹೆದರುವಂತಾಗಿತ್ತು. ಜನ ಬಹುಮತ ನೀಡಿ ಯೋಗಿ ಆದಿತ್ಯನಾಥ್ ಅವರನ್ನು ಆಯ್ಕೆ ಮಾಡಿದರು. ಇವತ್ತು ಯೋಗಿಗೆ ಹೆದರಿ ಗೂಂಡಾಗಳು ಓಡಿ ಹೋಗಿದ್ದಾರೆ. ಅಕ್ರಮಗಳನ್ನು ಬುಲ್ಡೋಜರ್ ಮೂಲಕವೇ ತಡೆದಿದ್ದಾರೆ. ಈ ವಿಚಾರ ನಮಗೂ ಅನ್ವಯ ಆಗಬೇಕು ಅಂದರೆ ಸ್ಪಷ್ಟ ಬಹುಮತದ ಮೂಲಕ ಡಬಲ್ ಇಂಜಿನ್ ಸರ್ಕಾರ ಆಯ್ಕೆ ಮಾಡಬೇಕು. ಮಂಡ್ಯದ ರಾಜಕಾರಣ ನೋಡಿದ್ದೀರಾ ಇಲ್ಲಿ ಬದಲಾವಣೆ ಆಗಬೇಕು. ಸಂಸದೆಯಾಗಿ ಉತ್ತಮವಾಗಿ ಕೆಲಸ ಮಾಡಲು ಮೋದಿ ನನಗೆ ಸಂಪೂರ್ಣ ಸಹಕಾರ ನೀಡಿದ್ದಾರೆ ಎಂದರು.

ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥ್ ನಾರಾಯಣ ಮಾತನಾಡಿ, ಯೋಗಿ ಪದಾರ್ಪಣೆಯಿಂದ ನಾಡಿನಲ್ಲಿ ಸಂಚಲನ ಉಂಟಾಗಿದೆ. ಅವರ ಶಕ್ತಿ ನಮ್ಮೆಲ್ಲರಿಗೂ ಬರಲಿ. ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಿಗೆ ಯೋಗಿ ಆಗಮನದಿಂದ ಶಕ್ತಿ ಬಂದಿದೆ. ಅಶೋಕ್ ಜಯರಾಂ ಸೇರಿದಂತೆ ಎಲ್ಲರಿಗೂ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು.

ಸನಾತನ ಧರ್ಮವನ್ನು ಎರಡು ಸಾವಿರ ವರ್ಷಗಳ ಹಿಂದೆ ನಾಡಿಗೆ ಪರಿಚಯಿಸಿದ್ದು ಇದೇ ಮಂಡ್ಯ. ಸನಾತನ ಧರ್ಮವನ್ನು ಉಳಿಸೋದು ಬಿಜೆಪಿ. ಆದ್ದರಿಂದ ಬಿಜೆಪಿ ಬೆಂಬಲಿಸಿ ಎಂದ ಅವರು, ಇಲ್ಲಿಯ ಜನ ಕಾಂಗ್ರೆಸ್, ಜೆಡಿಎಸ್‌ಗೆ ಅವಕಾಶ ಕೊಡುತ್ತಾ ಬಂದಿದ್ದಾರೆ. ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿ ಜಿಲ್ಲೆಯ ಅಭಿವೃದ್ಧಿ ನಮ್ಮ ಗುರಿ. ನಮ್ಮ ಕರ್ನಾಟಕ ನಂ.1 ಆಗುವಂತೆ ಮಾಡುತ್ತೇವೆ. ನಿಮ್ಮ ಭಾವನೆಗಳಿಗೆ ಸ್ಪಂದಿಸುವ ಕೆಲಸ ಮಾಡಲು ನಾವು ಸಿದ್ಧ ಎಂದರು.

ಬಸವಮಾರ್ಗ ಕರಪತ್ರ ಬಿಡುಗಡೆ, ಸಾಧಕರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ

ಲಿಂಗಾಯತರ 'ಓಟ್‌ಬ್ಯಾಂಕ್' ಜಾಗೃತವಾಗಬೇಕು

ಡಾ. ಚನ್ನಬಸವಾನಂದ ಸ್ವಾಮೀಜಿ



ಮಂಡ್ಯ, ಏ.26– ಹನ್ನೆರಡನೇ ಶತಮಾನದಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತಂದ ಇತಿಹಾಸವಿರುವ ಬಸವಣ್ಣನ ವಾರಸುದಾರರಾದ ಲಿಂಗಾಯತರ 'ಓಟ್‌ಬ್ಯಾಂಕ್' ಜಾಗೃತವಾಗಬೇಕಾದ ಅನಿವಾರ್ಯತೆ ಬಂದೊದಗಿದೆ ಎಂದು ಶ್ರೀಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಡಾ.ಚನ್ನಬಸವಾನಂದ ಸ್ವಾಮೀಜಿ ಹೇಳಿದರು.

ನಗರದ ಹಿಂದಿ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಣೆ, ಲಿಂಗಾಯತ ಮಹಾಸಭಾ ಟ್ರಸ್ಟ್ ಉದ್ಘಾಟನೆ ಹಾಗೂ ನೂರು ಮಂದಿ ಸಾಧಕರಿಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗಬೇಕೆಂಬ ಹೋರಾಟ ಇನ್ನೂ ಜೀವಂತವಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಈ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳದಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದ ಸ್ವಾಮೀಜಿ, ಲಿಂಗಾಯತರಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಲಿಂಗಾಯತರು ಯಾವುದೇ ಪಕ್ಷದ ಅಡಿಯಾಳುಗಳಲ್ಲ. ಸಮುದಾಯದ ಮತಗಳು ಮಾರಾಟಕ್ಕಿಲ್ಲವೆಂಬುದನ್ನು ನಾವು ಸಾಬೀತು ಮಾಡಬೇಕು. ಬಸವ ತತ್ವವನ್ನು ಬೆಂಬಲಿಸುವವರಿಗೆ ನಮ್ಮ ಬೆಂಬಲ ನೀಡುವ ಐಕ್ಯತೆಯಶಕ್ತಿಯನ್ನು ಸಮುದಾಯ ಪ್ರದರ್ಶಿಸಬೇಕೆಂದರು.

ಬಸವಾದಿ ಶರಣರ ಪರಂಪರೆಯಲ್ಲಿ ಲಿಂಗಾಯತ, ವೀರಶೈವ ಎಂಬುದು ಬೇರೆ ಬೇರೆಯಲ್ಲ. ಲಿಂಗವನ್ನು ಆಯತ ಮಾಡಿಕೊಂಡು ಪೂಜಿಸುವವರೆಲ್ಲರೂ ಲಿಂಗಾಯತರೇ. ಬಣಜಿಗ ಲಿಂಗಾಯಿತ, ಶೆಟ್ಟಿ ಲಿಂಗಾಯಿತ, ಪಂಚಮಸಾಲಿ ಮುಂತಾಗಿ ಏನೆಲ್ಲ ಹೆಸರಿನಿಂದ ಕರೆದರೂ ಒಟ್ಟಾರೆ ನಾವು ಲಿಂಗಾಯತರು ಎಂಬುದನ್ನು ಅರಿಯಬೇಕೆಂದು ಹೇಳಿದರು.

ಮುನ್ನೂರು ವರ್ಷ ನಮ್ಮನ್ನಾಳಿದ ಬ್ರಿಟೀಷರು ತಮ್ಮ ಪಾರ್ಲಿಮೆಂಟ್ ಮುಂಭಾಗ ಅಶ್ವಾರೂಢ ಬಸವೇಶ್ವರರ ಪ್ರತಿಮೆ ಸ್ಥಾಪಿಸಿದ್ದಾರೆ. ಎಂದರೆ ವಿಶ್ವದಲ್ಲೇ ಪ್ರಥಮ ಕಲ್ಯಾಣ ಸಂಸತ್ ಸ್ಥಾಪಿಸಿದ್ದ ವಿಶ್ವಗುರು ಬಸವಣ್ಣನವರನ್ನು ಬ್ರಿಟೀಷರು ಅರ್ಥ ಮಾಡಿಕೊಂಡಷ್ಟು ನಮ್ಮ ದೇಶದ ಜನರೇ ಇನ್ನೂ ಅರ್ಥಮಾಡಿಕೊಳ್ಳಲಾಗಿಲ್ಲ. ನಮ್ಮ ನೆಲದಲ್ಲೇ ಬಸವೇಶ್ವರರ ಗುಡಿಗಳನ್ನು ಬಸವನಗುಡಿ ಎಂದೋ ಮತ್ತಿನ್ನೇನೋ ಹೆಸರಿನಲ್ಲಿ ಕರೆಯುತ್ತಿದ್ದಾರೆಂದು ವಿಷಾದಿಸಿದರು.

ಮೈಸೂರಿನ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನಶ್ರೀ ಕುಮಾರಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಖಿಲ ಭಾರತ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಸುಬ್ರಹ್ಮಣ್ಯ, ಟ್ರಸ್ಟ್‌ನ ಕಾರ್ಯಾಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿದರು.

ಈ ವೇಳೆ 'ಬಸವಮಾರ್ಗ' ಕರಪತ್ರವನ್ನು ಕನ್ನಡ ಹೋರಾಟಗಾರ ಅಶೋಕ್ ಜಿ.ಲೋಣಿ ಬಿಡುಗಡೆಗೊಳಿಸಿದರು. ವೇದಿಕೆಯಲ್ಲಿ ಲಿಂಗಾಯತ ಮಹಾಸಭಾ ಟ್ರಸ್ಟ್‌ನ ಜಿಲ್ಲಾಧ್ಯಕ್ಷ ಎಂ.ಎಸ್.ಮಂಜುನಾಥ್ ಎಂ.ಬೆಟ್ಟಹಳ್ಳಿ, ಮಲ್ಲಿಕಾರ್ಜುನ್, ನಿಜಗುಣ, ವಿ.ಎಂ.ಮಹೇಂದ್ರ ಮತ್ತಿತರರಿದ್ದರು.

ಸಿ.ಎಸ್.ಪುಟ್ಟರಾಜು ಪರ ಕುಟುಂಬಸ್ಥರ ಪ್ರಚಾರ



ಮಂಡ್ಯ,ಏ.26– ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ದುದ್ದ ಹೋಬಳಿಯ ವಿವಿಧೆಡೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಪರ ಕುಟುಂಬಸ್ಥರು ಭರ್ಜರಿ ಪ್ರಚಾರ ನಡೆಸಿದರು.

ದುದ್ದ ಹೋಬಳಿಯ ಗೊರವಾಲೆ, ಇಂದಿರಾ ಬಡಾವಣೆ, ಶಿವಳ್ಳಿ, ಮರಡಿಪುರ, ಗುನ್ನಾಯಕನಹಳ್ಳಿಯಲ್ಲಿ ಮನೆ ಮನೆ ಪ್ರಚಾರ ನಡೆಸಿದ ಪುಟ್ಟರಾಜು ಕುಟುಂಬಸ್ಥರು, ಜೆಡಿಎಸ್‌ಗೆ ಮತ ನೀಡುವಂತೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪುಟ್ಟರಾಜು ಅವರ ಪತ್ನಿ ಹಾಗೂ ಜಿಪಂ ಮಾಜಿ ಸದಸ್ಯೆ ನಾಗಮ್ಮ ಪುಟ್ಟರಾಜು, ಸಿ.ಎಸ್.ಪುಟ್ಟರಾಜು ಶಾಸಕರಾಗಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ದುದ್ದ ಹೋಬಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ. ರಸ್ತೆ ಮೂಲ ಸೌಕರ್ಯ, ವಿದ್ಯುತ್ ಸೇರಿದಂತೆ ಅನೇಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವ ಪುಟ್ಟರಾಜು ಅವರ ಕೈಬಲಪಡಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಪುಟ್ಟರಾಜು ಪುತ್ರಿ ಅನಿತಾ, ಅಣ್ಣನ ಪುತ್ರ ಶಿವಕುಮಾರ್, ಸೊಸೆ ತನುಶ್ರೀ ಸೇರಿದಂತೆ ಶಿವಳ್ಳಿ ಪಂಚಾಯಿತಿ ಹಾಗೂ ದುದ್ದಹೋಬಳಿಯ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಚುನಾವಣಾ ಹಿನ್ನೆಲೆ: ಸಂತೆ, ಜಾತ್ರೆ ನಿಷೇಧ

ಮಂಡ್ಯ, ಏ.26– ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆಯು ಮೇ 10 ರಂದು ನಡೆಯಲಿದೆ. ಮತದಾನ ನಡೆಯುವ ದಿನದಂದು ಕಾನೂನು ಸುವ್ಯವಸ್ಥೆ ಕಾಪಾಡುವ ಹಾಗೂ ಮತದಾರರಿಗೆ ಮುಕ್ತ ಮತ್ತು ನ್ಯಾಯೋಚಿತ ಮತದಾನಕ್ಕೆ ಅವಕಾಶ ಕಲ್ಪಿಸಿ ಮತದಾನ ಕಾರ್ಯವನ್ನು ಸುಗಮವಾಗಿ ನಡೆಸುವ ಸಲುವಾಗಿ ಮೇ 10 ರಂದು ಮಂಡ್ಯ ಜಿಲ್ಲೆಯಾದ್ಯಂತ ಎಲ್ಲಾ ರೀತಿಯ ಸಂತೆ, ಜಾತ್ರೆ ಹಾಗೂ ಉತ್ಸವಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಹೆಚ್. ಎನ್ ಗೋಪಾಲಕೃಷ್ಣ ಅವರು ಆದೇಶ ಹೊರಡಿಸಿದ್ದಾರೆ.

ಮೇ 6ರಂದು ನಂಜನಗೂಡಿಗೆ ಪ್ರಧಾನಿ ನರೇಂದ್ರ ಮೋದಿ

ಮೇ 2ರಂದು ವರುಣದಲ್ಲಿ ಅಮಿತ್ ಷಾ ಮತಯಾತ್ರೆ



ನಂಜನಗೂಡು, ಏ.26– ಪ್ರಧಾನಿ ನರೇಂದ್ರ ಮೋದಿ ಅವರು ಮೇ 6 ರಂದು ನಂಜನಗೂಡಿನಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ವರುಣ ಕ್ಷೇತ್ರದಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸುವ ವೇಳೆ ಸಚಿವ, ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಈ ವಿಷಯ ತಿಳಿಸಿದರು. ಮೇ 2 ರಂದು ಅಮಿತ್ ಷಾ ಅವರು ವರುಣ ಕ್ಷೇತ್ರದಲ್ಲಿ ಮತಯಾತ್ರೆ ನಡೆಸಲಿದ್ದಾರೆ. ಮೇ 4ರಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಗಡೂರಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಏ.29 ರಂದು ವಿ.ಶ್ರೀನಿವಾಸಪ್ರಸಾದ್ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಯಾರು ಎಷ್ಟೇ ಬಟ್ಟೆ ಬಿಚ್ಚಿ ಕುಣಿದರೂ ಈ ಬಾರಿ ವರುಣ ಕ್ಷೇತ್ರದಲ್ಲಿ ಕಮಲ ಅರಳುವುದು ಖಚಿತ. ಮೇ 13 ರಂದು ಫಲಿತಾಂಶ ಹೊರಬೀಳಲಿದ್ದು, ಮೇ 15ಕ್ಕೆ ತಗಡೂರಿನಲ್ಲಿ ಇಡೀ ದಿನ ಇದ್ದು, ಎಲ್ಲಾ ಕೋಮಿನ ಜನರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಲಿದ್ದೇನೆ ಎಂದರು. ಇದೇ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸದಾನಂದ, ಮುಖಂಡರಾದ ಕಾ.ಪು.ಸಿದ್ದಲಿಂಗಸ್ವಾಮಿ, ಕಾ.ಪು.ಸಿದ್ದವೀರಪ್ಪ, ಬಿಜೆಪಿ ರಾಜ್ಯ ಮುಖಂಡ ಕೆ.ಕೆ.ಜಯದೇವ್, ಮುಖಂಡರಾದ ಎಲ್.ಆರ್. ಮಹದೇವಸ್ವಾಮಿ, ಜೈಶಂಕರ್, ಗಿರೀಶ್ ಉಪ್ಪಾರ್, ಕುಂಬ್ರಳ್ಳಿ ಸುಬ್ಬಣ್ಣ, ಎನ್.ಎಂ.ಮಹದೇವಸ್ವಾಮಿ, ವೆಂಕಟರಮಣಶೆಟ್ಟಿ, ವರುಣಾ ಬಿಜೆಪಿ ಅಧ್ಯಕ್ಷ ವಿಜಯ್‌ಕುಮಾರ್, ಬಿಜೆಪಿ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಧೀರಜ್ ಪ್ರಸಾದ್, ತಾಪಂ ಮಾಜಿ ಸದಸ್ಯರಾದ ಸಿ.ಎಂ.ಮಹದೇವಯ್ಯ, ವೆಂಕಟೇಶ್, ಚಿನ್ನಂಬಳ್ಳಿ ಮಂಜುನಾಥ್, ರೇಚಣ್ಣ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಟೆಂಡರ್ ಆಹ್ವಾನಿಸದೆ ಕೆಲಸ ಮಾಡಿಸಿದ್ದ ಪ್ರಕರಣ

ಹೈಕೋರ್ಟ್ ಚಾಟಿ ಬಳಿಕ ಎಂಜಿನಿಯರ್ ವಿರುದ್ಧ ಕ್ರಮಕ್ಕೆ ಮುಂದಾದ ಸರ್ಕಾರ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ರೋಗ ಹಿನ್ನೆಲೆಯಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದಾಗ ಟೆಂಡರ್ ಆಹ್ವಾನಿಸದೇ 5.02 ಕೋಟಿ ರೂ.ಮೊತ್ತದ ಕಾರ್ಯಾದೇಶ ನೀಡಿ ಗುತ್ತಿಗೆದಾರರಿಂದ ಕೆಲಸ ಮಾಡಿಸಿದ್ದ ಕಾರ್ಯಕಾರಿ ಎಂಜಿನಿಯರ್ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಮುಂದಾಗಿದೆ.

ಮಂಡ್ಯ ಜಿಲ್ಲೆಯ ನಾಗೇಗೌಡ ಅವರ ಮನವಿಗೆ ರಾಜ್ಯ ಸರಕಾರವು ಸಮ್ಮತಿಸಿರುವುದರಿಂದ ಅರ್ಜಿಯನ್ನು ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠವು ಇತ್ಯರ್ಥಪಡಿಸಿದೆ.

ಕೋವಿಡ್‌ನಿಂದ ಇಡೀ ದೇಶದಲ್ಲಿ ಲಾಕ್‌ಡೌನ್ ಜಾರಿಯಿದ್ದಾಗ ಟೆಂಡರ್ ಆಹ್ವಾನಿಸದೇ 5.02 ಕೋಟಿ ಮೊತ್ತದ ಕಾರ್ಯಾದೇಶ ನೀಡಿ ಕೆಲಸ ಮಾಡಿಸಿದ್ದ ಕಾರ್ಯಕಾರಿ ಎಂಜಿನಿಯರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣಾ ಕಾಯಿದೆ ಅಡಿ ತನಿಖೆ ನಡೆಸಲು ಅನುಮತಿಸಲಾಗಿದೆ ಎಂದು ರಾಜ್ಯ ಸರ್ಕಾರ ಮಾಹಿತಿ ನೀಡಿದ್ದು, ಇದನ್ನು ಪರಿಗಣಿಸಿ ಹೈಕೋರ್ಟ್ ಅರ್ಜಿಯನ್ನು ಇತ್ಯರ್ಥಪಡಿಸಿದೆ.

ಹೆಚ್ಚುವರಿ ಅಡ್ವೋಕೇಟ್ ಜನರಲ್ ಅವರು 2023ರ ಏಪ್ರಿಲ್ 11ರಂದು ಕಾರ್ಯಕಾರಿ ಎಂಜಿನಿಯರ್ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಗೆ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಸೆಕ್ಷನ್ 17(ಎ) ಅಡಿ ಸಕ್ಷಮ ಪ್ರಾಧಿಕಾರ (ರಾಜ್ಯ ಸರ್ಕಾರ) ಅನುಮತಿಸಿರುವ ಆದೇಶ ಸಲ್ಲಿಸಿದ್ದಾರೆ.

ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ಮತಯಾಚನೆ



ಮೈಸೂರು, ಏ.26(ಎಸ್‌ಪಿಎನ್)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ರವರು ಕುವೆಂಪುನಗರ ಹಾಗೂ ವಿವಿಧ ಬಡಾವಣೆಗಳಲ್ಲಿ ಬುಧವಾರ ಮತಯಾಚನೆ ಮಾಡಿದರು. ಈ ವೇಳೆ ಮಾತನಾಡಿದ ಎಂ.ಕೆ. ಸೋಮಶೇಖರ್, ಕಳೆದ ಬಾರಿ ಬಿಜೆಪಿಗೆ ಮತ ಹಾಕಿದ್ದೀರಿ. ಆ ಶಾಸಕರು ನಿಮ್ಮ ಕಷ್ಟ ಕಾರ್ಪಣ್ಯ ಕೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ನಾನು ಸೋತ ದಿನದಿಂದಲೂ ಕ್ಷೇತ್ರದ ಜನತೆಯ ಜೊತೆಗಿದ್ದು ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ ಎಂದರು.

ಇಡೀ ರಾಜ್ಯದಲ್ಲಿ ಕೊರೊನಾದಿಂದ ತತ್ತರಿಸಿ ಹೋಗಿದ್ದ ಸಂದರ್ಭದಲ್ಲಿ ಕೆ.ಆರ್. ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಭಯಪಡದೇ ಬೀದಿಗಿಳಿದು ಔಷಧೋಪಚಾರ, ಆಹಾರದ ಕಿಟ್‌ಗಳನ್ನು ನೀಡಿ, ಜನತೆ ನನ್ನ ಕೈಲಾದ ಸಹಕಾರ ನೀಡಿದ್ದೇನೆ. ನಾನೆಂದು ಜಾತಿ, ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಿಲ್ಲ. ನಾನು ಯಾವುದೇ ಪಕ್ಷದ ಅಭ್ಯರ್ಥಿಗಳ ಬಗ್ಗೆ ಹಗುರವಾಗಿ ಮಾತನಾಡಲು ಬಯಸುವುದಿಲ್ಲ ಎಂದರು.

ನನ್ನ ಅವಧಿಯ ಅಭಿವೃದ್ಧಿ ವಿಚಾರಗಳು, ಸಿದ್ದರಾಮಯ್ಯನವರ ಆಡಳಿತಾವಧಿಯ ಜನಪ್ರಿಯ ಯೋಜನೆಗಳನ್ನು ಜನರ ಮುಂದಿಟ್ಟು ಮತ ಕೇಳುತ್ತಿದ್ದೇನೆ. ನನ್ನನ್ನು ಬೆಂಬಲಿಸುವ ಮೂಲಕ ಮತ್ತೊಮ್ಮೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಗಡೆ, ಎನ್‌ಎಸ್‌ಯುಐ ರಾಷ್ಟ್ರೀಯ ಕಾರ್ಯದರ್ಶಿ ನಾಗೇಶ್ ಕರಿಯಪ್ಪ, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಪಾಲಿಕೆ ಸದಸ್ಯೆ ಶೋಭಾ ಸುನೀಲ್, ಮಾಜಿ ಸದಸ್ಯ ಎಂ ಸುನೀಲ್, ವಿದ್ಯಾ, ಭವ್ಯ, ಜ್ಯೋತಿ, ಭಾಗ್ಯಲಕ್ಷ್ಮಿ, ಮಾಜಿ ಎಂಎಲ್‌ಸಿ ಮಲ್ಲಾಜಮ್ಮ, ಕಾಂಗ್ರೆಸ್ ಮುಖಂಡರಾದ ಆನಂದ್, ಸೋಮು, ಸಿದ್ದರಾಮು, ಬಸವಣ್ಣ, ಉಲ್ಲಾಸ್, ಮನೋಜ್, ಸಿದ್ದಣ್ಣ, ದುರ್ಗಮ್ಮ(ಕಲಾ), ಪುಟ್ಟಮ್ಮ, ದೀಪಕ್ ಪುಟ್ಟಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ಕೆ.ಎಂ.ದೊಡ್ಡಿಯಲ್ಲಿ ಪೊಲೀಸ್ ಪಥಸಂಚಲನ



ಭಾರತೀನಗರ, ಏ.26– ಮೇ 10ರಂದು ನಿಗದಿಯಾಗಿರುವ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಸಂಬಂಧ ಭದ್ರತೆಗಾಗಿ ನಿಯೋಜಿಸಲ್ಪಟ್ಟಿರುವ ಕೇಂದ್ರ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ ಮದ್ದೂರು ತಾಲೂಕು ಕೆ.ಎಂ.ದೊಡ್ಡಿ ವ್ಯಾಪ್ತಿಯಲ್ಲಿ ಪಥಸಂಚಲನ ನಡೆಸಿದರು. ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಿಂದ ಹೊರಟ ಸಿಬ್ಬಂದಿಗಳು ಮದ್ದೂರು–ಮಳವಳ್ಳಿ ಹೆದ್ದಾರಿ, ಹಲಗೂರು ರಸ್ತೆ, ಮಂಡ್ಯರಸ್ತೆಯಲ್ಲಿ ಸಂಚರಿಸಿ ಸ್ಥಳೀಯ ಸಾರ್ವಜನಿಕರಲ್ಲಿ ಮೇ 10 ರಂದು ನಡೆಯುವ ಚುನಾವಣಾ ಸಂಬಂಧ ಆತ್ಮಸ್ಥೈರ್ಯ ತುಂಬುವ ಯತ್ನಕ್ಕೆ ಮುಂದಾದರು. ಈ ವೇಳೆ ಆಸರೆ ಸೇವಾಟ್ರಸ್ಟ್‌ನ ಅಧ್ಯಕ್ಷ ರಘು ವೆಂಕಟೇಗೌಡ ಮತ್ತು ಸಾರ್ವಜನಿಕರು ಹೂ ಮಳೆ ಸುರಿಸುವ ಮೂಲಕ ಸ್ವಾಗತಿಸಿದರು. ಪಥ ಸಂಚಲನದ ವೇಳೆ ಸಿಪಿಐ ಆನಂದ್, ಪಿಎಸ್‌ಐ ತಿಮ್ಮಪ್ಪ ಬಾಣಸಿ ಒಳಗೊಂಡಂತೆ ಸಶಸ್ತ್ರ ಮೀಸಲುಪಡೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಸೈಟು ಮಾರಾಟಕ್ಕಿದೆ
30x40, ಅಳತೆಯ DTCP
"A" ಖಾತೆಯುಳ್ಳ Layout
ಸೈಟು ಮಾರಾಟಕ್ಕಿದೆ
12 ಲಕ್ಷದ 50 ಸಾವಿರಗಳು ಮಾತ್ರ
ತಳೂರು ಸರ್ಕಲ್ ಹತ್ತಿರ, ಮೈಸೂರು
9742198093

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಮೈಸೂರು ನಗರದ ಹಳೆಕೆಸರೆಗೆ ಹೋಗುವ ರಸ್ತೆ ವರುಣ ನಾಲೆ ಹತ್ತಿರದ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಹೌಸ್‌ಕೀಪಿಂಗ್ ಕೆಲಸ ಮಾಡಲು ಹಾಗೂ ದಡದ ಹಳ್ಳಿಗೆ ಹೋಗುವ ರಸ್ತೆಯಲ್ಲಿ ಲೇಔಟ್‌ಂದರಲ್ಲಿ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ದೇವೇಗೌಡ ಸರ್ಕಲ್ ಬನ್ನೂರ್ ರಸ್ತೆ, ಕಡಕೊಳ, ನಂಜನಗೂಡು, ಗುಂಡ್ಲುಪೇಟೆ ಹತ್ತಿರ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ.
9035050656,9035050653

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ.
ವಸತಿಯೂಟದೊಂದಿಗೆ
Salary + OT 17800/- to 68000/-
9731029241
6366882001

ಶಿಕ್ಷಕಿಯರು ಬೇಕಾಗಿದ್ದಾರೆ
D.Ed-04,
B.Sc, B.Ed.-02
Hindi -02
Spoken English-01
9448071449
8147472526

FOR SALE
1) 30x40 15 lakhs sites in H D Kote Road
2) 40x60 52 L sites Near Ring Road
3) 40x60 site New RT Nagar
4) 30x40 N G+2 House Near Ashwini Choultry Srirampura
5) 17/60 House opp Park Kamakshi HOSPITAL SS PURAM
SITES AVAILABLE IN DATTAGALLI JP NAGAR AND VIJAYNAGAR
9538690359,9035990359

BRM COCHING ACADEMY
EXCELLENT COACHING, ADMISSION OPEN FOR 2nd PUC Supplementary Students
Sub: PCMB, Commerce, EBAC
Sub: Basic Maths
Place: SUBHODYA SCHOOL Near Bus Depot Kuvempunagar, Mysore
9535354976,9880130731

ಚಾಮುಂಡೇಶ್ವರಿ: ಸಿದ್ದೇಗೌಡರ ಪರ ಎಂಎಲ್‌ಸಿ ಡಾ.ತಿಮ್ಮಯ್ಯ ಮತಯಾಚನೆ



ಮೈಸೂರು, ಏ.26(ಎಸ್‌ಪಿಎನ್)– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಪರವಾಗಿ ಎಂಎಲ್‌ಸಿ ತಿಮ್ಮಯ್ಯ ನೇತೃತ್ವದಲ್ಲಿ ವಾರ್ಡ್ ನಂ.58ರ ರಾಮಕೃಷ್ಣ ನಗರದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಚ್.ಸಿ.ಕೃಷ್ಣಕುಮಾರ್ ಸಾಗರ್, ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಮಗಳಾದ ಶಿಲ್ಪ ಶರತ್ ಅವರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ರೈತ ಸಂಘದ ಹಸಿರು ಸೇನೆ ಜಿಲ್ಲಾ ಸಂಚಾಲಕ ಕುಮಾರ್ ಬಸಪ್ಪ, ಸಾಮಾಜಿಕ ಜಾಲತಾಣದ ಅಧ್ಯಕ್ಷ ಎಸ್.ಶಂಕರ್, ವಾರ್ಡ್ ನಂ.58ರ ಅಧ್ಯಕ್ಷ ರಾಜೇಂದ್ರ, ಪೇಪರ್ ಹರೀಶ್, ಬಸವಣ್ಣ, ಲಿಂಗರಾಜು, ಮಾದೇಗೌಡ ಅರಸು, ಬಸವರಾಜು ಟೈಲರ್, ಮಾದೇವ್, ಜವರಪ್ಪ, ಕೆಂಪೇಗೌಡ, ಸತೀಶ್,ತಮ್ಮಣ್ಣ, ಸಚಿನ್, ಸುಮಿತ್ರ ಸ್ಟೀಲ್, ದಯಾನಂದ ಅನೇಕ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

Wanted DTP Operator having good kannada & English Typing Skills Computer Knowledge Only for Female
ಕಂಪ್ಯೂಟರ್ ಮತ್ತು ಡಿ.ಟಿ.ಪಿ. ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು)
8050473454
9964982228

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ನಾವೆಲ್ಲಿ 40 ಪರ್ಸೆಂಟ್ ಕಮಿಷನ್ ಪಡೆದಿದ್ದೇವೆ... ತೋರ್‍ಸಿ...

● ಕಾಂಗ್ರೆಸ್ ನಾಯಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು


● ನೀವು ಅಧಿಕಾರಕ್ಕೆ ಬಂದ್ರೆ ತಾನೇ ತನಿಖೆ ಮಾಡ್ಸೋದು...; ಸಿಎಂ ಲೇವಡಿ

ಬೆಂಗಳೂರು, ಏ.26 (ಕೆಎಂಶಿ)– ಯಾವ ನಿರ್ದಿಷ್ಟ ಪ್ರಕರಣದಲ್ಲಿ 40 ಪರ್ಸೆಂಟ್ ಕಮಿಷನ್ ಪಡೆದಿದ್ದೇವೆ ಎಂದು ಸ್ಪಷ್ಟವಾಗಿ ತಿಳಿಸಿ ಎಂದು ಕಾಂಗ್ರೆಸ್ ಮುಖಂಡರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ 40 ಪರ್ಸೆಂಟ್ ಕಮಿಷನ್ ತನಿಖೆ ಮಾಡುವುದಾಗಿ ಹೇಳಿಕೊಂಡು ತಿರುಗುತ್ತಿದ್ದಾರೆ. ನಾವು ಭ್ರಷ್ಟಾಚಾರ ಮಾಡಿದ್ದರಲ್ಲವೇ ತನಿಖೆಯಾಗುವುದು. ಮಿಗಿಲಾಗಿ ಅವರು ಎಲ್ಲಿ ಅಧಿಕಾರಕ್ಕೆ ಬರುತ್ತಾರೆ ಎಂದು ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಾ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿಗಳು, ರಾಜ್ಯದ ಮುಖ್ಯಮಂತ್ರಿಗಳನ್ನು ಗುರಿಯಾಗಿಸಿ ಬಿಜೆಪಿ ಇಮೇಜ್ ಕೆಡಿಸಬೇಕು ಅಂತಿದ್ದಾರೆ. ಆದರೆ ಸಾಧ್ಯವಾಗುತ್ತಿಲ್ಲ. ಕಳೆದ ಒಂದೂವರೆ ವರ್ಷದಿಂದ ಸಿದ್ದರಾಮಯ್ಯ ಅವರು ಪ್ರಯತ್ನ ಮಾಡುತ್ತಿದ್ದಾರೆ.

ಆದರೆ ಜನ ನಂಬುತ್ತಿಲ್ಲ, ಏಕೆಂದರೆ ಅವರೇ ದೊಡ್ಡ ಭ್ರಷ್ಟಾಚಾರಿಗಳು ಎಂದರು. ಕಾಂಗ್ರೆಸ್ ಅಂದ್ರೆ ಭ್ರಷ್ಟಾಚಾರ, ಭ್ರಷ್ಟಾಚಾರ ಅಂದ್ರೆ ಕಾಂಗ್ರೆಸ್. ಭ್ರಷ್ಟಾಚಾರ ಕಾಂಗ್ರೆಸ್ ಪಕ್ಷದ ಅವಿಭಾಜ್ಯ ಅಂಗವಾಗಿದೆ. ಹೀಗಿರುವಾಗ ಅವರು ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ ಎಂದರು



ನಿಮ್ಮ ಹಾಗೂ ಸಿದ್ದರಾಮಯ್ಯ ಮಧ್ಯೆ ಲಿಂಗಾಯತ ಲಡಾಯಿ ಜೋರಾಗಿದೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ ಲಡಾಯಿ ಏನಿಲ್ಲ. ಅವರೇ ಮಾಡಿಕೊಂಡು ಬೇರೆ ಬೇರೆ ಸ್ಪಷ್ಟೀಕರಣ ಕೊಡುತ್ತ ತಿರುಗುತ್ತಿದ್ದಾರೆ. ಗ್ರೌಂಡ್‌ನಲ್ಲಿ ಲಿಂಗಾಯತರು ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ಜನ ಬಹಳ ಪ್ರಬುದ್ಧವಾಗಿದ್ದಾರೆ, ಯಾರಿಗೆ ಯಾವಾಗ ಹೇಗೆ ಬೆಂಬಲ ಕೊಡಬೇಕೆಂದು ಗೊತ್ತಿದೆ ಎಂದರು.

ಇಂದು ಚಿಕ್ಕೋಡಿ ಲೋಕಸಭಾ ವ್ಯಾಪ್ತಿಯಲ್ಲಿ ಪ್ರಚಾರ ಮಾಡುತ್ತಿದ್ದು, ಎಲ್ಲ ಕಡೆ ರೋಡ್ ಶೋ, ಸಭೆಗಳಲ್ಲಿ ಜನರ ಉತ್ಸಾಹ ದೊಡ್ಡ ಪ್ರಮಾಣದಲ್ಲಿ ಇದೆ. ಬೆಳಗಾವಿ ಜಿಲ್ಲೆಯಲ್ಲಿ ಕನಿಷ್ಠ 15 ಸ್ಥಾನ ಗೆಲ್ಲುವ ವಿಶ್ವಾಸವಿದೆ ಎಂದರು.

ಕೆಲವು ಬದಲಾವಣೆ ಮಾಡಿದ್ದಕ್ಕೂ ಜನ ಸ್ಪಂದಿಸಿದ್ದಾರೆ. ನಾನು ರಾಜ್ಯದ ಉದ್ದಗಲಕ್ಕೂ ಸುತ್ತುತ್ತಿದ್ದೇನೆ. ನಾಮಪತ್ರ ವಾಪಸ್ ಪ್ರಕ್ರಿಯೆ ಆದಮೇಲೆ ಬಿಜೆಪಿ ಸುನಾಮಿ ಇಡೀ ರಾಜ್ಯದಲ್ಲಿ ಇದೆ. ಬಿಜೆಪಿ ಸ್ಪಷ್ಟ ಬಹುಮತದಿಂದ ಬರಲಿದೆ ಎಂದು ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು. ಎಕ್ಸಿಟ್ ಪೋಲ್ ಆಧಾರ ಮೇಲೆ ಚುನಾವಣಾ ರಣನೀತಿ ಮಾಡುವುದಿಲ್ಲ ಎಂದು ತಿಳಿಸಿದರು. ಸಂಖ್ಯಾ ಬಲದಷ್ಟೇ ಉತ್ಸಾಹ ಕೂಡ ದೊಡ್ಡ ಪ್ರಮಾಣದಲ್ಲಿ ಇದೆ. ಈಗ ಬಂದಿರುವುದೆಲ್ಲಾ ಹಳೆಯ ಎಕ್ಸಿಟ್ ಪೋಲ್. ನಮ್ಮದೇ ಆದಂತಹ ಮಾಹಿತಿ ವ್ಯವಸ್ಥೆ ಇದೆ, ಅದರ ಮೇಲೆ ರಣನೀತಿ ಇರುತ್ತದೆ ಎಂದರು. ದಕ್ಷಿಣ ಕರ್ನಾಟಕದಿಂದ ಪ್ರಚಾರ ಶುರು ಮಾಡಿ ಉತ್ತರಕ್ಕೆ ಬಂದಿದ್ದು, ಎಲ್ಲಾ ಕಡೆ ಅಭೂತಪೂರ್ವ ಜನಬೆಂಬಲ ಇದೆ. ವಿಶೇಷವಾಗಿ ಯುವಕರು, ಮಹಿಳೆಯರು, ರೈತರು ದೊಡ್ಡ ಪ್ರಮಾಣದಲ್ಲಿ ಬೆಂಬಲಿಸುತ್ತಿದ್ದಾರೆ. ನಮ್ಮ ನಿರೀಕ್ಷೆ ಮೀರಿ ಜನಸ್ಪಂದನೆ ಇದೆ ಎಂದು ತಿಳಿಸಿದರು. ತಳಮಟ್ಟದಲ್ಲಿ ನಿಜ ಚಿತ್ರಣವನ್ನು ನೋಡುತ್ತಿದ್ದು ಸ್ಪಷ್ಟ ಬಹುಮತ ಬರುವ ವಿಶ್ವಾಸ ಇದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದಲ್ಲಿ ಜಿಲ್ಲಾವಾರು ಮತದಾರರ ವಿವರ

ಜಿಲ್ಲೆ	ಪುರುಷರು	ಮಹಿಳೆಯರು	ತೃತೀಯ ಲಿಂಗಿ	ಒಟ್ಟು
1 ಬೆಳಗಾವಿ	19,90,856	19,56,143	151	39,47,150
2 ಬಾಗಲಕೋಟೆ	7,78,376	7,82,368	84	15,60,828
3 ವಿಜಯಪುರ	9,66,535	9,26,096	221	18,92,852
4 ಕಲಬುರಗಿ	11,21,972	10,95,754	329	22,18,055
5 ಬೀದರ್	7,10,403	6,64,724	42	13,75,169
6 ರಾಯಚೂರು	8,05 594	8 29 133	262	16 34 989
7 ಕೊಪ್ಪಳ	5,66,381	5,70,407	50	11,36,838
8 ಗದಗ	4,34,997	4,32,897	61	8,67,955
9 ಧಾರವಾಡ	7,65,160	7,57,831	89	15,23,080
10 ಉತ್ತರ ಕನ್ನಡ	5.99 527	5 95 180	7	11 94 714
11 ಹಾವೇರಿ	6,65,617	6,37,019	47	13,02,683
12 ಬಳ್ಳಾರಿ	5,67,319	5,84,920	172	11,52,411
13 ಚಿತ್ರದುರ್ಗ	7,00,811	7,02,702	72	14,03,585
14 ದಾವಣಗೆರೆ	7.21 964	7 20 004	118	14 42 086
15 ಶಿವಮೊಗ್ಗ	7,28,886	7,43,713	32	14,72,631
16 ಉಡುಪಿ	5,02,836	5,38,823	13	10,41,672
17 ಚಿಕ್ಕಮಗಳೂರು	4,81,466	4,91,737	35	9,73,238
18 ತುಮಕೂರು	11,20,698	11,27,126	108	22,47,932
19 ಚಿಕ್ಕಬಳ್ಳಾಪುರ	5,19,785	5,30,251	106	10,50,142
20 ಕೋಲಾರ	6,31,147	6,39,408	163	12,70,718
22 ಬೆಂಗಳೂರು ಗ್ರಾಮಾಂತರ	4,35,835	4,41,907	148	8,77,890
23 ರಾಮನಗರ	4,45 130	4 59 514	58	9 04,702
24 ಮಂಡ್ಯ	**7,59,323**	**7,74,363**	**145**	**15,33,831**
25 ಹಾಸನ	**7,49,720**	**7,50,153**	**44**	**14,99,917**
26 ದಕ್ಷಿಣ ಕನ್ನಡ	8,70,991	9,10,314	84	17,81,389
27 ಕೊಡಗು	**2 24 875**	**2 31 415**	**23**	**4 56 313**
28 ಮೈಸೂರು	**13,17,121**	**13,38,637**	**230**	**26,55,988**
29 ಚಾಮರಾಜನಗರ	**4,26,547**	**4,34,873**	**69**	**8,61,489**
31 ಬಿಬಿಎಂಪಿ ಸೆಂಟ್ರಲ್	9,14,963	8,75,453	234	17,90,650
32 ಬಿಬಿಎಂಪಿ (ಉತ್ತರ)	11.24 272	10 71 209	487	21 95 968
33 ಬಿಬಿಎಂಪಿ (ದಕ್ಷಿಣ)	10,63,764	9,88,206	366	20,52,336
34 ಬೆಂಗಳೂರು ನಗರ	19,21,776	17,51,945	674	36,74,395
35 ಯಾದಗಿರಿ	5,01,254	4,98,648	57	9,99,959
36 ವಿಜಯನಗರ	5,46,255	5,45,610	146	10,92,011
ಒಟ್ಟು	**2,66,82,156**	**2,63,98,483**	**4,927**	**5,30,85,566**

ಡಿಕೆಶಿಗೆ ಸೋಲಿನ ಭಯದಿಂದ ಮಾಟ–ಮಂತ್ರ ಮಾಡಿಸ್ತಿದ್ದಾರೆ



ರಾಮನಗರ: ನಾನು ಕನಕಪುರಕ್ಕೆ ಬಂದ ಮೇಲೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಭಯ ಕಾಡುತ್ತಿದೆ, ಅದಕ್ಕಾಗಿ ಮಾಟ–ಮಂತ್ರ ಮಾಡಿಸುತ್ತಿದ್ದಾರೆ ಎಂದು ಆರ್.ಅಶೋಕ್ ವ್ಯಂಗ್ಯವಾಡಿದರು. ಕನಕಪುರ ತಾಲೂಕಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಿವಕುಮಾರ್‌ಗೆ ಸೋಲಿನ ಬಗ್ಗೆ ಅರಿವು ಆದ ಕೂಡಲೇ ಹೋಮ, ಹವನ ಮಾಡಿಸುತ್ತಿದ್ದಾರೆ. ಮಾಟ–ಮಂತ್ರ ಎಲ್ಲ ಮಾಡಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಅವರ ಶ್ರೀಮತಿಯೂ ಫಸ್ಟ್ ಟೈಮ್ ಚುನಾವಣೆ ಪ್ರಚಾರ ಮಾಡುತ್ತಿದ್ದಾರೆ. ನನ್ನನ್ನು ಅವರು ಟ್ರಾಕ್ ಮಾಡುತ್ತಿದ್ದಾರೆ. ಆದರೆ ಅವರಿಗೆ ಗೆಲುವು ಈ ಸಾರಿ ಅಷ್ಟು ಸುಲಭವಲ್ಲ ಎಂದು ಸವಾಲು ಹಾಕಿದರು.

ಕನಕಪುರವನ್ನು ಸೂಕ್ಷ್ಮ ಪ್ರದೇಶವಾಗಿ ಘೋಷಣೆ ಮಾಡಿ. ಎಲ್ಲ ಮತಗಟ್ಟೆ ಕೇಂದ್ರಗಳಲ್ಲೂ ಸಿಸಿಟಿವಿ ಅಳವಡಿಸಬೇಕೆಂದು ನಾನು ಚುನಾವಣಾ ಆಯೋಗಕ್ಕೂ ಪತ್ರ ಬರೆಯುತ್ತೇನೆ ಎಂದ ಅವರು, ಜೆಡಿಎಸ್‌ನವರು ಕೂಡ ಆತಂಕಗೊಂಡಿದ್ದಾರೆ. ನಾವು ಏನೋ ಮತ ಹಾಕಿಸುತ್ತೇವೆ. ಆದರೆ ಆ ಮತಗಳನ್ನು ಕೊನೆಗೆ ಶಿವಕುಮಾರ್ ಇಲ್ಲದ ರೀತಿ ಮಾಡ್ತಾರೆ ಅಂತಾ ಶಿವಕುಮಾರ್ ನಡೆಗೆ ಅವರ ಪಕ್ಷದವರೇ ಬೇಸತ್ತು ಹೋಗಿದ್ದಾರೆ. ನನಗೆ ಅವರ ಎಷ್ಟು ಕಾರ್ಯಕರ್ತರು ಫೋನ್ ಮಾಡಿ ಬೆಂಬಲ ಕೊಡುತ್ತಿದ್ದಾರೆ ಎಂದು ಹೇಳಿದರು.

ಡಿಕೆಶಿ ಹುಟ್ಟೂರಿಗೂ ನಾನು ಹೋಗಿದ್ದೇನೆ. ನಾನು ಜೆಡಿಎಸ್ ಮುಖಂಡರಿಗೆ ಮನವಿ ಮಾಡುತ್ತೇನೆ. ಇಲ್ಲಿ ಬಿಜೆಪಿ ಗೆಲ್ಲುವ ವಾತಾವರಣ ನಿರ್ಮಾಣ ಆಗುತ್ತಿದೆ. ಶಿವಕುಮಾರ್ ಹಾಗೂ ಕುಮಾರಸ್ವಾಮಿ ಜೋಡೆತ್ತಿನ ಪರಿಸ್ಥಿತಿ ನೋಡಿದ್ದೀರಿ. ಜೋಡೆತ್ತುಗಳ ನಡುವಳಿಕೆಯನ್ನು ನೀವು ನೋಡಿದ್ದೀರಿ. ಕನಕಪುರದಲ್ಲಿ ದಿನನಿತ್ಯ ಗಲಾಟೆಗಳು ನಡೆಯುತ್ತಿವೆ. ಇವರು ಮತ್ತೆ ಜೋಡೆತ್ತು ಆದರೆ ನಿಮ್ ಕಥೆ ಏನು ಅಂತಾ ಯೋಚನೆ ಮಾಡಿ. ಅದಕ್ಕಾಗಿ ನಿಮಗೆ ಒಳ್ಳೆಯ ಅವಕಾಶ ಸಿಕ್ಕಿದೆ, ಬಿಜೆಪಿಗೆ ಸೇರ್ಪಡೆ ಆಗಿ ಎಂದು ತಿಳಿಸಿದರು.

ಬಿಜೆಪಿ ಆಡಳಿತದಲ್ಲಿ ಬಡವರು ಬದುಕುವುದೇ ಕಷ್ಟ: ಡಾ.ಯತೀಂದ್ರ

ಮೈಸೂರು,ಏ.26(ಎಂಟಿವೈ)– ಬಿಜೆಪಿ ಸರ್ಕಾರದ ದುರಾಡಳಿತದಿಂದಾಗಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿ ಬಡವರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದ್ದಾರೆ. ವರುಣ ಕ್ಷೇತ್ರದ ಬಸವನಪುರ, ಕೆಂಪಿಸಿದ್ದನಹುಂಡಿ, ಹೆಜ್ಜಿಗೆ, ತೊರೆಮಾವು ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಪಾದಯಾತ್ರೆ ಮೂಲಕ ಮನೆಮನೆಗೆ ತೆರಳಿ ಮತಯಾಚಿಸಿದರು. ಹಿಂದೆಂದೂ ಕಾಣದಂತಹ ಬೆಲೆ ಏರಿಕೆ ಮಾಡಿದ್ದೇ ಬಿಜೆಪಿ ಸರ್ಕಾರದ ಸಾಧನೆಯಾಗಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ ಗ್ಯಾಸ್ ಸಿಲಿಂಡರ್, ದಿನಸಿ ಪದಾರ್ಥಗಳು ಬೆಲೆಗಳು ಹೆಚ್ಚಾಗಿ ಬಡವರು ಬದುಕುವುದೇ ಕಷ್ಟವಾಗಿದೆ. ಕೂಲಿ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ ಎಂದು ವಿಷಾದಿಸಿದರು.

ದೇಶದಲ್ಲಿ ಅಂಬಾನಿ, ಅದಾನಿಯಂತಹ ದೊಡ್ಡ ದೊಡ್ಡ ಶ್ರೀಮಂತರು, ಸಾವಿರಾರು ಕೋಟಿ ಸಾಲ ಮಾಡಿ ಬ್ಯಾಂಕ್‌ಗಳಿಗೆ ವಂಚನೆ ಮಾಡುತ್ತಿದ್ದಾರೆ. ಅಂತಹವರ ಸಾಲವನ್ನು ಬಿಜೆಪಿಯವರು ಮನ್ನಾ ಮಾಡುತ್ತಾರೆ, ಬಡವರು, ರೈತರ ಸಾಲ ಮನ್ನಾ ಮಾಡುವುದಿಲ್ಲ. ಶ್ರೀಮಂತರು ಕಟ್ಟುವ ಕಾರ್ಪೋರೇಟ್ ಟ್ಯಾಕ್ಸ್ ಶೇ.10 ಕಡಿಮೆ ಮಾಡಿದ್ದಾರೆ. ಇದರಿಂದ ಕೇಂದ್ರ ಸರ್ಕಾರಕ್ಕೆ 1 ಲಕ್ಷ ಕೋಟಿ ನಷ್ಟವಾಗುತ್ತದೆ. ಜನಸಾಮಾನ್ಯರು, ಬಡವರು ಕಟ್ಟುವ ಜಿಎಸ್‌ಟಿ, ಟ್ಯಾಕ್ಸ್ ಹೆಚ್ಚಾಗಿ ಎಲ್ಲಾ ಬೆಲೆಗಳು ಹೆಚ್ಚಾಗಿವೆ. ಇದು ಕೂಡ ಜನರನ್ನು ಸಂಕಷ್ಟಕ್ಕೀಡಾಗುವಂತೆ ಮಾಡಿದೆ ಎಂದರು.



ಆದ್ದರಿಂದ ಕಾಂಗ್ರೆಸ್ ಸರ್ಕಾರ ಬೆಲೆ ಏರಿಕೆಯಿಂದ ತತ್ತರಿಸಿರುವ ಬಡ ಜನರಿಗೆ ಗ್ಯಾರಂಟಿ ಕಾರ್ಡ್ ಯೋಜನೆಯಲ್ಲಿ ಮನೆಯ ಯಜಮಾನಿಗೆ ತಿಂಗಳಿಗೆ 2 ಸಾವಿರ ರೂ. ನೇರವಾಗಿ ಬ್ಯಾಂಕ್ ಖಾತೆಗೆ ಹಾಕಲಾಗುವುದು, 200 ಯೂನಿಟ್ ಉಚಿತ ವಿದ್ಯುತ್, ತಲಾ 10 ಕೆಜಿ ಅಕ್ಕಿ ಉಚಿತವಾಗಿ ನೀಡುತ್ತೇವೆ. ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3 ಸಾವಿರ ರೂ. ನೀಡುತ್ತವೆ ಎಂದರು.

ಬಿಜೆಪಿ ಸರ್ಕಾರ ಭ್ರಷ್ಟಾಚಾರದಿಂದ ಕೂಡಿದ್ದು, ದೇಶದಲ್ಲಿ ಶೇ.40 ಕಮಿಷನ್ ಪಡೆಯುವ ಸರ್ಕಾರ ಎಂದು ಹೆಸರು ಮಾಡಿದೆ. ಬಿಜೆಪಿ ಸರ್ಕಾರ ದಿನಕ್ಕೊಂದು ಹಗರಣ ನಡೆಸಿ ಇಡೀ ರಾಜ್ಯದ ಸಂಪತ್ತನ್ನೇ ಲೂಟಿ ಮಾಡಿದೆ. ಇಂತಹ ಸರ್ಕಾರವನ್ನು ತೆಗೆಯಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಮೂಲಕ ಸಿದ್ದರಾಮಯ್ಯ ವರನ್ನು ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಆಪ್ತ ಕಾರ್ಯದರ್ಶಿ ಎಂ.ರಾಮಯ್ಯ, ಜಿ.ಪಂ. ಮಾಜಿ ಅಧ್ಯಕ್ಷ, ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಇಂದನ್‌ಬಾಬು, ರೇವಮ್ಮ, ಮಾಲೇಗೌಡ, ಕೆಂಪಣ್ಣ, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಹಳ್ಳಿಕೆರೆಹುಂಡಿ ಶಿವಕುಮಾರ್, ಚಿನ್ನಂಬಳ್ಳಿ ರಾಜು, ಶಿವಮಾದು, ಮಹಾದೇವ, ದಯಾನಂದಮೂರ್ತಿ, ಗುರುಸ್ವಾಮಿ, ಬಸವರಾಜು, ಜಗದೀಶ್, ಗಂಗಾಧರ್, ಲಕ್ಷ್ಮಮ್ಮ, ರವಿ, ಛಾಯಾ, ನಂಜಯ್ಯ, ಬೀರಯ್ಯ, ಗಾಯಿತ್ರಿ, ಮಹಾದೇವ್ ಪಾಲ್ಗೊಂಡಿದ್ದರು.

ಕಾವೇರಿ ಪಪೂ ಕಾಲೇಜಿನ ನಿಖಿತ್ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಏ.26– ಮೈಸೂರು ಕುವೆಂಪುನಗರದ ಶ್ರೀ ಕಾವೇರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ನಿಖಿತ್ ಎ ೦ . ಕೃಷ್ಣ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ 590 (600ಕ್ಕೆ) ಅಂಕ ಗಳಿಸುವುದರೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸಂಸ್ಕೃತ 100, ಇಂಗ್ಲಿಷ್ 93, ಅರ್ಥಶಾಸ್ತ್ರ 98, ವ್ಯವಹಾರಿಕ ಅಧ್ಯಯನ 100, ಲೆಕ್ಕಶಾಸ್ತ್ರ 99 ಹಾಗೂ ಕಂಪ್ಯೂಟರ್ ಸೈನ್ಸ್‌ನಲ್ಲಿ 100 ಅಂಕ ಗಳಿಸಿದ್ದಾರೆ.



ಸಿ ವೋಟರ್ ಕಾಂಗ್ರೆಸ್ ಸಮೀಕ್ಷೆ; ಅದು ನಿಜವಲ್ಲ

ಬೆಂಗಳೂರು, ಏ.26 (ಕೆಎಂಶಿ)–ಸಿ ವೋಟರ್ ಕಾಂಗ್ರೆಸ್ ಪಕ್ಷದ ಸಮೀಕ್ಷೆ. ಈ ಸಮೀಕ್ಷೆ ನಿಜವಾಗುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ. ಮತದಾರರ ಮನ ಬದಲಾಯಿಸಲು ಕಾಂಗ್ರೆಸ್ ಈ ಸಮೀಕ್ಷೆಯನ್ನು ಬಹಿರಂಗಪಡಿಸಿ, ಲಾಭ ಮಾಡಿಕೊಳ್ಳಲು ಹೊರಟಿದೆ ಎಂದು ದೂರಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರು ಮತಕೊಡುವುದು ಮುಖ್ಯ. ಅದೇ ಅಂತಿಮ. ಕಾಂಗ್ರೆಸ್ ಬಿಜೆಪಿ ನಾಯಕರು ಯಾವ ಆಧಾರದಲ್ಲಿ 150 ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತಾರೋ ತಿಳಿಯದು. ಆದರೆ ನಮಗೆ 123 ಸ್ಥಾನ ಹೇಗೆ ಬರುತ್ತದೆ ಎಂದು ಖಡಕ್ ಆಗಿ ಹೇಳುತ್ತೇನೆ. 106 ಕ್ಷೇತ್ರದಲ್ಲಿ ಜನರನ್ನು ಭೇಟಿ ಮಾಡಿದ್ದೇನೆ. ನಿತ್ಯ ಒಂದೊಂದು ಕ್ಷೇತ್ರದಲ್ಲಿ 50 ರಿಂದ 60 ಹಳ್ಳಿ ಸುತ್ತಿದ್ದೇನೆ. ಜನರ ಸಂಪರ್ಕದಲ್ಲಿದ್ದೇನೆ. ಪಂಚರತ್ನ, ಜನತಾ ಜಲಧಾರೆ ಯಶಸ್ವಿಯಾಗಿದೆ. ನನ್ನ ರೋಡ್ ಶೋಗೆ ಜನಸ್ಪಂದನೆ ಸಿಕ್ಕಿದೆ. ದೇವನಹಳ್ಳಿಯಲ್ಲಿ ಅಮಿತ್ ಶಾ ರೋಡ್ ಶೋಗೆ ಜನ ಇಲ್ಲ ಎಂದು ರದ್ದು ಮಾಡಿದ್ದಾರೆ. ಅಂತಹ ಪರಿಸ್ಥಿತಿ ನನಗೆ ಎಲ್ಲಿಯೂ ಒದಗಿಬರಲಿಲ್ಲ.

ನಮಗೆ ಜನರು ಆಶೀರ್ವಾದ ಮಾಡುತ್ತಾರೆ. ನಾವು ಯಾರಿಗೂ ಹಣ ಕೊಟ್ಟು ಸರ್ವೆ ಮಾಡಿಸಿ, ನಾವೇ ಮುಂದು ಎಂದು ಹೇಳಿಕೊಳ್ಳುತ್ತಿಲ್ಲ. ಜನರ ಬೆಂಬಲದ ಮೇಲೆ ಜೆಡಿಎಸ್ 123 ಸ್ಥಾನ ಗಳಿಸಲಿದೆ ಎಂದು ಹೇಳುತ್ತಿದ್ದೇನೆ. ಕಾಂಗ್ರೆಸ್, ಬಿಜೆಪಿಗೆ ದಂಡು ದಂಡು ನಾಯಕರು ಬಂದು ಪ್ರಚಾರ ಮಾಡುತ್ತಿದ್ದಾರೆ. ನಮ್ಮ ಪಕ್ಷಕ್ಕೆ ಕಾರ್ಯಕರ್ತರೇ ಪ್ರಚಾರಕರು. ಅವರೇ ನಮ್ಮ ಶಕ್ತಿ. ಇವರ ಮುಂದೆ ನಮಗೆ ಯಾವ ಇಂಟರ್‌ನ್ಯಾಷನಲ್ ನಾಯಕರು ಬೇಕಿಲ್ಲ. ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಇನ್ನು ಹಲವಷ್ಟು ಮುಖಂಡರು ನಮ್ಮ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ ಎಂದರು.

ಸಿಡಿಗೆ ಸ್ಟೇ ತಂದೋರಿಗೆ, 80 ಪ್ರಕರಣ ಇದ್ದವರಿಗೆ ಟಿಕೆಟ್ ಕೊಟ್ರು; ನನಗೆ 'ಕೈ' ಕೊಟ್ರು

● ಮಾಜಿ ಸಿಎಂ ಜಗದೀಶ್ ಶೆಟ್ಟರ್ ವಾಗ್ದಾಳಿ ● ಯಡಿಯೂರಪ್ಪ ಎಷ್ಟೇ ಬೈದರೂ ಆಶೀರ್ವಾದ

ಹುಬ್ಬಳ್ಳಿ: ನಿನ್ನೆ ಮೊನ್ನೆ ಪಕ್ಷಕ್ಕೆ ಬಂದೋರಿಗೆ, ಕ್ರಿಮಿನಲ್‌ಗಳಿಗೆ ಟಿಕೆಟ್ ಕೊಟ್ಟಿದ್ದೀರಿ. ನನಗೆ ಮಾತ್ರ ಟಿಕೆಟ್ ಸಿಗಲಿಲ್ಲ. ನನಗೆ ಟಿಕೆಟ್ ಕೈ ತಪ್ಪಿದಾಗ ಯಾರೊಬ್ಬರೂ ನನ್ನನ್ನು ಮಾತನಾಡಿಸಲಿಲ್ಲ. ಗೌರವದಿಂದ ನಡೆಸಿಕೊಳ್ಳಲಿಲ್ಲ ಎಂದಷ್ಟೇ ನಾನು ಬಿಜೆಪಿ ಬಿಟ್ಟು ಹೊರಬಂದೆ ಎಂದು ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅಳಲು ತೋಡಿಕೊಂಡಿದ್ದಾರೆ. ಹುಬ್ಬಳ್ಳಿಯಲ್ಲಿ ಬುಧವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಟಿಕೆಟ್ ದೊರಕದ ಕಾರಣಕ್ಕಾಗಿ ನಾನು ರೆಬಲ್ ಆದ ಮೇಲೆ ರಾಜ್ಯಸಭಾ ಸದಸ್ಯನನ್ನಾಗಿ ಮಾಡುತ್ತೇವೆ, ಕೇಂದ್ರದಲ್ಲಿ ದೊಡ್ಡ ಹುದ್ದೆ ಕೊಡುತ್ತೇವೆ ಎಂದು ಆಮಿಷವೊಡ್ಡಿದರು. ಆದರೆ, ತತ್ವ ಮತ್ತು ಸಿದ್ಧಾಂತದ ಬಗ್ಗೆ ಮಾತನಾಡುವವರು, ಸಿಡಿಗೆ ಕೋರ್ಟ್‌ನಲ್ಲಿ ಸ್ಟೇ ತಂದವರಿಗೆ, 80 ಪ್ರಕರಣಗಳಲ್ಲಿ ಭಾಗಿಯಾದವರಿಗೆ ಟಿಕೆಟ್ ನೀಡಿದ್ದಾರೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು.



ಮುಂದುವರಿದು, ಪಕ್ಷ ಬಿಟ್ಟಿದ್ದು ನಾನೊಬ್ಬನೇ ಅಲ್ಲ, ಹಲವು ಮುಖಂಡರು ಪಕ್ಷ ಬಿಟ್ಟಿದ್ದಾರೆ. ಹೀಗಿದ್ದರೂ, ನನ್ನನ್ನೇ ಏಕೆ ಟಾರ್ಗೆಟ್ ಮಾಡಲಾಗುತ್ತಿದೆ. ಯಡಿಯೂರಪ್ಪ ಅವರಿಂದ ನನ್ನ ಬೈಯಿಸಲಾಗುತ್ತಿದೆ. ಅವರು ಮಾಡಿರುವ ಟೀಕೆಗಳನ್ನು ಆಶೀರ್ವಾದ ಎಂದು ಭಾವಿಸುತ್ತೇನೆ' ಎಂದು ಹೇಳಿದರು.

ಯಡಿಯೂರಪ್ಪ ಅವರು ನನಗೆ ಟಿಕೆಟ್ ಕೊಡಿಸಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆದರೆ, ಅವರು ಅಸಹಾಯಕರಾದರು. ಯಡಿಯೂರಪ್ಪ ಮೇಲೆ ಬಂದೂಕು ಇಟ್ಟು ಗುಂಡು ಹಾರಿಸಲಾಗುತ್ತಿದೆ. ಇದೇ ಯಡಿಯೂರಪ್ಪನವರು ಕೆಜೆಪಿ ಕಟ್ಟಿದಾಗ ಬಸವರಾಜ ಬೊಮ್ಮಾಯಿ ಪಕ್ಷಕ್ಕೆ ಬರಲಿಲ್ಲವೆಂದು ಬೈದಿದ್ದರು. ಆದರೆ, ಬೊಮ್ಮಾಯಿಯವರು ಬಿಜೆಪಿಯಲ್ಲಿ ಗೆಲುವು ಸಾಧಿಸಿದ್ದರು. ನಾನು ಕೂಡಾ ಅತಿ ಹೆಚ್ಚು ಲೀಡ್‌ನಿಂದ ಗೆಲುವು ಸಾಧಿಸುತ್ತೇನೆ ಎಂದು ಹೇಳಿದರು.

ಶೆಟ್ಟರ್ ಸೋಲಿಸುವ ಜವಾಬ್ದಾರಿ ನನ್ನದು, ಲಕ್ಷ್ಮಣ ಸವದಿ ಸೋಲಿಸುವ ಜವಾಬ್ದಾರಿ ನಿಮ್ಮದು!



ಅಥಣಿ: ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗದೆ ಬಂಡಾಯವೆದ್ದು ಕಾಂಗ್ರೆಸ್ ಸೇರಿದ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮತ್ತು ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಮೇಲೆ ಬಿಜೆಪಿ ನಾಯಕರು ಜಿದ್ದಿಗೆ ಬಿದ್ದಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಜಗದೀಶ್ ಶೆಟ್ಟರ್ ಮತ್ತು ಬಿಜೆಪಿ ನಾಯಕರ ಮಧ್ಯೆ ದಿನಕ್ಕೊಂದು ಸೇಡಿನ ಮಾತುಗಳು ಹೊರಬರುತ್ತಲೇ ಇವೆ. ಇಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ಜಗದೀಶ್ ಶೆಟ್ಟರ್ ಅವರನ್ನು ಈ ಬಾರಿ ಚುನಾವಣೆಯಲ್ಲಿ ಸೋಲಿಸಲು ಪಣತೊಟ್ಟಿರುವುದಾಗಿ ಹೇಳಿದ್ದಾರೆ.

ಇಂದು ಅಥಣಿಯಲ್ಲಿ ಮಾತನಾಡಿದ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬೆನ್ನಿಗೆ ಚೂರಿ ಹಾಕಿದ್ದಾರೆ. ಅವರನ್ನು ಸೋಲಿಸುವ ಜವಾಬ್ದಾರಿ ನನ್ನದು ಎಂದಿದ್ದಾರೆ. ಬಿಜೆಪಿ ಶೆಟ್ಟರ್ ಅವರಿಗೆ ಎಲ್ಲಾ ಸ್ಥಾನಮಾನಗಳನ್ನು ನೀಡಿದರೂ ಪಕ್ಷ ಬಿಟ್ಟು ಹೋಗುವ ಅನಿವಾರ್ಯತೆ ಏನಿತ್ತು ಎಂದು ಪ್ರಶ್ನಿಸಿದ್ದಾರೆ.

ಇಂದು ಇಷ್ಟೊಂದು ಸಂಖ್ಯೆಯಲ್ಲಿ ಜನ ಸೇರಿದ್ದು ನೋಡಿದರೆ ಈ ಬಾರಿ ಚುನಾವಣೆಯಲ್ಲಿ ಲಕ್ಷ್ಮಣ ಸವದಿ ಸೋಲುವುದು ಖಚಿತ. ಸೂರ್ಯ–ಚಂದ್ರ ಇರುವುದು ಎಷ್ಟು ಸತ್ಯವೋ, ರಾಜ್ಯದಲ್ಲಿ ಬಿಜೆಪಿ 130 ಕ್ಕೂ ಹೆಚ್ಚು ಸೀಟು ಪಡೆದು ಸರ್ಕಾರ ರಚಿಸುವುದು ಅಷ್ಟೇ ಸತ್ಯ. 25 ರಿಂದ 30 ಸಾವಿರ ಅಂತರದಿಂದ ಬಿಜೆಪಿ ಅಭ್ಯರ್ಥಿ ಮಹೇಶ ಕುಮಟಳ್ಳಿ ಗೆಲ್ಲಲಿದ್ದಾರೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದರು. ವಿಧಾನಪರಿಷತ್ ಅವಧಿ 5 ವರ್ಷ 2 ತಿಂಗಳು ಇದ್ದರೂ ಸಹ ಲಕ್ಷ್ಮಣ ಸವದಿ ಬೆನ್ನಿಗೆ ಚೂರಿ ಹಾಕಿ ಹೋಗಿದ್ದಾರೆ. ಎಲ್ಲಾ ಅಧಿಕಾರ ಅನುಭವಿಸಿಯೂ ಶೆಟ್ಟರ್ ಬಿಜೆಪಿ ತೊರೆದಿದ್ದಾರೆ. ಇಲ್ಲಿ ಶೆಟ್ಟರ್ ಅವರನ್ನು ಸೋಲಿಸುವ ಜವಾಬ್ದಾರಿ ನನ್ನದು, ಲಕ್ಷ್ಮಣ ಸವದಿ ಅವರನ್ನು ಸೋಲಿಸುವ ಜವಾಬ್ದಾರಿ ನಿಮ್ಮದು ಎಂದು ಜನರಿಗೆ ಕರೆ ನೀಡಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ 20 ದಿನಗಳ ಚಿತ್ರಕಲಾ ಶಿಬಿರಕ್ಕೆ ಯಶಸ್ವಿ ತೆರೆ

ಮೈಸೂರು, ಏ.26(ಎಂಕೆ)– ನಗರದ ಎಂಜಿ ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ 20 ದಿನಗಳ ಚಿತ್ರಕಲಾ ಶಿಬಿರ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ, ಚಿತ್ರಕಲೆಯು ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ದಾರಿ ಮಾಡಿಕೊಡುತ್ತದೆ. ಚಿತ್ರ ರಚನೆಯು ಕಲೆಯು ಆದಿಮಾನವರ ಮೊಟ್ಟಮೊದಲ ಅಭಿವ್ಯಕ್ತಿ ಕಲೆ. ನೈಸರ್ಗಿಕ ಬಣ್ಣಗಳನ್ನೇ ಬಳಸಿ ಆದಿಮಾನವರು ಬಂಡೆಗಳ ಮೇಲೆ ಮೊದಲು ಚಿತ್ರಗಳನ್ನು ಬಿಡಿಸುತ್ತಿದ್ದರು ಎಂಬುದಕ್ಕೆ ದಾಖಲೆಗಳಾಗಿವೆ ಎಂದರು.

ಹಾಳೆ, ಗೋಡೆ, ಗಾಜು, ಮರ ಸೇರಿದಂತೆ ಎಲ್ಲಿ ಬೇಕಾದರೂ ಚಿತ್ರಕಲೆ ಬಿಡಿಸಲು ಸಾಧ್ಯ ಎಂಬುದು ತಂತ್ರಜ್ಞಾನದಿಂದ ಸಾಧ್ಯವಾಗಿದೆ. ಡಿಜಿಟಲ್ ಚಿತ್ರಕಲೆ ಕಲ್ಪನಾ ಲೋಕಕ್ಕೆ ಸವಾಲೆಸೆದಿದೆ. ಇಂಥ ಸನ್ನಿವೇಶದಲ್ಲಿ ಮಕ್ಕಳು ಚಿತ್ರಕಲೆಯನ್ನು ಅಭ್ಯಾಸ ಮಾಡುವುದರಿಂದ ಅವರ ವ್ಯಕ್ತಿತ್ವ ವಿಕಾಸಕ್ಕೆ ಅನುಕೂಲವಾಗುತ್ತದೆ ಎಂದರು. ಹಿರಿಯ ಕಲಾವಿದ ಬಸವರಾಜ ಮುಸಾವಳಗಿ ಮಾತನಾಡಿ, ಚಿತ್ರಕಲೆ ಕಲ್ಪನಾ ಲೋಕವನ್ನು ವಿಸ್ತರಿಸುತ್ತದೆ. ಬಣ್ಣ, ಗೆರೆ, ಕುಂಚಗಳ ಬಳಕೆಯು ಏಕಾಗ್ರತೆ ಹೆಚ್ಚಿಸುತ್ತದೆ. ಮಕ್ಕಳು ಶಿಬಿರದಲ್ಲಿ ಕಲಿತಿದ್ದನ್ನು, ಜೀವನದುದ್ದಕ್ಕೂ ಅಭ್ಯಾಸ ಮಾಡಬೇಕು ಎಂದು ಕಿವಿಮಾತು ಹೇಳಿದರಲ್ಲದೆ ಚಿತ್ರಕಲೆ ಕೇವಲ ಅಭಿರುಚಿಯಷ್ಟೇ ಆಗದೆ, ಜೀವನೋಪಾಯದ ದಾರಿಯೂ ಆಗುತ್ತದೆ. ಪ್ರಖ್ಯಾತ ಕಲಾವಿದರ ಚಿತ್ರ ಕಲಾಕೃತಿಗಳು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗೆ ಮಾರಾಟವಾಗುತ್ತದೆ ಎಂಬುದನ್ನು ಮರೆಯಬಾರದು. ಪ್ರವೃತ್ತಿಯೇ ವೃತ್ತಿಯಾಗಿ ಬದುಕನ್ನು ಪೋಷಿಸುತ್ತದೆ ಎಂದು ಹೇಳಿದರು.



ಇದೇ ವೇಳೆ ಕಲಾಶಿಕ್ಷಕರಾದ ಎನ್.ಬಿ. ಪಲ್ಲೇದ, ಪಿ.ಎಸ್.ಸಲಬಣ್ಣನವರ್, ಅಲ್ಲಾ ಸಾಬ್ ಗಡಾದ, ವೆಂಕಟರಾಜು, ನಾಗರಾಜಪ್ಪ, ಬಿ.ಎಂ.ಕೆರೂರು ಮತ್ತು ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಹಾಗೆಯೇ ಶಿಬಿರದಲ್ಲಿ ಉತ್ತಮ ಚಿತ್ರಗಳನ್ನು ರಚಿಸಿದ ವಿದ್ಯಾರ್ಥಿಗಳಾದ ಮೋನಿಷಾ, ಶ್ರುತಕೀರ್ತಿ, ಸುಚಿತ್ರಾ, ಅಭಿನಂದ್, ಪ್ರಣವ್, ಎನ್.ವಿ.ವರ್ಷಿಣಿ, ಬಿ.ಲಿಖಿತ, ಹರ್ಷಿತಾ ಮತ್ತು ಹೆವಾಲಿಯೋನ್ ಅವರಿಗೆ ನಗದು ಬಹುಮಾನ ನೀಡಲಾಯಿತು. ಪತ್ರಕರ್ತ ಕೆ. ನರಸಿಂಹಮೂರ್ತಿ, ಶಿಬಿರದ ಸಂಚಾಲಕ ಎಸ್.ಎಂ.ಜಂಬುಕೇಶ್ವರ ಮತ್ತಿತರರಿದ್ದರು.

ಯುಪಿ ಸಿಎಂ ಯೋಗಿಗೆ ಮೈಸೂರು ವಿಮಾನ ನಿಲ್ದಾಣದಲ್ಲಿ ಆತ್ಮೀಯ ಸ್ವಾಗತ

ಮೈಸೂರು, ಏ. 26(ಆರ್‌ಕೆ)– ಮಂಡ್ಯ ನಗರದಲ್ಲಿ ಚುನಾವಣಾ ಪ್ರಚಾರಕ್ಕೆ ತೆರಳಲು ಇಂದು ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಪ್ರತಾಪ್ ಸಿಂಹ, ಉಪಮೇಯರ್ ಡಾ. ಆರ್. ರೂಪಾ ಆತ್ಮೀಯವಾಗಿ ಬರಮಾಡಿಕೊಂಡರು.

ಬೆಳಗ್ಗೆ 11.55 ಗಂಟೆಗೆ ಆಗಮಿಸಿದ ಅವರು, ವಿಮಾನ ನಿಲ್ದಾಣದಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮಂಡ್ಯಕ್ಕೆ ತೆರಳಿ ಅಲ್ಲಿನ ಪ್ರಮುಖ ರಸ್ತೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ರೋಡ್ ಶೋ ನಡೆಸಿ, ನಂತರ ಸಿಲ್ವರ್ ಜುಬಿಲಿ ಪಾರ್ಕ್‌ನಲ್ಲಿ ಬಹಿರಂಗ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದರು.

ಬಳಿಕ ಮತ್ತೆ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಮರಳಿ, ಇಲ್ಲಿಂದ ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿಗೆ ಪ್ರಯಾಣ ಬೆಳೆಸಿದರು.

ಬಿಜೆಪಿ ಮುಖಂಡರಾದ ಡಾ. ಅನಿಲ್ ಥಾಮಸ್, ಕಂದೇಶ, ಹೆಚ್.ಜಿ. ಗಿರಿಧರ, ಪ್ರಕಾಶ್ ಪಾಟೀಲ್ ಸೇರಿದಂತೆ ಹಲವರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು, ಯೋಗಿ ಆದಿತ್ಯನಾಥ ಅವರಿಗೆ ಸ್ವಾಗತ ಕೋರಿದರು. ಈ ಸಂದರ್ಭ ಡಿಸಿಪಿ ಎಂ. ಮುತ್ತುರಾಜ್, ಕೆ.ಆರ್. ಉಪ ವಿಭಾಗದ ಎಸಿಪಿ ಎಸ್.ಇ. ಗಂಗಾಧರಸ್ವಾಮಿ ನೇತೃತ್ವದಲ್ಲಿ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಪ್ರತಾಪ್ ಸಿಂಹ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಮೈಸೂರು ಮಿತ್ರ ಗುರುವಾರ 27 ಏಪ್ರಿಲ್ 2023

'ಎಮರ್ಜೆನ್ಸಿ' ಮೂಲಕ ಜನರ ಮೂಲಭೂತ ಹಕ್ಕು ಕಸಿದಿದ್ದ ಕಾಂಗ್ರೆಸ್

ಸಂವಿಧಾನಕ್ಕೆ ತಿದ್ದುಪಡಿ ತರಬಹುದೇ ಹೊರತು ಬದಲಾವಣೆ ಅಸಾಧ್ಯ: ಡಾ. ಪ್ರದ್ಯುಮಾನ್ ವಾಜ್



ಮಡಿಕೇರಿ, ಏ.26– ಸಂವಿಧಾನ ಬದಲಾಯಿಸಲು ಮುಂದಾಗಿದೆ ಎನ್ನುವ ವೃಥಾರೋಪಗಳನ್ನು ಬಿಜೆಪಿ ವಿರುದ್ಧ ಮಾಡಲಾಗುತ್ತಿದೆ. ದೇಶದಲ್ಲಿ 'ಎಮರ್ಜೆನ್ಸಿ' ಘೋಷಿಸುವ ಮೂಲಕ ಜನರ ಮೂಲಭೂತ ಹಕ್ಕುಗಳನ್ನು ಕಸಿದು ಸಂವಿಧಾನಕ್ಕೆ ಅವಮಾನ ಮಾಡಿದ್ದು, ಕಾಂಗ್ರೆಸ್ ಎಂದು ಗುಜರಾತ್ ಶಾಸಕ ಡಾ. ಪ್ರದ್ಯುಮಾನ್ ವಾಜ್ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರಲಾಗುತ್ತದೆಯೇ ಹೊರತು, ಅದನ್ನು ಬದಲಾಯಿಸಲು ಎಂದಿಗೂ ಸಾಧ್ಯವಿಲ್ಲ. ಹೀಗಿದ್ದೂ, ಬಿಜೆಪಿ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡಲಾಗುತ್ತಿದೆ. ಕಾಂಗ್ರೆಸ್‌ನ ಸುದೀರ್ಘ ಆಡಳಿತದ ಅವಧಿಯಲ್ಲಿ ಸಂವಿಧಾನಕ್ಕೆ 100ಕ್ಕೂ ಹೆಚ್ಚಿನ ತಿದ್ದುಪಡಿಗಳನ್ನು ತರಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಂವಿಧಾನ ಬದ್ಧವಾಗಿ ರಚನೆಯಾದ ಸರ್ಕಾರಗಳನ್ನು ಕಾಂಗ್ರೆಸ್ ಸರ್ಕಾರ ತನ್ನ ಆಡಳಿತದ ಅವಧಿಯಲ್ಲಿ 30 ಬಾರಿ ವಜಾಗೊಳಿಸಿ ಸಂವಿಧಾನದ ಮೂಲ ಚಿಂತನೆಗಳಿಗೆ ವಿರುದ್ಧವಾಗಿ ನಡೆದುಕೊಂಡಿದೆ. ಟೀಕಿಸುವ ಭರದಲ್ಲಿ ತೋರು ಬೆರಳು ಮಾತ್ರ ಮುಂದಿರುತ್ತದೆ, ಮೂರು ಬೆರಳುಗಳು ನಿಮ್ಮತ್ತಲೆ ತಿರುಗಿರುತ್ತದೆ ಎನ್ನುವುದನ್ನು ಕಾಂಗ್ರೆಸ್ ಅರಿತುಕೊಳ್ಳಬೇಕೆಂದು ತೀಕ್ಷ್ಣವಾಗಿ ನುಡಿದರು. ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಸಂವಿಧಾನದ 370ನೇ ವಿಧಿಗೆ ತಿದ್ದುಪಡಿಯನ್ನು ತರುವ ಮೂಲಕ ಜಮ್ಮು ಮತ್ತು ಕಾಶ್ಮೀರದ ಶೋಷಿತ ಸಮುದಾಯಗಳಿಗೆ ಅವರ ಹಕ್ಕನ್ನು ನೀಡುವ ದೊಡ್ಡ ಕೆಲಸವನ್ನು ನಿರ್ವಹಿಸಿದೆ ಎಂದು ಸ್ಪಷ್ಟಪಡಿಸಿದರು. ಅಟಲ್ ಬಿಹಾರಿ ವಾಜಪೇಯಿ ಅವರು ಅಧಿಕಾರದಲ್ಲಿದ್ದ ಸಂದರ್ಭ ಅಡ್ವಾಣಿಯವರೊಂದಿಗೆ ಸೇರಿ ಜ್ಞಾನ ಭಂಡಾರವೆಂದೇ ವಿಶ್ವ ಮಾನ್ಯವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಗೌರವವನ್ನು ಕೊಡಮಾಡಲಾಯಿತು ಎಂದು ಡಾ. ಪ್ರದ್ಯುಮಾನ್ ವಾಜ್ ಸ್ಪಷ್ಟಪಡಿಸಿದರು.

'ಏಕ ರಾಷ್ಟ್ರ' ಚಿಂತನೆ: ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಏಕ ರಾಷ್ಟ್ರ ಪರಿಕಲ್ಪನೆ ಮತ್ತು 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಚಿಂತನೆಯಡಿ ರಾಷ್ಟ್ರದ ಸರ್ವಾಂಗೀಣ ಪ್ರಗತಿಯ ಚಿಂತನೆಗಳನ್ನು ಕಾರ್ಯರೂಪಕ್ಕೆ ಇಳಿಸಲಾಗುತ್ತಿದೆ. ಈ ಹಿನ್ನೆಲೆ ದೇಶದ ಇತರ ರಾಜ್ಯಗಳಿಗೆ ತೆರಳುವಂತೆಯೇ ಬಿಜೆಪಿ ನಾಯಕರು ಕರ್ನಾಟಕಕ್ಕೂ ಆಗಮಿಸುತ್ತಿದ್ದಾರೆಂದು ತಿಳಿಸಿದರು.

ಜನ ಮೆಚ್ಚುಗೆಗೆ ಪಾತ್ರರು: ಕೊಡಗಿನ ಮಡಿಕೇರಿ ಕ್ಷೇತ್ರದಿಂದ 5 ಬಾರಿ ವಿಧಾನ ಸಭೆಗೆ ಆಯ್ಕೆಯಾಗಿರುವ ಎಂ.ಪಿ. ಅಪ್ಪಚ್ಚು ರಂಜನ್ ಹಾಗೂ 4 ಬಾರಿ ಶಾಸಕರಾಗಿರುವ ಕೆ.ಜಿ. ಬೋಪಯ್ಯ ಅವರು ಜನಮೆಚ್ಚುಗೆಗೆ ಪಾತ್ರವಾಗಿಯೇ ಇಂತಹ ಸಾಧನೆ ಮಾಡಲು ಸಾಧ್ಯವಾಗಿದೆ. ಈ ಬಾರಿಯೂ ಇವರು ಜನಾಶೀರ್ವಾದವನ್ನು ಪಡೆಯಲಿದ್ದಾರೆಂದು ದೃಢವಾಗಿ ನುಡಿದರು.

ಬಿಜೆಪಿ ರೈತ ಮೋರ್ಚಾ ಪ್ರಮುಖರಾದ ಡಾ.ಬಿ.ಸಿ. ನವೀನ್ ಮಾತನಾಡಿ, ಡಾ. ಪ್ರದ್ಯುಮಾನ್ ವಾಜ್ ಅವರು, ಇಂದು ಬೆಳಗ್ಗೆ ಮಂಗಳಾದೇವಿನಗರ, ಅಶೋಕಪುರ ವಿಭಾಗಗಳಿಗೆ ಭೇಟಿ ನೀಡಿದ್ದರು. ನಗರದ ಫೀ.ಮಾ.ಕಾರ್ಯಪ್ಪ ಜ.ತಿಮ್ಮಯ್ಯ ಸೇರಿದಂತೆ ವೀರ ಯೋಧರ ಪ್ರತಿಮೆಗಳಿಗೆ ಗೌರವಾರ್ಪಣೆ ಮಾಡಿರುವುದಾಗಿ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ಪಕ್ಷದ ವಕ್ತಾರ ಮಹೇಶ್ ಜೈನಿ, ಪಕ್ಷದ ಪ್ರಮುಖರಾದ ಸಜಿಲ್ ಕೃಷ್ಣನ್ ಉಪಸ್ಥಿತರಿದ್ದರು.

ಸಿದ್ದಾಪುರದಲ್ಲಿ ಭಾರೀ ಗಾಳಿ, ಮಳೆ: ಮರ ಬಿದ್ದು ವಿದ್ಯುತ್ ಕಂಬಕ್ಕೆ ಹಾನಿ



ಸಿದ್ದಾಪುರ, ಏ.26– ಸಿದ್ದಾಪುರ ಸುತ್ತಮುತ್ತ ದಿಢೀರ್ ಸುರಿದ ಗಾಳಿ ಮಳೆಗೆ ಮರ ಬಿದ್ದು, ವಿದ್ಯುತ್ ಕಂಬಗಳಿಗೆ ಹಾನಿಯಾದ ಘಟನೆ ಸಿದ್ದಾಪುರ, ಕರಡಿಗೋಡು, ಗುಯ್ಯ ಗ್ರಾಮ ವ್ಯಾಪ್ತಿಯಲ್ಲಿ ನಡೆದಿದೆ.

ಬೆಳಗ್ಗಿನಿಂದಲೇ ಮೋಡ ಕವಿದ ವಾತಾವರಣದೊಂದಿಗೆ ಮಧ್ಯಾಹ್ನದ ವೇಳೆಯಲ್ಲಿ ಗಾಳಿ, ಗುಡುಗು ಸಹಿತ ಮಳೆ ಸುರಿಯಲಾರಂಭಿಸಿತು. ದಿಢೀರ್ ಸುರಿದ ಮಳೆಯಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡರೆ ಸಾರ್ವಜನಿಕರು ನಡೆದಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಚರಂಡಿಗಳು ತ್ಯಾಜ್ಯ ತುಂಬಿ ಮುಚ್ಚಿ ಹೋಗಿರುವುದರಿಂದ ಮಳೆ ನೀರು ರಸ್ತೆಯಲ್ಲಿ ಹರಿಯುತ್ತಿತ್ತು. ಸಿದ್ದಾಪುರ–ಮೈಸೂರು ರಸ್ತೆ, ಕರಡಿಗೋಡು, ಗುಯ್ಯ ಗ್ರಾಮ ವ್ಯಾಪ್ತಿಯ ಹಲವೆಡೆ ವಿದ್ಯುತ್ ಕಂಬ ಹಾಗೂ ತಂತಿಗಳಿಗೆ ಹಾನಿಯಾಗಿದೆ. ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು ಚೆಸ್ಕಾಂ ಸಿಬ್ಬಂದಿಗಳು ವಿದ್ಯುತ್ ಲೈನ್ ದುರಸ್ತಿ ಕಾರ್ಯದಲ್ಲಿ ನಿರತರಾಗಿದ್ದಾರೆ.

ಬಿಸಿಲಿನ ಬೇಗೆಯಿಂದ ಕಂಗಾಲಾಗಿದ್ದ ರೈತರು ಮೊಗದಲ್ಲಿ ಮಂದಹಾಸ ಮೂಡಿದ್ದು. ದಿಢೀರ್ ಮಳೆಯಿಂದ ಸಾರ್ವಜನಿಕರು ಸಮಸ್ಯೆ ಎದುರಿಸಬೇಕಾಯಿತು.

ನಿಷೇಧಿತ ಎಲೆಕ್ಟ್ರಾನಿಕ್ ಸಿಗರೇಟ್ ಮಾರಾಟ ಅಂಗಡಿಗಳ ಮೇಲೆ ದಾಳಿ: ಸಿಗರೇಟ್ ವಶ

ವಿರಾಜಪೇಟೆ, ಏ.26– ನಿಷೇಧಿತ ಎಲೆಕ್ಟ್ರಾನಿಕ್ ಸಿಗರೇಟನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ನಡೆಸಿ ಪೊಲೀಸರು ಸಿಗರೇಟ್ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಿರಾಜಪೇಟೆ ನಗರ ಠಾಣೆ ಪೊಲೀಸರು ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿಯ ಅಂಗಡಿ ಹಾಗೂ ಪೆರುಂಬಾಡಿ ಚೆಕ್‌ಪೋಸ್ಟ್ ಬಳಿ ಅಂಗಡಿ ಮಳಿಗೆ ಮೇಲೆ ದಾಳಿ ನಡೆಸಿ ಸುಮಾರು 50 ಸಾವಿರ ರೂ. ಮೌಲ್ಯದ 35ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ ಸಿಗರೇಟನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ದಾಳಿ ಸಂದರ್ಭದಲ್ಲಿ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ ಹಾಗೂ ಠಾಣಾಧಿಕಾರಿ ಮದನ್ ಕುಮಾರ್ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ವಿದ್ಯುತ್ ವ್ಯತ್ಯಯ

ಮಡಿಕೇರಿ, ಏ.26– ಸೋಮವಾರಪೇಟೆ ವಿದ್ಯುತ್ ವಿತರಣಾ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.27 ಮತ್ತು 29ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಗೌಡಳ್ಳಿ, ಶಾಂತಳ್ಳಿ, ಐಗೂರು, ಕರ್ಕಳ್ಳಿ, ಸೋ.ಪೇಟೆ, ಗಣಗೂರು, ಬಾಣಾ ವಾರ, ಅಬ್ಬೂರುಕಟ್ಟೆ, ದೊಡ್ಡಮಳೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅರೆಸೇನಾ ಪಡೆ ಪಥ ಸಂಚಲನ



ವಿರಾಜಪೇಟೆ, ಏ.26– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿರಾಜಪೇಟೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕೇಂದ್ರದ ಅರೆಸೇನಾ ಪಡೆ ಹಾಗೂ ಪೊಲೀಸರು ಪಥಸಂಚಲನ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್ ಮಾತನಾಡಿ, ವಿಧಾನಸಭಾ ಚುನಾವಣೆಯಲ್ಲಿ ಶಾಂತಿಯುತವಾಗಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಪಥಸಂಚಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ವಿರಾಜಪೇಟೆ ಪಟ್ಟಣದ ಗಾಂಧಿನಗರ, ತೆಲುಗರ ಬೀದಿ, ಪಂಜರಪೇಟೆ ದಕ್ಕನಿಮೊಹಲ್ಲ, ಬಂಗಾಳಬೀದಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಪಥಸಂಚಲನ ನಡೆಸಲಾಯಿತು. ಈ ಸಂದರ್ಭ ವಿರಾಜಪೇಟೆ ಡಿವೈಎಸ್‌ಪಿ ಆರ್. ಮೋಹನ್ ಕುಮಾರ್, ವೃತ್ತನಿರೀಕ್ಷಕ ಬಿ.ಎಸ್. ಶಿವರುದ್ರ ನಗರ ಮತ್ತು ಗ್ರಾಮಾಂತರ ಠಾಣಾಧಿಕಾರಿಗಳಾದ ಮದನ್‌ಕುಮಾರ್ ಮತ್ತು ರವಿಕುಮಾರ್ ಸೇರಿದಂತೆ ಕೇಂದ್ರದ ಅರೆಸೇನಾ ಪಡೆ ಸಿಬ್ಬಂದಿಗಳು ಪಥಸಂಚಲನದಲ್ಲಿ ಭಾಗವಹಿಸಿದ್ದರು.

ಇಂದಿನಿಂದ ಅರೆಬೆತ್ತಲೆ ಪ್ರತಿಭಟನೆ

ಮಡಿಕೇರಿ, ಏ.26– ಮಡಿಕೇರಿ ತಾಲೂಕಿನ ಹೊದ್ದೂರು ಗ್ರಾ.ಪಂ ವ್ಯಾಪ್ತಿಯ ಪಾಲೇಮಾಡು ಕಾನ್ಶಿರಾಂ ನಗರದ ನಿವಾಸಿಗಳು ಏ.27ರಿಂದ ಅರೆಬೆತ್ತಲೆ ಪ್ರತಿಭಟನೆ ಆರಂಭಿಸಲು ನಿರ್ಧರಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕಳೆದ 30 ದಿನಗಳಿಂದ ಧರಣಿ ನಡೆಸುತ್ತಿದ್ದರೂ ಆಡಳಿತ ವ್ಯವಸ್ಥೆಯಾವುದೇ ಸ್ಪಂದನೆ ನೀಡದ ಕಾರಣ ಈ ನಿರ್ಧಾರ ಕೈಗೊಂಡಿರುವುದಾಗಿ ಹೋರಾಟಗಾರರ ಪರವಾಗಿ ಸ್ಥಳೀಯ ನಿವಾಸಿ ಎಂ.ಎಸ್.ಆನಂದ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡ ಮತ್ತಿತರ ದುರ್ಬಲ ವರ್ಗದ 260 ಕುಟುಂಬಗಳು ವಾಸ ಮಾಡುತ್ತಿರುವ ನಿವೇಶನದ ಹಕ್ಕುಪತ್ರದ ಲೋಪದೋಷಗಳನ್ನು ಸರಿಪಡಿಸಬೇಕು ಹಾಗೂ ಮೂಲಭೂತ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸಿ ಗ್ರಾಮದಲ್ಲೇ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ಜಿಲ್ಲಾಧಿಕಾರಿಗಳು ಖುದ್ದು ಭೇಟಿ ನೀಡಿ ಈ ಬೇಡಿಕೆಗಳ ಕುರಿತು ಸೂಕ್ತ ಭರವಸೆ ನೀಡಬೇಕು. ತಪ್ಪಿದಲ್ಲಿ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಎಚ್ಚರಿಕೆಯನ್ನು ಕೂಡ ನೀಡಲಾಗಿತ್ತು. ಆದರೆ ಬಡವರ ಹೋರಾಟಕ್ಕೆ ಬೆಲೆ ಇಲ್ಲ ಎಂಬಂತೆ ಇಲ್ಲಿಯವರೆಗೆ ಯಾರೂ ನಮ್ಮನ್ನು ವಿಚಾರಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಮಹಿಳೆಯರು, ಪುರುಷರು, ಮಕ್ಕಳಾದಿಯಾಗಿ ಧರಣಿ ನಡೆಸುತ್ತಿದ್ದರೂ ನಮ್ಮ ಮತವೇ ಬೇಡ ಎನ್ನುವ ರೀತಿಯಲ್ಲಿ ಆಡಳಿತ ವ್ಯವಸ್ಥೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೋರಾಟದ ಮುಂದಿನ ಭಾಗವಾಗಿ ಅರೆಬೆತ್ತಲೆ ಪ್ರತಿಭಟನೆಯನ್ನು ಆರಂಭಿಸಲಾಗುತ್ತಿದೆ. ಇದಕ್ಕೂ ಸ್ಪಂದನೆ ದೊರೆಯದಿದ್ದಲ್ಲಿ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವುದಾಗಿ ಆನಂದ್ ತಿಳಿಸಿದ್ದಾರೆ.

ನಾನು ಆಮದು ಅಭ್ಯರ್ಥಿಯಲ್ಲ...

- ಸೋಮವಾರಪೇಟೆ ಸಾಕಮ್ಮನ ಕುಡಿ ನಾನು
- ಕೂಡಿಗೆಯಲ್ಲಿ ಕಾಂಗ್ರೆಸ್ ಸಮಾವೇಶದಲ್ಲಿ ಡಾ.ಮಂಥರ್‌ಗೌಡ



ಕುಶಾಲನಗರ, ಏ.26– ನಾನು ಹೊರ ಜಿಲ್ಲೆಯಿಂದ ಬಂದವನಲ್ಲ. ನಾನು ಸೋಮವಾರಪೇಟೆ ಸಾಕಮ್ಮನ ಕುಟುಂಬದ ಕುಡಿ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಗೆ ನಮಗೊಂದು ಅವಕಾಶ ಕೊಡಿ ಎಂದು ಮಡಿಕೇರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್‌ಗೌಡ ಮಂಗಳವಾರ ರಾತ್ರಿ ಕೂಡಿಗೆಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಮತದಾರರಲ್ಲಿ ತಮ್ಮ ಅಮೂಲ್ಯವಾದ ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡುವಂತೆ ಮನವಿ ಮಾಡಿದ ಪರಿಯಿದು.

ಕಳೆದ 25 ವರ್ಷಗಳಿಂದ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಬಿಜೆಪಿ ಅಭ್ಯರ್ಥಿ ಅಪ್ಪಚ್ಚು ರಂಜನ್ ಅವರು ಅಧಿಕಾರ ನಡೆಸಿರುವುದು ಸಾಕು. ಯುವ ಶಕ್ತಿಯನ್ನು ಚುನಾಯಿಸುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕೈ ಜೋಡಿಸುವಂತೆ ಡಾ.ಮಂಥರ್ ಮನವಿ ಮಾಡಿದರು. ಶಾಸಕ ರಂಜನ್ 25 ವರ್ಷಗಳ ಅಧಿಕಾರದ ಅವಧಿಯಲ್ಲಿ ಕೊಡಗು ಜಿಲ್ಲೆಯನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಿ ಅದರ ಆಧಾರದಲ್ಲಿ ಮತಗಳನ್ನು ಬಿಟ್ಟು ಎದುರಾಳಿ ಅಭ್ಯರ್ಥಿ ಮಂಥರಗೌಡ ಹಾಗೂ ಅವರ ಅಪ್ಪನನ್ನು ದೂರಿಕೊಂಡು ಮತ ಕೇಳುತ್ತಿರುವುದು ಸರಿಯೇ ಎಂದು ಮಂಥರ್ ಗೌಡ ಪ್ರಶ್ನಿಸಿದರು. ಎಐಸಿಸಿ ಸದಸ್ಯೆ ಕೆ.ಪಿ.ಚಂದ್ರಕಲಾ ಮಾತನಾಡಿ, ಕುಶಾಲನಗರ ತಾಲೂಕಿನ ಅಭಿವೃದ್ಧಿಯ ವಿರೋಧಿ ಅಪ್ಪಚ್ಚು ರಂಜನ್ ಅವರನ್ನು ಕ್ಷೇತ್ರದ ಜನ ಈ ಬಾರಿ ಮನೆಗೆ ಕಳಿಸುವುದು ನಿಶ್ಚಿತ. ಹಾಗೆಯೇ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಖಚಿತ ಎಂದು ಚಂದ್ರಕಲಾ ಭವಿಷ್ಯ ನುಡಿದರು.

ಮಾಜಿ ಮುಖ್ಯಮಂತ್ರಿ ದಿ. ಆರ್. ಗುಂಡೂರಾವ್ ಕಾಲದ ಅಭಿವೃದ್ಧಿ ಹೊರತುಪಡಿಸಿ ಈ ಶಾಸಕ ಅಪ್ಪಚ್ಚು ರಂಜನ್ ಅವಧಿಯಲ್ಲಿ ಯಾವ ಅಭಿವೃದ್ಧಿಯೂ ಆಗಲಿಲ್ಲ. 20 ವರ್ಷಗಳ ಸತತ ಹೋರಾಟದ ಫಲವಾಗಿ ಕುಶಾಲನಗರ ತಾಲೂಕನ್ನು ವಿ.ಪಿ.ಶಶಿಧರ್ ನೇತೃತ್ವದಲ್ಲಿ ಪಡೆದುಕೊಳ್ಳಲಾಯಿತು ಎಂದರು.

ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಪರಿಕಲ್ಪನೆ ಹಾಗೂ ಚಿಂತನೆಯೇ ಇಲ್ಲದ ವ್ಯಕ್ತಿಯ ಕಪಿಮುಷ್ಟಿಯಲ್ಲಿ ಕ್ಷೇತ್ರ ಕಳೆದ 25 ವರ್ಷಗಳ ಅವಧಿ ಸಿಲುಕಿದ್ದು ಸಾಕು. ಇನ್ನು ಯುವ ಶಕ್ತಿಗೆ ಕೆಲಸ ಬೇಕು. ಜಾಗ ಖಾಲಿ ಮಾಡಿ ಎಂದು ರಂಜನ್ ಬಗ್ಗೆ ವ್ಯಂಗ್ಯವಾಡಿದರು.

ವಿ.ಬಾಡಗದಲ್ಲಿ ಕಾಳಿಂಗಸರ್ಪ ಸೆರೆ



ನಾಪೋಕ್ಲು, ಏ.26– ವಿರಾಜಪೇಟೆ ಸಮೀಪದ ವಿ ಬಾಡಗ ಗ್ರಾಮದಲ್ಲಿ ಭಾರೀ ಗಾತ್ರದ ವಿಷಕಾರಿ ಕಾಳಿಂಗ ಸರ್ಪವನ್ನು ಸೆರೆ ಹಿಡಿಯಲಾಗಿದೆ. ವಿಬಾಡಗ ಕಂಜಿತಂಡ ಚಿನ್ನಪ್ಪ ಎಂಬುವರ ಮನೆ ಹತ್ತಿರ ಮಂಗಳವಾರ ಕೆರೆಹಾವು ತಿನ್ನಲು ಹೊಂಚು ಹಾಕುತ್ತಿದ್ದ 12 ಅಡಿ ಉದ್ದದ ಭಾರೀ ಗಾತ್ರದ ಅತೀ ವಿಷಕಾರಿ ಹಾಗೂ ವಿರಳ ಎನ್ನಲಾಗುವ ಕಾಳಿಂಗ ಸರ್ಪವನ್ನು ಉರಗತಜ್ಞ ಪೊನ್ನೀರ ಗಗನ್ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಇಂದು ಹಿಡಿದ ಸರ್ಪ 66ನೇ ಕಾಳಿಂಗ ಸರ್ಪವಾಗಿದೆ. ಯಾವುದೇ ತರದ ಹಾವುಗಳು ಕಂಡರೆ ತಮ್ಮನ್ನು ಸಂಪರ್ಕಿಸಿದಲ್ಲಿ ರಕ್ಷಿಸಲಾಗುವುದು ಎನ್ನುತ್ತಾರೆ ಗಗನ್.

ಅಬಕಾರಿ ಕಾರ್ಯಾಚರಣೆ: ವಿವಿಧೆಡೆ ಮದ್ಯ ವಶ

ಚಾಮರಾಜನಗರ, ಏ.26– ಅಬಕಾರಿ ಅಧಿಕಾರಿಗಳು ಅಬಕಾರಿ ಅಕ್ರಮಗಳ ವಿರುದ್ಧ ಕಾರ್ಯಾಚರಣೆ ಮುಂದುವರೆಸಿದ್ದು, ರಾತ್ರಿ ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮ ರಸ್ತೆಯಲ್ಲಿ ಗಸ್ತು ನಡೆಸುತ್ತಿದ್ದ ವೇಳೆ ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ 5.040 ಲೀಟರ್ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ. ಮದ್ಯ ಹಾಗೂ ವಾಹನದ ಮೌಲ್ಯ 96,967 ರೂ. ಗಳಾಗಿವೆ.

ಯಳಂದೂರು ಪಟ್ಟಣ ವ್ಯಾಪ್ತಿಯಲ್ಲಿ ಗಸ್ತು ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 2.880 ಲೀಟರ್ ಮದ್ಯವನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಮದ್ಯ ಮತ್ತು ವಾಹನದ ಮೌಲ್ಯ 61,124 ರೂ. ಗಳಾಗಿವೆ.

ಚಾಮರಾಜನಗರ ತಾಲೂಕಿನ ಕಿಳಲೀಪುರ ಗ್ರಾಮ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ 7.30 ಗಂಟೆ ಸಮಯದಲ್ಲಿ ಗಸ್ತು ನಡೆಸುತ್ತಿದ್ದ ವೇಳೆ ದ್ವಿಚಕ್ರ ವಾಹನದಲ್ಲಿ ಸಾಗಿಸುತ್ತಿದ್ದ 6.030 ಲೀಟರ್ ಮದ್ಯವನ್ನು ವಶಕ್ಕೆ ಪಡೆಯಲಾಗಿದೆ. ಮದ್ಯ ಮತ್ತು ವಾಹನದ ಮೌಲ್ಯ 62,353 ರೂ.ಗಳಾಗಿವೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ತಿಳಿಸಿದೆ.

ಸೋಮಣ್ಣರನ್ನು ಗೆಲ್ಲಿಸಿದರೆ ಗಡಿ ಜಿಲ್ಲೆ ಚಾ.ನಗರ ಅಭಿವೃದ್ಧಿ

ಗಡಿನಾಡು ಪ್ರಾಧಿಕಾರದ ಅಧ್ಯಕ್ಷ ಸೋಮಶೇಖರ್ ಅಭಿಮತ



ಚಾಮರಾಜನಗರ, ಏ.26– ಸರ್ವ ಜನಾಂಗದ ಹಿತಕ್ಕಾಗಿ ದುಡಿಯುವ, ಸಾಂಸ್ಕೃತಿಕ ರಾಯಭಾರಿ, ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಗೆಲ್ಲಿಸಿದರೆ ಗಡಿ ಜಿಲ್ಲೆ ಚಾಮರಾಜನಗರ ಅಭಿವೃದ್ಧಿ ಹೊಂದುತ್ತದೆ ಎಂದು ಗಡಿನಾಡು ಪ್ರಾಧಿಕಾರದ ಅಧ್ಯಕ್ಷ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಸೋಮಶೇಖರ್ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾ ಬಿಜೆಪಿ ನೂತನ ಕಚೇರಿಯಲ್ಲಿ ಬುಧವಾರ ಸಂಜೆ ನಡೆದ ಕ್ಷೇತ್ರದ ಹಿರಿಯ ಜಾನಪದ ಕಲಾವಿದರ ಹಾಗೂ ಮಹಿಳಾ ಕಲಾವಿದರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸೋಮಣ್ಣ ಕೇವಲ ರಾಜಕಾರಣಿಯಲ್ಲ, ಅವರೊಬ್ಬ ಜನ ಸೇವಕರಾಗಿದ್ದಾರೆ. ಅವರ ಪತ್ನಿ ಶೈಲಜಾ ಅವರು ಸಹ ಗೋವಿಂದರಾಜ ನಗರ ಕ್ಷೇತ್ರದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದ ಮೂಲಕ ಬಡ ಕಲಾವಿದರ ಸೇವೆ ಮಾಡುವುದರ ಜೊತೆಗೆ ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಇಂಥ ವ್ಯಕ್ತಿತ್ವವುಳ್ಳ ವಿ. ಸೋಮಣ್ಣ ಅವರು ಚಾ.ನಗರ ಕ್ಷೇತ್ರ ಅಭ್ಯರ್ಥಿಯಾಗಿರುವುದು ನಮ್ಮೆಲ್ಲರ ಪುಣ್ಯ. ಅವರ ಸೇವೆ ಹಾಗೂ ಜಿಲ್ಲೆಯ ಅಭಿವೃದ್ಧಿ ಬಯಸುವ ಪ್ರತಿಯೊಬ್ಬ ಮತದಾರರು ಬಿಜೆಪಿ ಹಾಗೂ ಸೋಮಣ್ಣ ಅವರ ಗುರುತಾದ ಕಮಲಕ್ಕೆ ಮತ ನೀಡಿ. ಒಂದು ಬಾರಿ ಅವರಿಗೆ ಅವಕಾಶ ಕೊಟ್ಟು ನೋಡಿ. ನಿಮ್ಮ ಕ್ಷೇತ್ರದಲ್ಲಿ ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವಾಗುತ್ತದೆ ಎಂದು ನಾನು ಅಭಯ ನೀಡುತ್ತೇನೆ ಎಂದು ಸೋಮಶೇಖರ್ ತಿಳಿಸಿದರು.

ರಂಗಕರ್ಮಿ ನಾಗರಾಜಮೂರ್ತಿ ಮಾತನಾಡಿ, ಸೋಮಣ್ಣ ಅವರನ್ನು ಕಳೆದ 30 ವರ್ಷಗಳಿಂದ ನಾನು ಬಲ್ಲೆ. ಕಲಾವಿದರ ಬಗ್ಗೆ ಅವರಿಗೆ ಅಪಾರವಾದ ಪ್ರೀತಿ ಗೌರವಿದೆ. ಕ್ಷೇತ್ರದ ಜನರ ಅಭಿವೃದ್ಧಿಯ ಬಗ್ಗೆ ಅವರಿಗಿರುವ ಕಾಳಜಿಯನ್ನು ಹತ್ತಿರದಿಂದ ನೋಡಿದ್ದೇನೆ. ಗೋವಿಂದರಾಜನಗರವನ್ನು ಮಾದರಿ ಮಾಡಿರುವ ವಿ.ಸೋಮಣ್ಣ ಅವರಿಗೆ ಮತ ನೀಡಿದರೆ ಚಾ.ನಗರ ಅಭಿವೃದ್ಧಿಯಾಗುತ್ತದೆ ಎಂದು ಹೇಳಿ, ಸೋಮಣ್ಣಗೆ ನಿಮ್ಮ ಮತ– ಚಾ.ನಗರ ಕ್ಷೇತ್ರಕ್ಕೆ ಹಿತ ಎಂದು ನುಡಿದರು.

ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಸೋಮಣ್ಣ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಹಳಷ್ಟು ಅಭಿವೃದ್ಧಿ ಮಾಡಿದ್ದಾರೆ. ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದಾರೆ. ನೆನಗುದಿಗೆ ಬಿದ್ದಿದ್ದ ಡಾ. ರಾಜಕುಮಾರ್ ರಂಗಮಂದಿರವನ್ನು ಕೇವಲ ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಿ, ಕಲಾವಿದರಿಗೆ ಸಮರ್ಪಣೆ ಮಾಡಿರುವುದು ಅವರ ಕಾರ್ಯದಕ್ಷತೆಗೆ ಕಾರಣವಾಗಿದೆ. ಇಂಥ ಹತ್ತು ಹಲವಾರು ಕಾರ್ಯಗಳನ್ನು ಮಾಡಿರುವ ವಿ. ಸೋಮಣ್ಣ ನಮ್ಮ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ. ರಾಜ್ಯ ಮಟ್ಟದ ಗಮನಸೆಳೆದಿರುವ ನಮ್ಮ ಕ್ಷೇತ್ರದಲ್ಲಿ ಬಿಜೆಪಿಯನ್ನು ಹೆಚ್ಚಿನ ಬಹುಮತದಲ್ಲಿ ಗೆಲ್ಲಿಸುವ ಮೂಲಕ ಚಾ.ನಗರ ಮಾದರಿ ಕ್ಷೇತ್ರವನ್ನಾಗಿಸಲು ನಿಮ್ಮ ಪವಿತ್ರವಾದ ಒಂದು ಮತವನ್ನು ನೀಡಿ. ಈಗ 15 ವರ್ಷಗಳ ಕಾಲ ಒಬ್ಬರನ್ನು ನೋಡಿದ್ದೀರಿ. ಈ ಐದು ವರ್ಷ ಬಿಜೆಪಿಗೆ ಮತ ನೀಡಿ, ಅವಕಾಶ ಕೊಡಿ. ಅಭಿವೃದ್ಧಿ ಪರ್ವ ಆರಂಭವಾಗುತ್ತದ ಎಂದು ಮನವಿ ಮಾಡಿದರು.

ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ. ಸೋಮಣ್ಣ ಮಾತನಾಡಿ, ವೇದಿಕೆಯಲ್ಲಿರುವ ಗಣ್ಯರು ಹಾಗೂ ಮುಖಂಡರು ಸೋಮಣ್ಣ ಅವರ ಕಾರ್ಯವೈಖರಿ ಬಗ್ಗೆ ಬಹಳಷ್ಟು ಹೇಳಿದ್ದಾರೆ. ಅವರ ಪತ್ನಿಯಾಗಿ ನಾನು ಬಹಳ ಹತ್ತಿರದಿಂದ ನೋಡಿರುವುದು ಜನಸೇವೆ ಹಾಗೂ ಬಡವರ ಬಗ್ಗೆ ಅವರಿಗೆ ಇರುವ ಅಪಾರವಾದ ಕಾಳಜಿ. ಬಡತನದಿಂದ ಬಂದ ಸೋಮಣ್ಣ ಅವರು, ಕಷ್ಟವನ್ನು ಅನುಭವಿಸಿ ಈ ಮಟ್ಟಕ್ಕೆ ಬಂದಿದ್ದಾರೆ. ಬಿಜೆಪಿ ವರಿಷ್ಠರ ನಿರೀಕ್ಷೆಯಂತೆ ಚಾ.ನಗರ ಹಾಗೂ ವರುಣ ಎರಡು ಕ್ಷೇತ್ರಗಳಲ್ಲಿ ಕಮಲಕ್ಕೆ ಮತ ನೀಡಿ, ಸೋಮಣ್ಣ ಅವರನ್ನು ಗೆಲ್ಲಿಸಿಕೊಡಿ ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣ ಪ್ರಸಾದ್, ಪ್ರಧಾನ ಕಾರ್ಯದರ್ಶಿಗಳಾದ ಮಂಗಲ ಶಿವಕುಮಾರ್, ಕೆರೆಹಳ್ಳಿ ಮಹದೇವಸ್ವಾಮಿ, ಮುಖಂಡರಾದ ಉಡಿಗಾಲ ಕುಮಾರಸ್ವಾಮಿ ರಾಜ್ಯ ಕುರುಬರ ಸಂಘದ ನಿರ್ದೇಶಕ ಬೆಳ್ಳಾವಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ಮಾಜಿ ಅಧ್ಯಕ್ಷ ಸುಂದರಪ್ಪ, ಕಲಾವಿದರಾದ ಶಿವಣ್ಣ ಹಾಗೂ ಕಲಾವಿದರು ಹಾಜರಿದ್ದರು.

ಇಂದಿನಿಂದ ಚಾಮರಾಜನಗರ ಕ್ಷೇತ್ರದಲ್ಲಿ ಆನೆ ಆರ್ಭಟ!

ಈ ಬಾರಿ ಬಿಎಸ್‌ಪಿ ಗೆಲುವು ಖಚಿತ : ಹ.ರಾ.ಮಹೇಶ್



ಚಾಮರಾಜನಗರ, ಏ.26– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಎಸ್ಪಿ ಅಭ್ಯರ್ಥಿ ಹ.ರಾ.ಮಹೇಶ್ ಅವರು ತಮ್ಮ ಪಕ್ಷದ ಚಿಹ್ನೆಯಾದ ಆನೆಯ ಚಿತ್ರದೊಂದಿಗೆ ನಾಳೆ (ಏ.27)ಯಿಂದ ಪ್ರಚಾರ ಆರಂಭಿಸಲಿದ್ದಾರೆ.

ನಗರದ ಹೌಸಿಂಗ್ ಬೋರ್ಡ್‌ನಲ್ಲಿ ಸಿದ್ಧವಾಗಿರುವ ಆನೆ ಚಿತ್ರವನ್ನು ವೀಕ್ಷಿಸಿದ ಬಿಎಸ್‌ಪಿ ಅಭ್ಯರ್ಥಿ ಹ.ರಾ.ಮಹೇಶ್ ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಪರ ಉತ್ತಮ ವಾತಾವರಣವಿದ್ದು, ಈ ಬಾರಿ ಚುನಾವಣೆಯಲ್ಲಿ ಆನೆ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರಾಗಿರುವ ಎಲ್ಲರೂ ಕೂಡ ಕ್ಷೇತ್ರದ ಅಭಿವೃದ್ಧಿ ಕಡೆಗಣಿಸಿದ್ದಾರೆ. ಕಳೆದ 15 ವರ್ಷದಿಂದ ಕಾಂಗ್ರೆಸ್ ಆಡಳಿತದಲ್ಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅಭಿವೃದ್ಧಿ ಮಾಡುವಲ್ಲಿ ವಿಫಲರಾಗಿದ್ದಾರೆ. ಈ ಬಾರಿ ಕ್ಷೇತ್ರದ ಜನತೆ ಬದಲಾವಣೆ ಬಯಸಿ ಆನೆಗೆ ಆಶೀರ್ವಾದ ಮಾಡಲಿದ್ದಾರೆ. ಚಾಮರಾಜನಗರದಿಂದ ವಿಧಾನಸೌಧಕ್ಕೆ ಈ ಬಾರಿ ಆನೆ ಪ್ರವೇಶಿಸುವುದು ಖಚಿತವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ಸಿದ್ಧಗೊಂಡಿರುವ ಆನೆಯ ಚಿತ್ರ ಗುರುವಾರದಿಂದ ಕ್ಷೇತ್ರದತ್ತ ಸಂಚರಿಸಿ ಪ್ರಚಾರ ಜಾತ್ರೆ ಮಾಡಲಿದೆ ಎಂದರು. ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬ.ಮ.ಕೃಷ್ಣಮೂರ್ತಿ ಇತರರು ಹಾಜರಿದ್ದರು.

ಪುಟ್ಟರಂಗಶೆಟ್ಟಿ ಪರ ನಟ ಎಸ್. ನಾರಾಯಣ್ ಮತಯಾಚನೆ



ಚಾಮರಾಜನಗರ, ಏ.26– ತಾಲೂಕಿನ ಚಿಕ್ಕ ಮೋಳೆ ಬ್ಯಾಡ ಮೂಡ್ಲು, ಹಳೇ ಬ್ಯಾಡ್‌ಮೂಡ್ಲು, ಗೌತಮ್ ಕಾಲೋನಿ, ಗ್ರಾಮಗಳಲ್ಲಿ ಚಲನ ಚಿತ್ರ ನಟ ಎಸ್. ನಾರಾಯಣ್ ಅವರು ಮನೆ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟರಂಗಶೆಟ್ಟಿ ಪರ ಮತಯಾಚನೆ ನಡೆಸಿದರು.

ತಮ್ಮ ಅಮೂಲ್ಯವಾದ ಮತವನ್ನು ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರಿಗೆ ನೀಡಿ ಅವರನ್ನು ಜಯಶೀಲರನ್ನಾಗಿ ಮಾಡುವ ಮೂಲಕ ತಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಮನವಿ ಮಾಡಿಕೊಂಡರು.

ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಮಾತನಾಡಿ ತಮ್ಮ ಶಾಸಕತ್ವದ ಅವಧಿಯಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಇಂದು ಮತಯಾಚಿಸುತ್ತಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ ತಂದು ಇಂದು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮಾಡಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಕೆಲಸಗಳನ್ನು ಮಾಡಬೇಕಿದೆ. ಮತದಾರರು ಈ ಬಾರಿಯು ತಮ್ಮನ್ನು ಬೆಂಬಲಿಸಬೇಕೆಂದು ಕೋರಿದರು

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕ ಮಹದೇವ್, ಆರ್. ಮಹದೇವ್, ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಆಲೂರು ಪ್ರದೀಪ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಸದಸ್ಯ ಬ್ಯಾಡ್‌ಮೂಡ್ಲು ನಾಗರಾಜು, ಕೃಷ್ಣಶೆಟ್ಟಿ, ರಾಜಣ್ಣ, ಜಿಪಂ ಮಾಜಿ ಸದಸ್ಯ ರಮೇಶ್, ತಾಪಂ ಮಾಜಿ ಸದಸ್ಯ ಮಹದೇವಶೆಟ್ಟಿ, ಪುಟ್ಟಸ್ವಾಮಿ, ಕಾಗಲವಾಡಿ ಶಿವಸ್ವಾಮಿ, ಮಹೇಶ್, ಕೋಡಿಮೋಳೆ ಗೋವಿಂದಶೆಟ್ಟಿ, ಮಹೇಶ್, ಶೆಂಬಪ್ಪ, ರಮೇಶ್, ಶೇಖರಪ್ಪ ಸೇರಿದಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಬಿಜೆಪಿಯಿಂದ ಸುನೀಲ್, ರಾಚಯ್ಯ ಉಚ್ಚಾಟನೆ



ಸುನೀಲ್



ರಾಚಯ್ಯ

ಚಾಮರಾಜನಗರ, ಏ.26– ಬಿಜೆಪಿ ಪಕ್ಷದಿಂದ ಬಿಜೆಪಿ ಮುಖಂಡರಾದ ಎಂ.ಪಿ. ಸುನೀಲ್ ಹಾಗೂ ಕಿನಕನಹಳ್ಳಿ ರಾಚಯ್ಯ ಅವರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಿ ಬಿಜೆಪಿ ಜಿಲ್ಲಾಧ್ಯಕ್ಷ ಜಿ. ನಾರಾಯಣ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ. ಪಕ್ಷದ ಆದೇಶವನ್ನು ಉಲ್ಲಂಘಿಸಿ ಗುಂಡ್ಲುಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಎಂ.ಪಿ. ಸುನೀಲ್ ಹಾಗೂ ಕೊಳ್ಳೇಗಾಲದಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಕಿನಕನಹಳ್ಳಿ ರಾಚಯ್ಯ ಸ್ಪರ್ಧಿಸಿರುವುದರಿಂದ ಇಬ್ಬರನ್ನು ಪಕ್ಷದಿಂದ 6 ವರ್ಷ ಕಾಲ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಉಚ್ಚಾಟಿಸಲಾಗಿದೆ.

ಇಂದು ಭಗೀರಥ ಜಯಂತಿ

ಚಾಮರಾಜನಗರ, ಏ.26– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಭಗೀರಥ ಜಯಂತಿಯನ್ನು ಏ.27ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಸರಳವಾಗಿ ಹಾಗೂ ಸಾಂಕೇತಿಕವಾಗಿ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಗುವುದು ಎಂದು ಗುರುಲಿಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾನ ಜಾಗೃತಿಗಾಗಿ ಡಿಸಿ, ಜಿಪಂ ಸಿಇಓ, ಸರ್ಕಾರಿ ನೌಕರರಿಂದ ಬೈಕ್ ರ್ಯಾಲಿ

ಚಾಮರಾಜನಗರ, ಏ.26– ಮತದಾನ ಜಾಗೃತಿಗಾಗಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಪಂ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಎಸ್.ಪೂವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ್ ಹಾಗೂ ಸರ್ಕಾರಿ ನೌಕರರು ಇಂದು ನಗರದಲ್ಲಿ ಬೈಕ್ ರ್ಯಾಲಿ ನಡೆಸಿ ವಿಶೇಷ ಗಮನ ಸೆಳೆದರು.

ನಗರದ ಪ್ರವಾಸಿಮಂದಿರದಲ್ಲಿ ಆರಂಭವಾದ ಬೈಕ್ ರ್ಯಾಲಿ ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ, ರಾಮಸಮುದ್ರ ಬಡಾವಣೆ, ಕರಿನಂಜನಪುರ ರಸ್ತೆ, ನ್ಯಾಯಾಲಯ ರಸ್ತೆ, ಬುದ್ದನಗರದ ರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯವಾಯಿತು.

ನಗರದ ಪ್ರವಾಸಿಮಂದಿರದಲ್ಲಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆದ ಎಸ್. ಪೂವಿತಾ ಅವರು ಬೈಕ್ ರ್ಯಾಲಿಗೆ ಚಾಲನೆ ನೀಡಿದರು.

ತಹಶೀಲ್ದಾರ್ ಐ.ಈ. ಬಸವರಾಜು, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ಎಸ್. ಮಹದೇವಯ್ಯ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆರ್.ಸಿ. ಕೆಂಪರಾಜು, ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲೂಕು ಪದಾಧಿಕಾರಿಗಳು ಹಾಜರಿದ್ದರು.



ಒಂದನೇ ಪುಟದಿಂದ

ಪೇ ಇಂಜಿನ್ ಸರ್ಕಾರ!

ಕುರುಹುಗಳು ಮಂಡ್ಯದಲ್ಲಿವೆ ಎಂದರು. ಮಂಡ್ಯದ ಕೆ.ಆರ್.ಪೇಟೆಯ ಕುಂಭಮೇಳದಲ್ಲಿ ನಾನು ಭಾಗಿ ಆಗಬೇಕೆಂಬ ಮಹದಾಸೆ ಹೊಂದಿದ್ದೆ. ಆದರೆ ಉತ್ತರ ಪ್ರದೇಶದಲ್ಲಿ ತೀವ್ರ ಅತಿವೃಷ್ಟಿಯಿಂದ ಬರಲು ಸಾಧ್ಯವಾಗಲಿಲ್ಲ. ಕುಂಭ ಮೇಳ ಯಶಸ್ವಿಗೊಂಡು ಲಕ್ಷಾಂತರ ಜನ ಸೇರಿದ್ದರು ಎಂಬ ಬಗ್ಗೆ ಮಾಹಿತಿ ತರಿಸಿಕೊಂಡೆ. ರಾಜ್ಯದಲ್ಲಿ ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ಕುಂಭಮೇಳ ನಡೆದಿದ್ದು, ಒಂದು ವಿಶೇಷ ಎಂದು ಶ್ಲಾಘಿಸಿದರು.

ಕನ್ನಡದಲ್ಲಿ ಭಾಷಣ ಆರಂಭ: ಕನ್ನಡದಲ್ಲೇ ಭಾಷಣ ಆರಂಭಿಸಿದ ಯೋಗಿ, ಮಂಡ್ಯದ ತಪೋ ಭೂಮಿ ಸಕ್ಕರೆ ನಾಡು ಮಂಡ್ಯ ಜಿಲ್ಲೆಯ ಜನತೆಗೆ ನಮಸ್ಕಾರಗಳು, ಆದಿಚುಂಚನಗಿರಿ ಕಾಲಭೈರವೇಶ್ವರನಿಗೆ ನನ್ನ ನಮಸ್ಕಾರ ಎಂದು ಕನ್ನಡದಲ್ಲಿ ಮಾತು ಆರಂಭಿಸಿದರು. ಬಳಿಕ ನಾಡಗೀತೆಯ ಸಾಲುಗಳನ್ನು ಹಾಡಿದರು.

ಕಾಲಭೈರವನ ಉಡುಗೊರೆ: ನಾಥ ಪರಂಪರೆಗೆ ಸೇರಿದ ಯೋಗಿ ಆದಿತ್ಯನಾಥ್ ಅವರಿಗೆ ಪಂಚ ಲೋಹಗಳಿಂದ ತಯಾರಿಸಿದ್ದ ಕಾಲಭೈರವನ ವಿಶೇಷ ವಿಗ್ರಹವನ್ನು ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಉಡುಗೊರೆಯಾಗಿ ನೀಡಲಾಯಿತು.

ವೇದಿಕೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಂಸದರಾದ ಸುಮಲತಾ ಅಂಬರೀಶ್, ಪ್ರತಾಪ್ ಸಿಂಹ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಪಿ.ಉಮೇಶ್, ಜಿಲ್ಲೆಯ ವಿವಿಧ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳಾದ ಅಶೋಕ್ ಜಯರಾಂ, ಕೆ.ಸಿ.ನಾರಾಯಣಗೌಡ, ಇಂದುವಾಳು ಸಚ್ಚಿದಾನಂದ, ಮುನಿರಾಜು, ಡಾ.ಇಂದ್ರೇಶ್, ಸುಧಾ ಶಿವರಾಮೇಗೌಡ, ಎಸ್.ಪಿ.ಸ್ವಾಮಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನ, ಮಂಡ್ಯ ಜಿಲ್ಲೆಯ ಉಸ್ತುವಾರಿ ಜಗದೀಶ್ ಹಿರೇಮನಿ, ಬಿಜೆಪಿ ಕಾರ್ಯಕಾರಣಿ ಸದಸ್ಯ ಡಾ.ಸಿದ್ದರಾಮಯ್ಯ ಉಪಸ್ಥಿತರಿದ್ದರು.

265 ಕೋಟಿ ರೂ. ಜಪ್ತಿ: ಅನಧಿಕೃತ ರ್‍ಯಾಲಿಗಳ ಸಂಬಂಧ ಈವರೆಗೆ 53 ಎಫ್‌ಐಆರ್ ದಾಖಲಿಸಲಾಗಿದೆ. ಗುಂಪು ಘರ್ಷಣೆ ಸಂಬಂಧ 15 ಎಫ್‌ಐಆರ್ ಹಾಗೂ ದ್ವೇಷ ಭಾಷಣ ಸಂಬಂಧ 5 ಎಫ್‌ಐಆರ್ ಸೇರಿದಂತೆ ಒಟ್ಟು 673 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ನೀತಿ ಸಂಹಿತೆ ಜಾರಿಯಾದ ಬಳಿಕ ಈವರೆಗೆ 265 ಕೋಟಿ ರೂಪಾಯಿ ಹಣ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಮೋದಿ ರೋಡ್ ಶೋ

ಆರಂಭಿಸುವ ಪ್ರಧಾನಿಗಳು, ಸರ್ಕಾರಿ ಸಂಸ್ಕೃತ ಪಾಠಶಾಲೆ, ಸಯ್ಯಾಜಿರಾವ್ ರಸ್ತೆ, ಕೆ.ಆರ್.ಸರ್ಕಲ್, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಹಳೇ ಆರ್‌ಎಂಸಿ ಸರ್ಕಲ್, ಹೈವೇ ಸರ್ಕಲ್ ಮೂಲಕ ಬನ್ನಿಮಂಟಪದ ಎಲ್‌ಐಸಿ ಸರ್ಕಲ್‌ನಲ್ಲಿ ಸಂಜೆ 6.40 ಗಂಟೆಗೆ ರೋಡ್ ಶೋ ಅಂತ್ಯಗೊಳಿಸುವರು.

ಎಲ್‌ಐಸಿ ಸರ್ಕಲ್‌ನಿಂದ ಕಾರಿನಲ್ಲಿ ಮಣಿಪಾಲ್ ಆಸ್ಪತ್ರೆವರೆಗೂ ತೆರಳಿ ರಿಂಗ್ ರಸ್ತೆ ಮೂಲಕ ನಂಜನಗೂಡು ರಸ್ತೆ ಮಾರ್ಗವಾಗಿ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಿ, ಅಲ್ಲಿಂದ ರಾತ್ರಿ 7 ಗಂಟೆಗೆ ವಿಶೇಷ ವಿಮಾನದಲ್ಲಿ ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಧಾನಮಂತ್ರಿಗಳು ರೋಡ್ ಶೋ ನಡೆಸುವ ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗುತ್ತಿದ್ದು, ಭಾರೀ ಭದ್ರತಾ ವ್ಯವಸ್ಥೆ ಮಾಡಲಾಗುತ್ತಿದೆ. ರೋಡ್ ಶೋ ನಡೆಸುವ ಸಮಯದಲ್ಲಿ ರಾಜಮಾರ್ಗದುದ್ದಕ್ಕೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಪ್ರಧಾನಮಂತ್ರಿಗಳ ವಾಹನ ಸರಾಗವಾಗಿ ಸಾಗಲು ಸಾರ್ವಜನಿಕರ ವಾಹನ ಸಂಚಾರ ಬಂದ್ ಮಾಡಿ, ಬದಲಿ ಮಾರ್ಗದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಅದೇ ರೀತಿ ಓವಲ್ ಮೈದಾನ, ಚಾಮರಾಜ ಜೋಡಿ ರಸ್ತೆ, ರಿಂಗ್ ರಸ್ತೆ, ನಂಜನಗೂಡು ರಸ್ತೆ ಹಾಗೂ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲೂ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಭಾರೀ ಕಟ್ಟೆಚ್ಚರ ವಹಿಸಲಾಗುತ್ತಿದೆ. ನರೇಂದ್ರ ಮೋದಿ ಅವರ ಆಗಮನದ ಹಿನ್ನೆಲೆಯಲ್ಲಿ ಈಗಾಗಲೇ ಎಸ್‌ಪಿಜಿ ಹಿರಿಯ ಅಧಿಕಾರಿಗಳು ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದು, ಮುಂಜಾಗ್ರತಾ ಕ್ರಮ, ಭದ್ರತಾ ವ್ಯವಸ್ಥೆ ಪರಿಶೀಲನೆ ಮಾಡುತ್ತಿದ್ದಾರೆ.

5,30,85,566 ಮಂದಿಗೆ ಮತದಾನ ಹಕ್ಕು

ಚಲಾವಣೆಗೆ ಅವಕಾಶ ಪಡೆದುಕೊಂಡಿದ್ದಾರೆ. 80 ವರ್ಷಕ್ಕಿಂತ ಮೇಲ್ಪಟ್ಟ 1,21,592 ಹಿರಿಯ ಮತದಾರರು ಮತದಾನದ ಹಕ್ಕು ಪಡೆದಿದ್ದಾರೆ. ಪ್ರಸ್ತುತ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾರರ ಭಾವಚಿತ್ರಪಟ್ಟಿಯನ್ನು ಬಳಸಲಾಗುವುದು ಮತ್ತು ಆ ಪಟ್ಟಿಯ ಕಾರ್ಯವು ಶೇಕಡ 100 ರಷ್ಟು ಪೂರ್ಣಗೊಂಡಿದೆ ಎಂದರು.

ಮತಗಟ್ಟೆಯಲ್ಲಿ ಮತದಾನದ ವೇಳೆ ಮತದಾರರನ್ನು ಗುರುತಿಸುವುದು ಕಡ್ಡಾಯ. ಇಪಿಕ್ ಚೀಟಿ ಒದಗಿಸಿದ ಮತದಾರರು ಅದರ ಮೂಲಕ ಗುರುತಿಸಲಾಗುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ಇದರ ಕಾರ್ಯ ಶೇಕಡ 100 ರಷ್ಟು ಮುಗಿದಿದೆ. ನಿರ್ದಿಷ್ಟ ಮತಗಟ್ಟೆಯಲ್ಲಿ ಮತದಾರರಾಗಿ ದಾಖಲಾಗಿದ್ದರೆ ಮತ್ತು ಮತದಾರರ ಪಟ್ಟಿಯಲ್ಲಿ ಅವರ ಸಂಖ್ಯೆ ಯಾವುದು ಎಂದು ತಿಳಿಯಲು ಅವಕಾಶ ಮಾಡಿಕೊಡಲಾಗಿದೆ.

ಮತದಾರರ ಚೀಟಿಯನ್ನು ಮತದಾನದ ದಿನಾಂಕ ಕನಿಷ್ಠ ಹತ್ತು ದಿನಗಳ ಮುಂಚಿತವಾಗಿ ಎಲ್ಲಾ ಅರ್ಹ ಮತದಾರರಿಗೆ ಜಿಲ್ಲಾ ಚುನಾವಣಾಧಿಕಾರಿಯಿಂದ ವಿತರಿಸಲಾಗುವುದು ಮತ್ತು ವಿತರಣಾ ಪ್ರಕ್ರಿಯೆ ಅತ್ಯಂತ ನಿಕಟ ಮತ್ತು ಕಠಿಣ ಮೇಲ್ವಿಚಾರಣೆಯನ್ನು ಸಂಬಂಧಿಸಿದ ಡಿಇಒ ಮತ್ತು ಸಾಮಾನ್ಯ ವೀಕ್ಷಕರು ಮಾಡುತ್ತಾರೆ.

ಈ ಬಾರಿ 263 ಅಧಿಕ ಮತಗಟ್ಟೆ: ಮತದಾರರ ಅನುಕೂಲಕ್ಕಾಗಿ ಈ ಬಾರಿ 58,545 ಮತಗಟ್ಟೆಗಳನ್ನು ನಿರ್ಮಿಸಲಾಗುತ್ತಿದೆ. ಕಳೆದ ಬಾರಿಗಿಂತ ಈ ಬಾರಿ 263 ಮತಕೇಂದ್ರಗಳು ಹೆಚ್ಚಾಗಿವೆ. ಮತಗಟ್ಟೆಯಲ್ಲಿ ಮತದಾನ ಮಾಡುವವರಿಗೆ ಎಲ್ಲಾ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಅಗತ್ಯ ಸೂಚನಾ ಫಲಕಗಳನ್ನು ಅವರ ಅನುಕೂಲಕ್ಕೆ ಲಗತ್ತಿಸಲಾಗುವುದಾಗಿ ಹೇಳಿದರು.

ಮತಗಟ್ಟೆಗಳಲ್ಲಿ ಹೆಚ್ಚು ಸರದಿ ಇದ್ದರೆ ಅಂತಹ ಕಡೆ ಟೋಕನ್‌ಗಳನ್ನು ಪಡೆದು, ನಂತರ ನಿಗದಿತ ಸಮಯದೊಳಗೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ.

673 ಉಲ್ಲಂಘನೆ ಪ್ರಕರಣ: ಇದುವರೆಗೂ 673 ಮಂದಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದು, ಅವರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಇಲ್ಲಿಯವರೆಗೂ ಲೆಕ್ಕ ಕೊಡದೆ ಸಾಗಣೆ ಮಾಡುತ್ತಿದ್ದ 88 ಕೋಟಿ ರೂ.ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಜೊತೆಗೆ 20.62 ಕೋಟಿ ರೂ. ವೆಚ್ಚದ ಉಚಿತ ಕೊಡುಗೆಗಳನ್ನು ವಶಕ್ಕೆ ಪಡೆದಿದ್ದೇವೆ.

ದೋಸೆ ಮಾಡಿ, ಸವಿದ ಪ್ರಿಯಾಂಕ

ಸಿದ್ಧಪಡಿಸುವ ಬಗ್ಗೆಯೂ ಕುತೂಹಲದಿಂದ ಕೇಳಿ ತಿಳಿದುಕೊಂಡ ಅವರು, ನನ್ನ ಮಗಳೂ ಸಹ ಶಾಲೆಯಲ್ಲಿ ಅಡುಗೆ ಮಾಡುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಾಳೆ. ಅವಳಿಗೆ ನಾನಾ ತಿಂಡಿ–ತಿನಿಸು ಮಾಡುವುದೆಂದರೆ ತುಂಬಾ ಇಷ್ಟ. ಇನ್ನೊಮ್ಮೆ ನಾನು ಮೈಸೂರಿಗೆ ಬಂದಾಗ ತಪ್ಪದೇ ಮಗಳನ್ನು ಕರೆತರುತ್ತೇನೆ ಎಂದು ತಿಳಿಸಿದರು.

ನಂತರ ಡಿ.ಕೆ. ಶಿವಕುಮಾರ್, ಸುರ್ಜೇವಾಲ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್‌ರೊಂದಿಗೆ ಪ್ರಿಯಾಂಕ ಗಾಂಧಿ ಇಡ್ಲಿ–ದೋಸೆ, ಚಹಾ ಸವಿದರು. ಈ ವೇಳೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ತಿಂಡಿ ತುಂಬಾ ಚೆನ್ನಾಗಿತ್ತು. ಚಟ್ನಿ, ಸಾಗು ಕೂಡ ಬೊಂಬಾಟಾಗಿತ್ತು. ಇಡ್ಲಿ–ದೋಸೆ ತಯಾರಿಸುವ ವಿಧಾನವನ್ನು ನಾನೂ ತಿಳಿದುಕೊಂಡಿದ್ದೇನೆ. ನಮ್ಮ ಮನೆಯಲ್ಲಿ ಪ್ರಯೋಗ ಮಾಡುತ್ತೇನೆ ಎಂದರು.

ಹೋಟೆಲಿನ ಸಿಬ್ಬಂದಿ, ಗ್ರಾಹಕರೊಂದಿಗೆ ಬೆರೆತು ಸುಮಾರು ಒಂದು ಗಂಟೆ ಕಾಲ ಕಳೆದ ಪ್ರಿಯಾಂಕ, ಮಾಲೀಕರೊಂದಿಗೂ ವಿಶ್ವಾಸದಿಂದ ಮಾತನಾಡಿ ನೆರೆದವರಲ್ಲಿ ಅಚ್ಚರಿ ಮೂಡಿಸಿದರಲ್ಲದೇ, ಮತ್ತೊಮ್ಮೆ ಬಂದಾಗ ಇಲ್ಲೇ ತಿಂಡಿ ತಿನ್ನುತ್ತೇನೆ ಎಂದು ಹೇಳಿ ಶುಭ ಕೋರಿ, ಅಲ್ಲಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿದರು. ಬಳಿಕ ಹೆಲಿಕಾಪ್ಟರ್‌ನಲ್ಲಿ ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿಗೆ ಪ್ರಯಾಣಿಸಿದರು.

ಇಂದು ಬೆಳಗ್ಗೆ ದಿಢೀರ್ ಮೈಲಾರಿ ಹೋಟೆಲಿಗೆ ಹೋಗುವ ಇಂಗಿತ ವ್ಯಕ್ತಪಡಿಸಿದ ಪ್ರಿಯಾಂಕ ಅವರ ಈ ನಡೆಯಿಂದ ತಬ್ಬಿಬ್ಬಾದ ಪೊಲೀಸರು, ನಜರ್‌ಬಾದ್ ಮುಖ್ಯ ರಸ್ತೆ ಹಾಗೂ ಅಗ್ರಹಾರ ಬಳಿಯ ಎರಡೂ ಹೋಟೆಲ್ ಬಳಿ ದೌಡಾಯಿ ಸಿದರು. ಅದೇ ರೀತಿ ಕಾಂಗ್ರೆಸ್ ಸ್ಥಳೀಯ ಮುಖಂಡರು, ಮಾಧ್ಯಮ ಪ್ರತಿನಿಧಿಗಳೂ ಹೋಟೆಲ್ ಬಳಿ ನೆರೆದಿದ್ದರು. Z+ ಭದ್ರತೆ ಇದ್ದರೂ, ಕಾರ್ಯಕ್ರಮ ಪೂರ್ವ ನಿಗದಿಯಾಗದಿದ್ದರೂ ಹೋಟೆಲ್‌ಗೆ ದಿಢೀರ್ ಭೇಟಿ ನೀಡಿದ್ದರಿಂದ ಶಸ್ತ್ರಸಜ್ಜಿತ ಅವರ ಬೆಂಗಾವಲು ಪಡೆ ಸಿಬ್ಬಂದಿಗೂ ಅಚ್ಚರಿ ಕಾದಿತ್ತು. ಈ ಹಿಂದೆ ಗೃಹ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವರು ಮೈಸೂರಿಗೆ ಭೇಟಿ ನೀಡಿದ್ದಾಗ ನಮ್ಮ ಹೋಟೆಲಿನಲ್ಲಿ ತಿಂಡಿ ತಿಂದು ಹೋಗಿದ್ದರು. ನಂತರ ಕೇವಲ 15 ದಿನಗಳಲ್ಲಿ ಮುಖ್ಯಮಂತ್ರಿಯಾದರು ಎಂದು ಹೋಟೆಲ್ ಮಾಲೀಕ ಲೋಕೇಶ್ ಮತ್ತು ಪತ್ನಿ ಶೃತಿ ಸುದ್ದಿಗಾರರಿಗೆ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಕಂದಾಯ ಸಚಿವ ಆರ್. ಅಶೋಕ್ ಸೇರಿದಂತೆ ಹಲವು ರಾಜಕೀಯ ನಾಯಕರು ಹಾಗೂ ಗಣ್ಯ ವ್ಯಕ್ತಿಗಳು ಮೈಲಾರಿ ಹೋಟೆಲ್‌ಗೆ ಆಗಾಗ ಭೇಟಿ ನೀಡಿ ತಿಂಡಿ ತಿನ್ನುತ್ತಿದ್ದರು.

ಅತ್ತಿಗೆ, ಆಕೆಯ ಮಗನ ಹತ್ಯೆಗೈದ ಮೈದುನ

ಇಬ್ಬರ ಜಮೀನಿಗೂ ಒಂದೇ ಪಂಪ್‌ಸೆಟ್‌ನಿಂದ ನೀರು ಹಾಯಿಸಬೇಕಾಗಿತ್ತು. ಈ ವಿಚಾರವಾಗಿ ಸತೀಶ ಮತ್ತು ಶಂಕರೇಗೌಡ ಕುಟುಂಬದ ನಡುವೆ ಆಗಿಂದಾಗ್ಗೆ ಗಲಾಟೆಗಳು ನಡೆಯುತ್ತಿದ್ದವು ಎಂದು ಹೇಳಲಾಗಿದ್ದು, ಇಂದು ಬೆಳಗ್ಗೆ ಶಂಕರೇಗೌಡರ ಪತ್ನಿ ಶಾಂತಮ್ಮ ಪಂಪ್‌ಸೆಟ್ ಮನೆಗೆ ತೆರಳಿ ಸ್ವಿಚ್ ಆನ್ ಮಾಡಿದ ನಂತರ ತನ್ನ ಜಮೀನಿಗೆ ನೀರು ಹಾಯಿಸುತ್ತಿದ್ದಾಗ ಅಲ್ಲಿಗೆ ಬಂದ ಸತೀಶ ಆಕ್ಷೇಪ ವ್ಯಕ್ತಪಡಿಸಿದ್ದಾನೆ. ಅತ್ತಿಗೆ ಮತ್ತು ಮೈದುನನ ನಡುವೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದಾಗ ಸತೀಶ ತನ್ನ ಅತ್ತಿಗೆ ಶಾಂತಮ್ಮಳ ಮೇಲೆ ಕುಡುಗೋಲಿನಿಂದ ಯದ್ವಾತದ್ವಾ ಹಲ್ಲೆ ನಡೆಸಿದ್ದಾನೆ. ಈ ವೇಳೆ ತಾಯಿಯನ್ನು ಬಿಡಿಸಲು ಬಂದ ಶಾಂತಮ್ಮಳ ಪುತ್ರ ಯಶ್ವಂತ್ ಮೇಲೂ ಕೂಡ ಸತೀಶ ಹಲ್ಲೆ ನಡೆಸಿದ್ದು, ಇಬ್ಬರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ನಂತರ ಸತೀಶ ಕುಡುಗೋಲಿನೊಂದಿಗೆ ಮೇಲುಕೋಟೆ ಠಾಣೆಗೆ ತೆರಳಿ ಶರಣಾಗಿದ್ದಾನೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಪ್ರತಿಷ್ಠೆ ಪ್ರಶ್ನೆ!; ಕನ್ನಡ ಮಾತನಾಡುವವರ ಸಂಖ್ಯೆ ಕಡಿತ

●ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ವಿಷಾದ ●ರಾಜ್ಯದಲ್ಲಿ ಶೇ.64ರಷ್ಟು ಮಾತ್ರ ಕನ್ನಡ ಮಾತನಾಡ್ತಾರೆ; ಅದೇ ತಮಿಳ್ನಾಡಿನಲ್ಲಿ ಶೇ.92, ಕೇರಳದಲ್ಲಿ ಶೇ.97ರಷ್ಟು ಮಂದಿ ಮಾತೃಭಾಷೆ ಮಾತನಾಡುತ್ತಾರೆ



ಮೈಸೂರು, ಏ.26(ಜಿಎ)–ಎಲ್ಲಿ ತಮ್ಮ ಪ್ರತಿಷ್ಠೆ ಕಡಿಮೆ ಆಗುತ್ತದೋ ಎಂಬ ಕಾರಣಕ್ಕೆ ಅನೇಕರು ಕನ್ನಡದಲ್ಲಿ ಮಾತನಾಡುವುದನ್ನೇ ಕಡಿಮೆ ಮಾಡಿದ್ದು, ಇದರ ಪರಿಣಾಮ ಕರ್ನಾಟಕದಲ್ಲಿ ಶೇ.64 ರಷ್ಟು ಮಂದಿ ಮಾತ್ರವೇ ಕನ್ನಡದಲ್ಲಿ ಮಾತನಾಡುತ್ತಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಬೇಸರ ವ್ಯಕ್ತಪಡಿಸಿದರು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ ಆವರಣದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಹಾಗೂ ಮೈಸೂರು ಭಾರತೀಯ ಭಾಷಾ ಸಂಸ್ಥಾನದ ವತಿಯಿಂದ ಆಯೋಜಿಸಿರುವ ಶಾಸ್ತ್ರೀಯ 'ಕನ್ನಡ: ಸಾಂಸ್ಕೃತಿಕ ಪರಿಶೋಧನೆ' ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಶಾಸ್ತ್ರೀಯ ಸ್ಥಾನಮಾನ ಪಡೆದ 6 ಭಾಷೆಗಳ ಪೈಕಿ ದಕ್ಷಿಣ ಭಾರತದ ನಾಲ್ಕು ಭಾಷೆಗಳಿವೆ ಎಂಬುದು ನಮ್ಮ ಹೆಮ್ಮೆ. ಕೆಲವು ಅಧ್ಯಯನದ ಪ್ರಕಾರ ಕೇರಳದಲ್ಲಿ ಮಾತೃಭಾಷೆ ಮಾತನಾಡುವವರ ಸಂಖ್ಯೆ ಶೇ.97 ರಷ್ಟಿದೆ. ಭಾಷಾ ವಿಚಾರದಲ್ಲಿ ರಾಜಕೀಯ ಮಾಡದೇ ಒಗ್ಗೂಡುವ ತಮಿಳುನಾಡಿನಲ್ಲಿ ಶೇ.92 ರಷ್ಟು ಮಂದಿ ತಮಿಳನ್ನೇ ಮಾತನಾಡುತ್ತಾರೆ. ಆದರೆ ಕನ್ನಡಿಗರ ಮನೋಭಾವನೆ ಬೇಸರದ ವಿಚಾರ. ಇತರೆ ಭಾಷೆಗಳಿಗೆ ಹೋಲಿಸಿದರೆ ಶಾಸ್ತ್ರೀಯ ಸ್ಥಾನಮಾನ ಪಡೆಯಲು ಬೇಕಾದ ಎಲ್ಲಾ ಮಾನದಂಡಗಳನ್ನು ಹೊಂದಿದ ಪರಿಪೂರ್ಣ ಭಾಷೆ ಕನ್ನಡ. ಅದನ್ನು ಮಾತನಾಡಲು ನಮಗೆ ಪ್ರತಿಷ್ಠೆ ಅಡ್ಡಿಯಾಗಬಾರದು ಎಂದು ತಿಳಿಸಿದರು.

10 ಸಾವಿರಕ್ಕಿಂತ ಕಡಿಮೆ ಜನ ಮಾತನಾಡುವ 2500 ಭಾಷೆಯನ್ನು ಅವನತಿಯ ಅಂಚಿನಲ್ಲಿರುವ ಭಾಷೆಯೆಂದು ಗುರುತಿಸಿದ್ದು, ಅದರಲ್ಲಿ 196 ಭಾಷೆಗಳು ಭಾರತದ್ದಾಗಿವೆ. 1961ರ ನಂತರ ದೇಶವು 220 ಭಾಷೆಗಳನ್ನು ಕಳೆದುಕೊಂಡಿದ್ದು, ಮುಂಬರುವ ದಿನಗಳಲ್ಲಿ 150 ಭಾಷೆಗಳು ಮರೆಯಾಗುವ ಹಾದಿಯಲ್ಲಿವೆ ಎಂದು ಜಿ.ಎನ್.ದೇವಿ ಅವರು ತಿಳಿಸಿರುವುದು ನಮಗೆ ಎಚ್ಚರಿಕೆಯ ಗಂಟೆಯಾಗಿದೆ ಎಂದರು.

ಭಾಷೆಯು ಕೇವಲ ಸಂವಹನ ಮಾಧ್ಯಮವಲ್ಲ. ಭಾಷೆಯನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಭಾಷೆ ಬದುಕಬೇಕು ಎಂದರೆ, ಅದನ್ನು ನಾವು ಬಳಸಬೇಕಿದೆ ಅದು ಸಮುದಾಯದ ಜೀವಂತಿಕೆಯ ದ್ಯೋತಕ. ಅದು ಅಳಿವಿನ ಅಂಚಿಗೆ ತಲುಪಿದರೆ ಸಮಾಜದ ಸಂಸ್ಕೃತಿ ನಶಿಸುತ್ತದೆ. ಜೀವನದ ವೈವಿಧ್ಯತೆಯನ್ನು ಉಳಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತೇವೆ. ಆದರೆ, ಭಾಷೆ ವೈವಿಧ್ಯತೆಗೆ ಏನೂ ಮಾಡುತ್ತಿಲ್ಲ. ಅದರ ಮೇಲೂ ಆಸಕ್ತಿ ಮತ್ತು ಕಾಳಜಿ ಇರಲಿ ಎಂದು ಸಲಹೆ ನೀಡಿದರು. ನಂತರ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ವಿದ್ವಾಂಸರಾದ ಪ್ರೊ.ಹಂ.ಪ. ನಾಗರಾಜಯ್ಯ ಮಾತನಾಡಿ, ವ್ಯಾಕರಣದ ಬದಲಿಗೆ ಸಿಡಿ ಮತ್ತು ಕೋಡ್‌ಗಳ ಬಳಕೆ ಅಪಾಯಕಾರಿ. ಇದರಿಂದ ನಮ್ಮ ವ್ಯಾಕರಣ ಸಂಪತ್ತನ್ನು ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ರೀತಿಯ ಸಂಸ್ಥೆಗಳು ಅವುಗಳ ಸಾಧಕ–ಬಾಧಕಗಳ ಬಗ್ಗೆ ಪರಾಮರ್ಶೆ ಮಾಡಬೇಕಿದೆ ಎಂದು ತಿಳಿಸಿದರು.

ಹಳೆಗನ್ನಡ ಕಾವ್ಯಗಳ ಕಲಿಕೆ ಕಷ್ಟಕರ ಎಂದು ವ್ಯಾಕರಣ, ಛಂದಸ್ಸು ಬಿಟ್ಟು ಸುಲಭವಾಗಿ ಹಣ ಮಾಡುವ ದಾರಿಯನ್ನು ಕಂಡುಕೊಳ್ಳಿ ಎಂದು ಹೇಳುತ್ತಿರುವುದರಿಂದ ಯುವ ಶಕ್ತಿ ಅದಕ್ಕೆ ಮಾರು ಹೋಗುತ್ತಿದೆ. ಆದರೆ ಹೊಸ ಬದಲಾವಣೆಗಳು ಎಷ್ಟೇ ಬಂದರೂ ನಾವು ನಮ್ಮ ಮೂಲವನ್ನು ಮರೆಯಬಾರದು. ವರ್ತಮಾನದ ಜೊತೆಗೆ ಪ್ರಾಚೀನತೆ ಸಮ್ಮಿಳಿತವಾದಾಗ ಕಾವ್ಯದ ಮೌಲ್ಯ ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಉಪನಿರ್ದೇಶಕ ಪ್ರೊ.ಸಿ.ವಿ.ಶಿವರಾಮಕೃಷ್ಣ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್ ಹಾಗೂ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉಪಸ್ಥಿತರಿದ್ದರು.

ಬಸವಣ್ಣ ಜಗತ್ತಿಗೆ ದೇಹಾಲಯ ಸಂಸ್ಕೃತಿ ಪರಿಚಯಿಸಿದರು

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ



ಮೈಸೂರು, ಏ. 26– ಬಸವಣ್ಣನವರು ದೇವಾಲಯ ಸಂಸ್ಕೃತಿ ಬದಲಿಗೆ ದೇಹಾಲಯ ಸಂಸ್ಕೃತಿ ಪರಿಚಯಿಸಿದರು ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ಏರ್ಪಡಿಸಿದ್ದ ಬಸವೇಶ್ವರರ 890ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಬಸವಣ್ಣನವರು ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯ ಎಂಬ ವಚನ ಅರ್ಥೈಸಿಕೊಂಡು ಭಗವಂತನ ಸೃಷ್ಟಿಯ ಈ ದೇಹದ ವಿವಿಧ ಅಂಗಗಳನ್ನು ಸತ್ಕಾರ್ಯಕ್ಕೆ ಬಳಸಿದರೆ ದೇಹವೇ ದೇವಾಲಯವಾಗಿ ನಾವು ನಡೆದಾಡುವ ಲೋಕವೇ ಸ್ವರ್ಗವಾಗುತ್ತದೆ.

ಕನ್ನಡ ನಾಡಿನ ಜನರನ್ನು ರಾಜಸತ್ತೆ, ಮತಸತ್ತೆ ಮತ್ತು ಪುರುಷಸತ್ತೆಗಳು ನಿಯಂತ್ರಿಸುತ್ತಿದ್ದ ಕಾಲಘಟ್ಟದಲ್ಲಿ ಸಾಮಾಜಿಕ ಸಮತೋಲನವನ್ನು ಉಂಟು ಮಾಡಲು ಬಸವಣ್ಣನವರು ಅನ್ಯಾಯದ ಗರ್ಭ ಸೀಳಿಕೊಂಡು ಜನಿಸಿ ಶರಣ ಸಮುದಾಯದ ಸಂಘಟನೆ, ಅನುಭವ ಮಂಟಪ ಸ್ಥಾಪನೆ, ವಚನ ಸೃಷ್ಟಿ ಮತ್ತು ಕಲ್ಯಾಣ ರಾಜ್ಯ ಸ್ಥಾಪನೆ ಮಾಡುವುದರ ಮೂಲಕ 890 ವರ್ಷಗಳಾದರೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ. ಕೆ.ಎಚ್. ಪ್ರಸಾದ್ ಮಾತನಾಡಿ, ಬಸವಣ್ಣನವರ ತತ್ವಗಳು ನಿಜವಾಗಿ ಪಾಲನೆಯಾಗುತ್ತಿರುವುದು ಆಸ್ಪತ್ರೆಗಳಲ್ಲಿ. ಬಡವ, ಬಲ್ಲಿದ, ಮೇಲು, ಕೀಳು ಎಂಬ ಯಾವುದೇ ಭೇದವಿಲ್ಲದೇ ಪ್ರತಿಯೊಬ್ಬರನ್ನು ಸಮಾನತೆಯಿಂದ ಉಪಚರಿಸಿ ನೊಂದವರಿಗೆ ಆತ್ಮಸ್ಥೈರ್ಯ ತುಂಬಲಾಗುತ್ತಿದೆ. ಬಸವಣ್ಣನವರ ವಚನಗಳು ಮಾನವರಲ್ಲಿ ಮಾನವೀಯತೆಯ ತತ್ವವನ್ನು ಅಂಕುರಗೊಳಿಸಿ ವಿಶ್ವಮಾನವರಾಗಲು ಪ್ರೇರಣೆ ನೀಡುತ್ತವೆ ಎಂದರು. ಕಾರ್ಯಕ್ರಮದಲ್ಲಿ ಡಾ. ಮಹದೇವ ಪ್ರಸಾದ್, ಡಾ. ಮಂಜುಪ್ರಸಾದ್, ಡಾ. ಜಯಂತ್, ಡಾ. ಪುಟ್ಟತಾಯಮ್ಮ, ಡಾ. ಸಿರಾಜ್ ಅಹ್ಮದ್, ಡಾ. ರವಿ, ಡಾ. ರಾಜೇಶ್ವರಿ, ಜಯಪ್ರಕಾಶ್, ಎಸ್.ಪಿ. ರಾಜೇಂದ್ರಪ್ಪ, ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಇಂದಿನಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಎಸ್‌ಪಿ ಅಭ್ಯರ್ಥಿ ಪ್ರಚಾರ



ಮೈಸೂರು,ಏ.26 (ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗುರುವಾರದಿಂದ ಪ್ರಚಾರ ಆರಂಭಿಸುವುದಾಗಿ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಜಯಶಂಕರ ಶ್ಯಾಮ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುವಾರ ಬೆಳಗ್ಗೆ ಇಲವಾಲ ಹೋಬಳಿಯ ಬೊಮ್ಮೇನಹಳ್ಳಿ ಗ್ರಾಮದಿಂದ ಪ್ರಚಾರ ಆರಂಭಿಸಿ ಕ್ಷೇತ್ರದ ಮತದಾರರಲ್ಲಿ ಮತ ಯಾಚಿಸಲಿದ್ದೇನೆ. ಇತರ ಪಕ್ಷಗಳ ಅಭ್ಯರ್ಥಿಗಳಿಗೆ ಚುನಾವಣೆ ವೇಳೆ ಮಾತ್ರ ಜನ ನೆನಪಾಗುತ್ತಾರೆ. ಕಳೆದ 20 ವರ್ಷಗಳಿಂದ ಪಕ್ಷದ ಕಾರ್ಯಕರ್ತನಾಗಿ ಜನತೆ ನಡುವೆ ಇದ್ದು, ಹಲವು ಜನಪರ ಹೋರಾಟಗಳಲ್ಲಿ ಭಾಗವಹಿಸಿದ್ದೇನೆ ಎಂದರು.

ಕ್ಷೇತ್ರದ ಜನತೆ ಈ ಬಾರಿ ಬದಲಾವಣೆ ಬಯಸಿ ಗೆಲುವು ತಂದುಕೊಟ್ಟರೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಕ್ಷೇತ್ರದ ಬಿಎಸ್‌ಪಿ ಮುಖಂಡರಾದ ಸಿದ್ದಪ್ಪ ಮಂಜುನಾಥ್, ಅಶೋಕ್, ರಾಜೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಡಿಜಿಟಲ್ ಫೈನಾನ್ಸಿಯಲ್ ಲಿಟರಸಿ ಕುರಿತು ಏ.29ರಂದು ರಾಷ್ಟ್ರ ಮಟ್ಟದ ಸಮ್ಮೇಳನ

ಮೈಸೂರು, ಏ. 26– ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ವಿದ್ಯಾವರ್ಧಕ ಸಂಶೋಧನಾ ಪ್ರತಿಷ್ಠಾನ ಮತ್ತು I.Q.A.C ಸಹಯೋಗದೊಂದಿಗೆ ``Digital Financial Literacy and its Relevance for Social Economic Development'' ವಿಷಯದ ಕುರಿತು ರಾಷ್ಟ್ರ ಮಟ್ಟದ ಒಂದು ದಿನದ ಸಮ್ಮೇಳನವನ್ನು ಏ. 29 ರಂದು ಆಯೋಜಿಸಲಾಗಿದೆ. ಆಧುನಿಕ ಜಗತ್ತಿನಲ್ಲಿ ಲಭ್ಯವಿರುವ ವಿವಿಧ ಡಿಜಿಟಲ್ ಹಣಕಾಸು ಉತ್ಪನ್ನಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಜನರಲ್ಲಿ ಸ್ವತಂತ್ರವಾಗಿ ಆರ್ಥಿಕ ಸ್ಥಿರತೆಯ ನಿರ್ಧಾರದ ಸಾಮರ್ಥ್ಯವನ್ನು ಬಲಪಡಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ.

ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಉದ್ಘಾಟಿಸಲಿದ್ದಾರೆ. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣನವರ್, ಟಿ.ನಾಗರಾಜು ಹಾಗೂ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಉಪಸ್ಥಿತರಿರುತ್ತಾರೆ. ಸಮ್ಮೇಳನಕ್ಕೆ ವಿವಿಧ ರಾಜ್ಯಗಳಿಂದ ಸಂಶೋಧನಾ ಅಭ್ಯರ್ಥಿಗಳು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಆಗಮಿಸಲಿದ್ದಾರೆ.

ಡಾ॥ಎಂ.ಸುಮತಿ, ಪ್ರಾಧ್ಯಾಪಕರು, ಕೊಯಮತ್ತೂರು ಭಾರತಿಯಾರ್ ವಿಶ್ವವಿದ್ಯಾನಿಲಯ ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಸುಮತಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ``Financial Technology-Need of the Hour'' ಎಂಬ ವಿಷಯದ ಬಗ್ಗೆ ಸಮ್ಮೇಳನದ ಮೊದಲನೇ ತಾಂತ್ರಿಕ ಅಧಿವೇಶನವು ಜರುಗಲಿದ್ದು, ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಬಿ. ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದು, ತಲಕಾಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಎಸ್.ಅಶ್ವಿನಿ ಭಾಗವಹಿಸುವರು.

``Impact of Digital Financial Literacy on Socio-Economic Development'' ವಿಷಯದ ಸಮ್ಮೇಳನದ ಎರಡನೇ ತಾಂತ್ರಿಕ ಅಧಿವೇಶನವು ಜರುಗಲಿದ್ದು, ಅಧಿವೇಶನದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾರತೀಯ ಜೀವ ವಿಮಾ ನಿಗಮ, ಮೈಸೂರು ವಿಭಾಗದ ಮಾರಾಟ ವ್ಯವಸ್ಥಾಪಕ ಕೆ. ಶ್ರೀಕಾಂತ್ ಭಾಗವಹಿಸುವರು. ಅಧಿವೇಶನದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯ, ನಿರ್ವಹಣಾ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಸ್.ಜೆ.ಮಂಜುನಾಥ್ ವಹಿಸುವರು. ಬೆಂಗಳೂರಿನ ರೇವಾ ವಿಶ್ವವಿದ್ಯಾನಿಲಯದ ರೇವಾ ಬ್ಯುಸಿನೆಸ್ ಸ್ಕೂಲ್‌ನ ಸಹಪ್ರಾಧ್ಯಾಪಕರಾದ ಡಾ.ಎಂ.ಆರ್. ರಾಜೇಶ್ವರಿ ಭಾಗವಹಿಸುವರು. ಮಧ್ಯಾಹ್ನದ ಅಧಿವೇಶನದಲ್ಲಿ ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳಿಂದ ಸಂಶೋಧನಾ ಲೇಖನಗಳ ಮಂಡನೆ ಇರುತ್ತದೆ. ಈ ಅಧಿವೇಶನದ ಅಧ್ಯಕ್ಷತೆಯನ್ನು ವಿದ್ಯಾವಿಕಾಸ್ ಕಾಲೇಜಿನ ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ವಾಸಂತಿ ರೀನಾ ವಿಲಿಯಮ್ಸ್ ವಹಿಸುವರು. ಕಾಲೇಜಿನ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಪೂರ್ಣಿಮಾ ಭಾಗವಹಿಸುವರು.

ಎನ್‌ಆರ್ ಕ್ಷೇತ್ರದಲ್ಲಿ ಎಸ್‌ಡಿಪಿಐ ಅಭ್ಯರ್ಥಿಗೆ ಕ್ರೈಸ್ತ ಸಂಘಟನೆಗಳ ಬೆಂಬಲ



ಮೈಸೂರು,ಏ.26(ಪಿಎಂ)– ಕ್ರೈಸ್ತ ಸಮುದಾಯದ ಪರವಾಗಿ ನಿಲ್ಲುವ ಭರವಸೆ ಹಿನ್ನೆಲೆಯಲ್ಲಿ ಎನ್‌ಆರ್ ಕ್ಷೇತ್ರದ ಎಸ್‌ಡಿಪಿಐ ಪಕ್ಷದ ಅಭ್ಯರ್ಥಿ ಅಬ್ದುಲ್ ಮಜೀದ್ ಅವರಿಗೆ ಬೆಂಬಲ ನೀಡಲು ಕ್ರೈಸ್ತರ ಪ್ರಗತಿಪರ ಸಂಸ್ಥೆ ಮತ್ತು ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ತೀರ್ಮಾನಿಸಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಕ್ರೈಸ್ತರ ಪ್ರಗತಿಪರ ಸಂಸ್ಥೆ ಅಧ್ಯಕ್ಷ ಜ್ಞಾನಪ್ರಕಾಶ್ ಮತ್ತು ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಅಧ್ಯಕ್ಷ ಜೆ.ಸ್ಟೀಫನ್ ಸುಜೀತ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಎನ್‌ಆರ್ ಕ್ಷೇತ್ರದಲ್ಲಿ ನಮ್ಮ ಸಮುದಾಯ ನಂಬಿದ್ದ ಯಾವುದೇ ಪಕ್ಷಗಳು ಸಮರ್ಪಕವಾಗಿ ಸರ್ಕಾರದ ಸವಲತ್ತು ದೊರಕಿಸಿಕೊಟ್ಟಿಲ್ಲ. ಅಲ್ಲದೆ, ಸ್ಥಳೀಯ ಸಂಸ್ಥೆಗಳಲ್ಲಿ ಸಮುದಾಯದ ನಾಯಕತ್ವ ಬೆಳೆಸಿಲ್ಲ. ಕ್ರೈಸ್ತರ ಮೇಲಿನ ದೌರ್ಜನ್ಯದ ವಿರುದ್ಧ ನಡೆಯುವ ಹೋರಾಟಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಬೆಂಬಲವಾಗಿ ನಿಲ್ಲುತ್ತಿಲ್ಲ. ಹಾಗಾಗಿ ಸಮುದಾಯದ ಪರವಾಗಿ ನಿಲ್ಲುವ ಭರವಸೆಯೊಂದಿಗೆ ಎನ್‌ಆರ್ ಕ್ಷೇತ್ರದಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಬೆಂಬಲಿಸಲು ಎರಡೂ ಸಂಘಟನೆಗಳು ನಿರ್ಧರಿಸಿದ್ದು, ಇದಕ್ಕೆ ಕ್ಷೇತ್ರದ ಸಮುದಾಯದವರು ಕೈಜೋಡಿಸಬೇಕು ಎಂದು ಕೋರಿದರು. ಸಂಘಟನೆಗಳ ಮುಖಂಡರಾದ ಬಾಬ್ರ ಬೇಯರ್, ವಿನೋದ್ ಕುಮಾರ್, ಜೆ.ಜಯರಾಜ್, ಪುರುಷೋತ್ತಮ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಉಚಿತ ಬೇಸಿಗೆ ಕರಾಟೆ ತರಬೇತಿ ಶಿಬಿರ

ಮೈಸೂರು, ಏ. 26– ಒಕಿನವಾ ಸ್ಕೂಲ್ ಆಫ್ ಕರಾಟೆ ಸಂಸ್ಥೆಯಿಂದ ಮೇ 1 ರಿಂದ 15 ರವರೆಗೆ 15 ದಿನಗಳ ಕಾಲ ಉಚಿತ ಬೇಸಿಗೆ ಕರಾಟೆ ತರಬೇತಿ ಶಿಬಿರವನ್ನು ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘ, ಸಾಹುಕಾರ್ ಚೆನ್ನಯ್ಯ ಕ್ರೀಡಾಂಗಣ, ದೊಡ್ಡಕೆರೆ ಮೈದಾನ ಇಲ್ಲಿ ಬೆಳಗ್ಗೆ 6 ರಿಂದ 8 ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9844169591 ಸಂಪರ್ಕಿಸಬಹುದು.

ಮಿಟುಕಿಸದೆ ಬರಿಗಣ್ಣಿನಿಂದ ಸೂರ್ಯನ ನೋಡುವುದರಲ್ಲಿ ಬದರಿನಾರಾಯಣ ವಿಶಿಷ್ಟ ದಾಖಲೆ

ಮೈಸೂರು, ಏ.26–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಪತ್ರಿಕೋದ್ಯಮ ವಿಭಾಗದ ವತಿಯಿಂದ ಮೈಸೂರು ಅರಮನೆ ಮುಂಭಾಗ, ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸೂರ್ಯನನ್ನು ಬರಿ ಕಣ್ಣಿನಿಂದ ನೋಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವಿಶ್ವದಾಖಲೆ ಹೊಂದಿರುವ ಕೆ. ಎಸ್. ಬದರಿ ನಾರಾಯಣ ಅವರು ತಮ್ಮ 50ನೇ ಜನ್ಮದಿನದ ಅಂಗವಾಗಿ ಕಣ್ಣು ಮಿಟುಕಿಸದೆ ಸೂರ್ಯನನ್ನು ನೋಡುವ ವಿಶಿಷ್ಟ ದಾಖಲೆಯನ್ನು ಮಧ್ಯಾಹ್ನ 12 ಗಂಟೆಯಿಂದ 50 ನಿಮಿಷಗಳ ಕಾಲ ತಮ್ಮ ಕಣ್ಣುಗಳನ್ನು ಮಿಟುಕಿಸದೆ ಸೂರ್ಯನತ್ತ ದೃಷ್ಟಿ ಹಾಯಿಸುವುದರ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಪ್ರಮಾಣೀಕರಿಸಲಾಯಿತು.





ಕೆ.ಎಸ್.ಬದರಿ ನಾರಾಯಣ್‌ರವರು ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಮಲೇಷಿಯಾ ಮತ್ತು ಓಮನ್‌ನಲ್ಲಿನ ಟೊಯೋಟಾ ಮೋಟಾರ್ಸ್, ಏರೋಸ್ಪೆಸ್‌ನಲ್ಲಿ ಕೆಲಸವನ್ನು ನಿರ್ವಹಿಸಿ, ಮಲೇಷ್ಯಾದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಜಾಗತಿಕ ನಾಯಕರಾಗಿ ಹಾಗೂ ಅಲ್ಲಿನ ಈವೆಂಟ್ ಮ್ಯಾನೇಜ್ಮೆಂಟ್ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ. ಇವರು 15 ವರ್ಷಗಳ ಹಿಂದೆ ರಾಷ್ಟ್ರದ ಸೇವೆಗಾಗಿ ಮೈಸೂರಿಗೆ ಮರಳಿದರು. ಪ್ಲಾಸ್ಟಿಕ್ ಬಾಟಲ್‌ಗಳ ಜಾಗೃತಿ, ಪಾರ್ಥೇನಿಯಂ ಸಸ್ಯಗಳ ನಿರ್ಮೂಲನೆಯಲ್ಲಿ ತೊಡಗಿಸಿಕೊಂಡಿದ್ದರು. ನಿರ್ಗತಿಕರಿಗೆ ಮತ್ತು ವಯಸ್ಸಾದವರಿಗೆ ಸಹಾಯ ಮಾಡುವುದು, ವಾಹನ ದಟ್ಟಣೆಯನ್ನು ನಿವಾರಿಸುವ ಮೂಲಕ ಪೊಲೀಸ್ ಸಿಬ್ಬಂದಿಗೆ ಸಹಾಯ ಮಾಡುತ್ತ, ಚಾಮುಂಡಿಬೆಟ್ಟದ ಮೆಟ್ಟಿಲುಗಳ ಬಳಿ ಪ್ಲಾಸ್ಟಿಕ್‌ಗಳ ಸಂಗ್ರಹಣೆ ಮಾಡುವುದರೊಂದಿಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವುದು. ಮೈಸೂರು ನಗರದಲ್ಲಿ ಇವರು ಸ್ವಿಗ್ಗಿ ವಿತರಣಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದಾರೆ.

ಯೋಗಶೀರ್ಷಾಸನ ಪ್ರದರ್ಶನ ಹಾಗೂ ಯೋಗದ ಒಳ್ಳೆಯತನವನ್ನೂ ಹರಡಿ, ಅಪಾಯಕಾರಿ ಪಿಇಟಿ ಬಾಟಲ್‌ಗಳನ್ನು ಸಂಗ್ರಹಿಸಿ ಮರುಬಳಕೆಯಲ್ಲಿ ತೊಡಗಿಸಿಕೊಳ್ಳುವಂತೆ ಯುವಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಬಾಟಲಿಗಳ ಸಂಗ್ರಹದೊಂದಿಗೆ ಚಿಂದಿ ಆಯುವವರಿಗೆ ಸಹಾಯ ಮಾಡುವುದನ್ನೂ ಪ್ರವೃತ್ತಿಯಾಗಿಸಿಕೊಂಡಿದ್ದಾರೆ. ಯೋಗದಲ್ಲಿ ಅವರು ಜಾಗತಿಕವಾಗಿ ಹಲವಾರು ವಿಶ್ವದಾಖಲೆಗಳನ್ನು ಹೊಂದಿದ್ದಾರೆ. ರಾಮೇಶ್ವರಂ, ತಮಿಳುನಾಡಿನಲ್ಲಿ ಒಂದು ದಿನದಲ್ಲಿ 108 ಸ್ಥಳಗಳಲ್ಲಿ ಯೋಗಪ್ರದರ್ಶನ ಮಾಡುವ ಮೂಲಕ ಹಲವಾರು ಜನರಿಗೆ ಮಾದರಿಯಾಗಿದ್ದಾರೆ. ಸೂರ್ಯನು ಎಲ್ಲಾ ಜೀವಿಗಳ ಶಕ್ತಿಯ ಮೂಲವಾಗಿದ್ದು, ಭೂಮಿಯು ಸೂರ್ಯನ ಮೇಲೆ ಅವಲಂಬಿತವಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಸೂರ್ಯನ ಶಕ್ತಿಯ ಕೊಡುಗೆಗಳು, ಶಕ್ತಿಯ ಸಮೃದ್ಧ ಮೂಲ ಮತ್ತು ಸರಿಯಾದ ರೀತಿಯಲ್ಲಿ ಬಳಸಿದಾಗ, ಇದು ಸಾಕಷ್ಟು ಪ್ರಯೋಜನಗಳನ್ನು ನೀಡಲು ಬದ್ಧವಾಗಿದೆ. ಸಾಮಾನ್ಯವಾಗಿ ಸೂರ್ಯನನ್ನು ಕಣ್ಣುಗಳ ಮೂಲಕ ನೇರವಾಗಿ ನೋಡಿದಾಗ ಪೀನಲ್ ಗ್ರಂಥಿಯು ಸಕ್ರಿಯಗೊಳ್ಳುತ್ತದೆ. ಇದನ್ನು ಮೂರನೇ ಕಣ್ಣು ಎಂದೂ ಕರೆಯುತ್ತಾರೆ. ಸೂರ್ಯಕ್ರಿಯೆ ನಮ್ಮ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಬಹಳಷ್ಟು ಉಪಯೋಗವಾಗುವುದು. ಸೂರ್ಯಕ್ರಿಯೆ ಮೆಲಟೋನಿನ್ ಹಾಗೂ ಸೆರಾಟೋನಿನ್ ದ್ರವಗಳ ಉತ್ಪಾದನೆಗೆ ಸಹಾಯವಾಗುವುದು. ಇದು ಮನಸ್ಸಿನ ಸ್ಥಿತಿಯನ್ನು ಉಲ್ಲಾಸಕರವಾಗಿಡಲು ಸಹಾಯವಾಗುವುದು. ದೇಹಕ್ಕೆ ಸೂರ್ಯನೊಬ್ಬನೇ ವಿಟಮಿನ್ ಡಿ ಪೂರೈಕೆ ಮಾಡುವ ಶಕ್ತಿವುಳ್ಳವನು.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳ ಬಿರುಸಿನ ಮತಯಾಚನೆ







ಮೈಸೂರು,ಏ.26(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಜೋರಾಗಿದ್ದು, ಮತದಾರರ ಸೆಳೆಯಲು ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಮನೆ ಮನೆಗೆ ತೆರಳಿ ಕಸರತ್ತು ನಡೆಸುತ್ತಿದ್ದಾರೆ.

ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ಬೆಂಬಲಿಗರೊಂದಿಗೆ ಮನೆ ಮನೆಗೆ ತೆರಳಿ ಮತಯಾಚಿಸಿದ ಶಾಸಕ ಎಲ್.ನಾಗೇಂದ್ರ ಮತ್ತೊಮ್ಮೆ ಅವಕಾಶ ನೀಡುವಂತೆ ಮನವಿ ಮಾಡಿದರು. ಅಲ್ಲದೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನೀಡುರುವ ಜನಪರ ಯೋಜನೆಗಳು ಹಾಗೂ ಕ್ಷೇತ್ರದಲ್ಲಾದ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಿಸಿದರು.

ಹಾಗೆಯೇ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ, ಹಳ್ಳದಕೇರಿಯಲ್ಲಿ ತಮ್ಮ ಬೆಂಬಲಿಗರೊಂದಿಗೆ ಭರ್ಜರಿ ಪ್ರಚಾರದೊಂದಿಗೆ ಮತ ಯಾಚಿಸಿದರು. ಕಾಂಗ್ರೆಸ್ ಮುಖಂಡರಾದ ಎನ್.ಆರ್.ನಾಗೇಶ್ ಸೇರಿದಂತೆ ಹಲವರು ಸಾಥ್ ನೀಡಿದರು. ಕ್ಷೇತ್ರದ ಅಭಿವೃದ್ಧಿಗಾಗಿ ನನ್ನನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕಾದ ಅನಿವಾರ್ಯತೆ ಇದೆ ಎನ್ನುವ ಮೂಲಕ ಮತದಾರರನ್ನು ಸೆಳೆದರು.

ಜೆಡಿಎಸ್: ಮೈಸೂರಿನ ಮಂಚೇಗೌಡನ ಕೊಪ್ಪಲಿನಲ್ಲಿ ಮತಯಾಚಿಸಿದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್, ಮತದಾರರ ಮನೆ ಮನೆಗೆ ತೆರಳಿ ಬೆಂಬಲ ನೀಡುವಂತೆ ಕೋರಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ರವಿಕುಮಾರ್, ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ ಮತ್ತಿತರರು ಹಾಜರಿದ್ದರು.

ವಿವಿಧ ಪಕ್ಷಗಳ ಯುವ ಮುಖಂಡರು ಬಿಜೆಪಿ ಸೇರ್ಪಡೆ



ಮೈಸೂರು, ಏ.26(ಎಸ್‌ಬಿಡಿ)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅನೇಕ ಯುವಕರು ಬಿಜೆಪಿಗೆ ಸೇರ್ಪಡೆಯಾದರು.

ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಗಾಂಧಿನಗರ 11ನೇ ಕ್ರಾಸ್‌ನ ಮನೆ ಮಂಚಮ್ಮ ದೇವಸ್ಥಾನದ ಬಳಿ 27 ಹಾಗೂ 28ನೇ ವಾರ್ಡಿನ ಹೆಚ್.ಸಂತೋಷ್ ಕುಮಾರ್, ಎಂ.ನಾಗರಾಜ, ಹೆಚ್.ಉಮೇಶ್, ಎನ್.ಸಂತೋಷ್‌ಕುಮಾರ್, ಸಂದೀಪ್ ಕುಮಾರ್, ನರಸಿಂಹ, ಪ್ರವೀಣ್, ಎನ್.ಕಾರ್ತಿಕ್, ಎಂ.ಕಾರ್ತಿಕ್, ತಿಲಕ್, ದೇವಾ ದಿತ್ಯಾ, ಸುಭಾಷ್ ಸೇರಿದಂತೆ ಬೇರೆ ಬೇರೆ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಸುಮಾರು 15 ಯುವಕರು ಬಿಜೆಪಿ ಸೇರಿದರು.

ಯುವ ತಂಡವನ್ನು ಪಕ್ಷಕ್ಕೆ ಸ್ವಾಗತಿಸಿದ ಬಿಜೆಪಿ ಅಭ್ಯರ್ಥಿ ಸತೀಶ್ ಸಂದೇಶ್ ಸ್ವಾಮಿ ಮಾತನಾಡಿ, ನರಸಿಂಹರಾಜ ಕ್ಷೇತ್ರದ ಜನ ಈ ಬಾರಿ ಬದಲಾವಣೆ ಬಯಸಿದ್ದಾರೆ. ಅದರಲ್ಲೂ ಯುವ ಸಮುದಾಯ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಯತ್ತ ಒಲವು ತೋರಿದೆ. ಈ ನಿಟ್ಟಿನಲ್ಲಿ ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಅನೇಕ ಯುವಕರು ಬಿಜೆಪಿ ಸೇರಿದ್ದಾರೆ. ಹಲವು ವಾರ್ಡ್‌ಗಳ ಯುವಕರು ಬಿಜೆಪಿಗೆ ಬೆಂಬಲಿಸಲು ಸಿದ್ಧರಿದ್ದಾರೆ. ಈ ಬೆಳವಣಿಗೆ ಬಿಜೆಪಿ ಗೆಲುವಿನ ಮುನ್ಸೂಚನೆಯಾಗಿದೆ ಎಂದು ಅಭಿಪ್ರಾಯಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ನಗರಪಾಲಿಕೆ ಸದಸ್ಯೆ ಡಾ.ಅಶ್ವಿನಿ ಶರತ್, ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್, ಪ್ರಧಾನ ಕಾರ್ಯದರ್ಶಿ ಸ್ವಾಮಿಗೌಡ, ಕ್ಷೇತ್ರದ ಚುನಾವಣಾ ಸಂಚಾಲಕಿ ಸೌಧಾಮಣಿ, ನಗರ ಕಾರ್ಯಕಾರಿಣಿ ಸದಸ್ಯ ಕೆ.ಎಂ.ರಘು, ನಗರ ಯುವ ಮೋರ್ಚಾ ಕಾರ್ಯದರ್ಶಿ ಪುನೀತ್, ಮುಖಂಡರಾದ ಸು.ಮುರಳಿ, ಶರತ್, ನವೀನ್ ಶೆಟ್ಟಿ, ಧನರಾಜ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರದಲ್ಲಿ ಜನರ ಮನೆ ಬಾಗಿಲಿಗೆ ಯೋಜನೆಗಳ ಫಲ



ಮೈಸೂರು,ಏ.26(ಎಂಕೆ)–ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರದ ಯೋಜನೆಗಳು ಜನಸಾಮಾನ್ಯರ ಮನೆ ಬಾಗಿಲಿಗೆ ಬರಲಿದೆ ಎಂದು ಕೆ.ಆರ್. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಹೇಳಿದರು.

ಕೆ.ಆರ್ ಕ್ಷೇತ್ರ ವ್ಯಾಪ್ತಿಯ ಸುಣ್ಣದಕೇರಿ, ಕೃಷ್ಣಮೂರ್ತಿಪುರಂ, ಗುಂಡೂರಾವ್‌ನಗರ, ಚಾಮುಂಡಿಪುರಂನಲ್ಲಿ ಮೇಯರ್ ಶಿವಕುಮಾರ್ ಜೊತೆಗೂಡಿ ಮನೆ ಮನೆ ತೆರಳಿ, ಮತಯಾಚಿಸಿದರು. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಕ್ಷೇತ್ರದಲ್ಲಿ ಅತೀ ಹಿಂದುಳಿದ ಸುಣ್ಣದಕೇರಿ , ಕಾಕರವಾಡಿ, ಬೆಸ್ತರಗೇರಿ, ಕುಂಬಾರಗೇರಿಗಳಲ್ಲಿ ಹಿಂದುಳಿದ ಹಾಗೂ ಪರಿಶಿಷ್ಟ ಪಂಗಡ ಸಮುದಾಯದವರು ಹೆಚ್ಚಿದ್ದು, ಇವರುಗಳಿಗೆ ಸರ್ಕಾರದ ಮೂಲ ಸೌಕರ್ಯಗಳಾದ ಕುಡಿಯುವ ನೀರು, ಸ್ವಚ್ಛತೆ, ವಿದ್ಯುತ್, ರಸ್ತೆ ಹಾಗೂ ಸರ್ಕಾರದ ಸವಲತ್ತುಗಳನ್ನು ಪ್ರಾಮಾಣಿಕವಾಗಿ ಕೊಡಿಸಲಾಗುವುದೆಂದು ಭರವಸೆ ನೀಡಿದರು. ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಕೃಷ್ಣ ನಾಯಕ್, ವಾರ್ಡಿನ ಅಧ್ಯಕ್ಷ ಮಂಜುನಾಥ್ ನಾಯಕ್, ಅರುಣ್, ಅರಸು, ಜೋಗಪ್ಪ, ನಂದೀಶ್ ನಾಯಕ್, ಕೃಷ್ಣ, ಅನಿಲ್‌ರಾಜ್, ಶರತ್ ಭಂಡಾರಿ, ಲಿಂಗರಾಜು, ಮಧು, ವಿಜಯ ನಾಯಕ್, ಸಚಿನ್, ಕುಮಾರ್ ಮತ್ತಿತರರಿದ್ದರು.

ಮೈಸೂರಲ್ಲಿ ವಿವಿಧೆಡೆ ಬೈಕ್ ರ‍್ಯಾಲಿ ಮೂಲಕ ಮತದಾನ ಜಾಗೃತಿ



ಮೈಸೂರು ಏ.26(ಸಿಎನ್)– ಜಿಲ್ಲಾಡಳಿತ, ನಗರ ಪಾಲಿಕೆ, ಜಿ.ಪಂ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದೊಂದಿಗೆ ಬೈಕ್ ರ‍್ಯಾಲಿ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಆರಂಭಗೊಂಡ ಬೈಕ್ ರ‍್ಯಾಲಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಜಿಲ್ಲಾಧಿಕಾರಿಗಳು ಸಹ ಬೈಕ್ ಸವಾರಿ ನಡೆಸಿದರು.

ರ‍್ಯಾಲಿಯೂ ಕೆ.ಆರ್ ವೃತ್ತ, ಬಲ್ಲಾಳ್ ಸರ್ಕಲ್, ಅಶೋಕಪುರಂ–ಎನ್‌ಐಇ ಕಾಲೇಜು, ವಿಶ್ವೇಶ್ವರ ನಗರದ ಸ್ಟರ್ಲಿಂಗ್ ಚಿತ್ರಮಂದಿರ, ವಿದ್ಯಾರಣ್ಯಪುರಂ, ಕನಕಗಿರಿ, ಜೆಎಸ್‌ಎಸ್ ಕಾಲೇಜು, ಎಂ.ಜಿ ರಸ್ತೆ, ಇಟ್ಟಿಗೆಗೂಡು, ಮಹದೇವಪುರ ಜೋಡಿ ರಸ್ತೆ, ಫೌಂಟೇನ್ ವೃತ್ತ, ರೈಲ್ವೇ ನಿಲ್ದಾಣ ವೃತ್ತ, ಮೆಟ್ರೋಪೋಲ್ ವೃತ್ತದ ಮೂಲಕ ಸಾಗಿ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಮುಕ್ತಾಯವಾಯಿತು.

ಮತದಾನ ಕುರಿತು ಜಾಗೃತಿ ಮಾಹಿತಿಯುಳ್ಳ ನಾಮಫಲಕಗಳನ್ನು ಹಿಡಿದು ರ‍್ಯಾಲಿಯಲ್ಲಿ ಭಾಗವಹಿಸಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತದಾನದ ಅರಿವು ಮೂಡಿಸಿದರು.

ಚುನಾವಣಾ ವೀಕ್ಷಕ ಯಶು ರುಸ್ತಗಿ, ಚುನಾವಣಾ ವೆಚ್ಚ ವೀಕ್ಷಕ ಪ್ರೀತಮ್ ಕುಮಾರ್, ಚುನಾವಣಾಧಿಕಾರಿ ಕುಸುಮಾಕುಮಾರಿ, ತಹಶೀಲ್ದಾರ್ ಕುಂ.ಇ.ಅಹಮ್ಮದ್, ಕಾರ್ಯನಿರ್ವಾಹಕ ಅಧಿಕಾರಿ ಎಂ.ಗಂಗಣ್ಣ ಮತ್ತಿತರರಿದ್ದರು.

ನವ ವಧು–ವರನ ಮತದಾನ ಜಾಗೃತಿ



ಮೈಸೂರು,ಏ.26(ಎಸ್‌ಬಿಡಿ)–ನವಜೀವನಕ್ಕೆ ಕಾಲಿಟ್ಟ ನೂತನ 'ವಧು–ವರ', ಮತದಾನದ ಬಗ್ಗೆ ಜಾಗೃತಿ ಮೂಡಿಸಿದ ಪ್ರಸಂಗ ನಂಜನಗೂಡಿನಲ್ಲಿ ನಡೆದಿದೆ.

ನಂಜನಗೂಡು ತಾಲೂಕು ಸ್ವೀಪ್ ಸಮಿತಿ ವತಿಯಿಂದ ವ್ಯಾಪಕ ಮತದಾನ ಜಾಗೃತಿ ಕೈಗೊಂಡಿದ್ದು, ವಿವಾಹ ಸಮಾರಂಭವಿದ್ದ ಅಂಬೇಡ್ಕರ್ ಭವನದಲ್ಲೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ನವಜೋಡಿ ಸಿಂಧುವಳ್ಳಿಯ ಅಂಜಲಿ ಹಾಗೂ ಬಿದರಗೂಡಿನ ಮನು, ಮತದಾರರ ಫೋಟೋ ಫ್ರೇಮ್‌ನಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವ ಮೂಲಕ 'ಮೇ 10ರಂದು ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ' ಎಂಬ ಸಂದೇಶ ಸಾರಿದರು. ಈ ವಿಶೇಷ ಕ್ಷಣಕ್ಕೆ ವಿವಾಹ ವಧು–ವರರ ಸಂಬಂಧಿಕರು, ಸ್ನೇಹಿತರು ಸಾಕ್ಷಿಯಾದರು. ತಾಲೂಕು ಸ್ವೀಪ್ ಸಮಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬ್ಯಾನರ್ ಹಾಗೂ ಘೋಷಣಾ ಫಲಕ ಪ್ರದರ್ಶಿಸುವ ಮೂಲಕ 18 ವರ್ಷ ಮೇಲ್ಪಟ್ಟವರು ತಪ್ಪದೇ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುವಂತೆ ಮನವಿ ಮಾಡಿದರು. ಸ್ವೀಪ್ ಸಮಿತಿಯ ವಿಭಿನ್ನ ಪ್ರಯತ್ನಕ್ಕೆ ನೆರೆದಿದ್ದವರಿಂದ ಪ್ರಶಂಸೆ ವ್ಯಕ್ತವಾಯಿತು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಈರಪ್ಪನಕೊಪ್ಪಲು, ಸೀಗಳ್ಳಿ ಗ್ರಾಮದಲ್ಲಿ ಬುಧವಾರ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮತಯಾಚಿಸಿದರು. ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ನರೇಂದ್ರ, ರಾಜೇಶ್, ಸ್ವಾಮಿ, ಪ್ರಮುಖ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಛತ್ತೀಸ್‌ಗಢದಲ್ಲಿ ನಕ್ಸಲ್ ಅಟ್ಟಹಾಸ: 10 ಪೊಲೀಸ್ ಸಿಬ್ಬಂದಿ ಹತ್ಯೆ

ನವದೆಹಲಿ: ಛತ್ತೀಸ್‌ಗಢದಲ್ಲಿ ನಕ್ಸಲರು ನಡೆಸಿದ ಬಾಂಬ್ ಸ್ಫೋಟದಲ್ಲಿ 10 ಮಂದಿ ಪೊಲೀಸ್ ಸಿಬ್ಬಂದಿ, ಓರ್ವ ಚಾಲಕ ಮೃತಪಟ್ಟಿರುವ ಘಟನೆ ಏ.26ರಂದು ವರದಿಯಾಗಿದೆ. ಅರನ್ಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ಘಟನೆ ವರದಿಯಾಗಿದ್ದು, ಪೊಲೀಸ್ ಜಿಲ್ಲಾ ರಿಸರ್ವ್ ಗಾರ್ಡ್ (ಡಿಆರ್‌ಜಿ) ಗಳ ತಂಡ ನಕ್ಸಲ್ ವಿರೋಧಿ ಕಾರ್ಯಾಚರಣೆ ಮುಕ್ತಾಯಗೊಳಿಸಿ ವಾಪಸ್ಸಾಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಯ್‌ಪುರದಿಂದ 450 ಕಿ.ಮೀ ದೂರದಲ್ಲಿ ಘಟನೆ ನಡೆದಿದೆ. ಭದ್ರತಾ ಪಡೆಗಳು ಸಂಚರಿಸುತ್ತಿದ್ದ ಮಿನಿ ಗೂಡ್ಸ್ ವಾಹನವನ್ನು ನಕ್ಸಲರು ಸುಧಾರಿತ ಸ್ಫೋಟ ಸಾಧನದ ಮೂಲಕ ಸ್ಫೋಟಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ. ನಕ್ಸಲ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ತೀವ್ರವಾಗಿ ಖಂಡಿಸಿದ್ದಾರೆ.

ವಿ.ಸೋಮಣ್ಣ ವೈರಲ್ ಆಡಿಯೋ: ಚುನಾವಣಾ ಆಯೋಗದಿಂದ ತನಿಖೆ

ಬೆಂಗಳೂರು: ಚಾಮರಾಜನಗರದ ಜೆಡಿಎಸ್ ಅಭ್ಯರ್ಥಿ ಆಲೂರು ಮಲ್ಲು ಆಮಿಷವೊಡ್ಡಿ ನಾಮಪತ್ರ ಹಿಂಪಡೆಯಲು ಸಚಿವ ಸೋಮಣ್ಣ ಒತ್ತಾಯಿಸಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿದ್ದು, ಭಾರೀ ಸಂಚಲನ ಸೃಷ್ಟಿಸಿದೆ. ಜೆಡಿಎಸ್ ಈ ವಿಚಾರವನ್ನು ಅಸ್ತ್ರ ಮಾಡಿಕೊಂಡಿದ್ದು ಸೋಮಣ್ಣ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ಮಧ್ಯೆ ಆಡಿಯೋ ಸಂಬಂಧ ತನಿಖೆಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳು ಸೂಚನೆ ನೀಡಿದ್ದಾರೆ.

ಚಾಮರಾಜನಗರ ಜೆಡಿಎಸ್ ಅಭ್ಯರ್ಥಿ ಆಲೂರು ಮಲ್ಲು ಅವರಿಗೆ ಆಮಿಷವೊಡ್ಡಿ ತಾವು ಮಾತನಾಡಿರುವುದಾಗಿ ವೈರಲ್ ಆಗಿರುವ ಆಡಿಯೋಗೂ ನನಗೂ ಯಾವುದೇ ಸಂಬಂಧವಿಲ್ಲ.
–ವಿ.ಸೋಮಣ್ಣ, ಸಚಿವ

ಕಾಂಗ್ರೆಸ್ ಹಿಂದುಳಿದ ವಿಭಾಗಕ್ಕೆ ನೇಮಕ



ಮೈಸೂರು, ಏ.26– ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಬ್ರಾಡ್‌ವೇ ಕಿರಣ್ ನೇಮಕಗೊಂಡಿದ್ದಾರೆ.

ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಸ್.ಮಧು ಬಂಗಾರಪ್ಪ ನೇಮಕಾತಿ ಪತ್ರ ನೀಡಿ, ಪಕ್ಷ ಸಂಘಟನೆ ಹಾಗೂ ಬಲವರ್ಧನೆಗೆ ಶ್ರಮಿಸುವಂತೆ ಸೂಚಿಸಿದ್ದಾರೆ.

ಚಿತ್ರನಟಿ ತಾರಾ, ಶ್ರುತಿ ವಿರುದ್ಧ ಎಫ್‌ಐಆರ್



ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಪರವಾಗಿ ಚುನಾವಣಾ ಪ್ರಚಾರಕ್ಕೆ ತೆರಳಿದ ಸ್ಟಾರ್ ಪ್ರಚಾರಕಿ ನಟಿ ಶ್ರುತಿ ಮೇಲೆ ಎಫ್‌ಐಆರ್ ದಾಖಲಿಸಲಾಗಿತ್ತು. ಈಗ ಮತ್ತೊಬ್ಬ ನಟಿ, ಬಿಜೆಪಿಯ ಸ್ಟಾರ್ ಪ್ರಚಾರಕಿ ತಾರಾ ಅನುರಾಧಾ ಮೇಲೆಯೂ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ನೀಡಿದ ಸಾಕ್ಷಿ ಆಧಾರಿತ ಎಫ್‌ಐಆರ್ ದಾಖಲಾಗಿದೆ.

ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಹಾಗೂ ಅವರ ಪರ ಪ್ರಚಾರ ಮಾಡಲು ಹೋದವರು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡುತ್ತಾರೆಯೇ ಎಂಬುದನ್ನು ನೋಡಲಿಕ್ಕೆಂದೇ ಕಾದು ಕುಳಿತುಕೊಳ್ಳುವವರೂ ಇದ್ದಾರೆ. ಆದರೆ, ಹೀಗೆ ಕಾಯುತ್ತಾ ಕುಳಿತಿದ್ದ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರಿಗೆ ರಾಜ್ಯ ಅರಣ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ತಾರಾ ಅನುರಾಧ ಆಹಾರವಾಗಿದ್ದಾರೆ. ರಾಜ್ಯದಲ್ಲಿ ಮಾದರಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ, ಅರಣ್ಯ ಅಭಿವೃದ್ಧಿ ನಿಗಮದ (ಸರ್ಕಾರಿ ವಾಹನ) ಕಾರನ್ನು ತೆಗೆದುಕೊಂಡು ಬಿಜೆಪಿಯ ಪರವಾಗಿ ಚುನಾವಣಾ ಪ್ರಚಾರಕ್ಕೆ ತೆರಳಿದ್ದಾರೆ. ಇದನ್ನು ನೋಡಿದ ಕೆಆರ್‌ಎಸ್ ಪಕ್ಷದ ನಾಯಕರು ಇಂದು ಬೆಂಗಳೂರಿನ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರೋಗ ನಿರೋಧಕ ಲಸಿಕಾ ಕೇಂದ್ರ ಆರಂಭ



ಮೈಸೂರು,ಏ.26–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರೋಗ ನಿರೋಧಕ ಲಸಿಕಾ ಕೇಂದ್ರ ಕಾರ್ಯಾರಂಭಿಸಿದೆ.

ಏಪ್ರಿಲ್ ಕೊನೆಯ ವಾರವನ್ನು 'ವಿಶ್ವ ರೋಗ ನಿರೋಧಕ ವಾರ' ಎಂದು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಯಸ್ಕರ ಮತ್ತು ವೃದ್ಧರ ರೋಗ ನಿರೋಧಕ ಲಸಿಕಾ ಕೇಂದ್ರವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಸಚಿವ ಡಾ.ಬಿ.ಮಂಜುನಾಥ್ ಬುಧವಾರ ಉದ್ಘಾಟಿಸಿದರು.

ಲಸಿಕೆ ಎಂದರೆ ಮಕ್ಕಳಿಗೆ ಮಾತ್ರ ಎಂದು ಅಭಿಪ್ರಾಯ ಸಾರ್ವಜನಿಕರಲ್ಲಿದೆ. ಆದರೆ ವಯಸ್ಕರು ಮತ್ತು ವೃದ್ಧರೂ ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಲಸಿಕೆ ಪಡೆಯಬಹುದು. ವಯಸ್ಸಾದಂತೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಅನೇಕ ರೋಗಗಳಿಗೆ ತುತ್ತಾಗಬಹುದು. ದೇಹದ ಪುನಶ್ಚೇತನದ ಅಗತ್ಯ ಪೂರೈಸಲು ಮತ್ತು ಸಾಂಕ್ರಮಿಕ ರೋಗಗಳ ವಿರುದ್ಧ ಹೋರಾಡುವ ನಿಟ್ಟಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಲಸಿಕೆ ಬಹಳ ಉಪಯೋಗಕಾರಿ ಎಂದು ತಿಳಿಸಿದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಬಸವನಗೌಡಪ್ಪ, ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ವೈ.ಎಸ್.ರವಿಕುಮಾರ್, ಸಹ ಪ್ರಾಧ್ಯಾಪಕ ಡಾ.ತಿಪ್ಪೆಸ್ವಾಮಿ, ವೃದ್ಧಾರೋಗ್ಯ ವಿಭಾಗದ ಮುಖ್ಯಸ್ಥೆ ಡಾ.ಪ್ರತಿಭಾ ಪೆರೇರಾ, ಸ್ಥಾನೀಯ ವೈದ್ಯಾಧಿಕಾರಿ ಡಾ.ಶಾಂತಮಲ್ಲಪ್ಪ, ಆಡಳಿತಾಧಿಕಾರ ಲೋಕೇಶ್ ಹಾಗೂ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು. ಮೈಸೂರಿನ ಪ್ರಥಮ ರೋಗ ನಿರೋಧಕ ಲಸಿಕಾ ಕೇಂದ್ರ ಇದಾಗಿದ್ದು, ವರ್ಷವಿಡೀ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಕಾರ್ಯನಿರ್ವಹಿಸುತ್ತದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗೆ ದೂ.ಸಂ: 0821–2335505 ಅಥವಾ ಮೊ.ಸಂ.9886754640 ಸಂಪರ್ಕಿಸಬಹುದು ಎಂದು ಆಡಳಿತಾಧಿಕಾರಿ ಎನ್.ಲೋಕೇಶ್ ತಿಳಿಸಿದ್ದಾರೆ.

ಬೇಸಿಗೆಯಲ್ಲಿ ತಂಪು ನೀಡುವ ಹಣ್ಣಿನ ಬೆಲೆಯೂ ಬಿಸಿ!



ಮೈಸೂರು, ಏ.26(ಎಂಕೆ)– ರಾಜ್ಯ ವಿಧಾನಸಭಾ ಚುನಾವಣೆ ಕಾವಿನ ಜೊತೆಗೆ ಬಿಸಿಲಿನ ದಗೆ ತಣಿಸುವ ಹಣ್ಣುಗಳ ಬೆಲೆ ಗಗನಕ್ಕೇರಿದೆ. ಬೇಸಿಗೆ ತಾಪ ತಣಿಸುವ ನಿಂಬೆಹಣ್ಣು ಸೇರಿದಂತೆ ವಿವಿಧ ಬಗೆಯ ಹಣ್ಣುಗಳ ಬೆಲೆ ಏರಿಕೆಯಾಗಿದ್ದು, ಇವುಗಳ ಬೆಲೆ ಕೇಳಿ ಖರೀದಿಸುವ ಪ್ರಯತ್ನದಿಂದ ಜನ ಹಿಂದೆ ಸರಿಯುತ್ತಿದ್ದಾರೆ.

ಸೇಬಿನ ಬೆಲೆ ಕೆಜಿಗೆ 200–220 ರೂ. ಇದ್ದರೆ, ಏಲಕ್ಕಿ ಬಾಳೆ ಹಣ್ಣು 80–90 ರೂ., ದಾಳಿಂಬೆ 210–250 ರೂ, ಆರೇಂಜ್ 100–120 ರೂ., ಅನಾನಸ್ ಒಂದಕ್ಕೆ 50 ರೂ., ಪಪ್ಪಾಯ್ 30–40 ರೂ. ಆಗಿದೆ. ಹಾಗೆಯೇ ಕಪ್ಪು ದ್ರಾಕ್ಷಿ ಕೆಜಿಗೆ 100–120 ರೂ., ದ್ರಾಕ್ಷಿ 60–70 ರೂ., ಮೊಸಂಬಿ 90–100 ರೂ., ಕಲ್ಲಂಗಡಿ 20–25 ರೂ. ಇದ್ದರೆ ನಿಂಬೆಹಣ್ಣು 10 ರೂ.ಗೆ 2(ದಪ್ಪ ಗಾತ್ರ)ರಂತೆ ಮಾರಾಟ ಮಾಡಲಾಗುತ್ತಿದೆ. ಬೆಲೆ ಏರಿಕೆಯಿಂದ ಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗಿದೆ ಎಂದು ಹಣ್ಣಿನ ವ್ಯಾಪಾರಸ್ಥರು ತಿಳಿಸಿದ್ದಾರೆ.

ಮಾವು ಎಂಟ್ರಿ: ಹಣ್ಣಿನ ರಾಜ ಮಾವು ಮಾರುಕಟ್ಟೆಗೆ ಎಂಟ್ರಿಯಾಗಿದ್ದು, ಕೆ.ಜಿಗೆ 150 ರೂ.(ಬಾದಾಮಿ)ನಂತೆ ಮಾರಾಟ ಮಾಡಲಾಗುತ್ತಿದೆ. ರಸ್ತೆ ಬದಿ ಸೇರಿದಂತೆ ನಗರದಲ್ಲಿನ ಎಲ್ಲಾ ಮಾರುಕಟ್ಟೆಗಳಲ್ಲಿಯೂ ಮಾವಿನ ಹಣ್ಣಿಗೆ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಏರಿಕೆ ನಡುವೆಯೂ ಮಾವಿನ ರುಚಿ ಸವಿಯುವಂತಾಗಿದೆ. ಸದ್ಯಕ್ಕೆ ಬಾದಾಮಿ, ರಸಪುರಿ ಮಾವಿನ ಹಣ್ಣುಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ರಸಪುರಿ, ಮಲಗೋಬಾ, ಅಲ್ಫೋನ್ಸೋ, ನೀಲಂ, ಮಲ್ಲಿಕಾ, ಬೈಗನ್ ಪಲ್ಲಿ, ತೋತಾಪುರಿ ತಳಿಯ ಮಾವಿನ ಹಣ್ಣುಗಳು ಬರಬೇಕಾಗಿದೆ. ಇದರ ಜೊತೆಗೆ ತೋತಾಪುರಿ, ಹಲಸಿನ ಹಣ್ಣಿಗೂ ಬೇಡಿಕೆ ಹೆಚ್ಚಾಗಿದೆ.

ದುಬಾರಿ ಲೀಚಿ: ಸೀಸನ್ ಹಣ್ಣುಗಳಲ್ಲಿ ಒಂದಾದ ಲೀಚಿ ದುಬಾರಿ ಹಣ್ಣಾಗಿದ್ದು, ಕೆಜಿಗೆ 400 ರೂ.ನಂತೆ ಮಾರಾಟವಾಗುತ್ತಿದೆ. ಹಾಗೆಯೇ ವಾಟರ್ ಆ್ಯಪಲ್ ಸೇರಿದಂತೆ ಇನ್ನಿತರೆ ಸಿಸನ್ ಹಣ್ಣುಗಳನ್ನು ರಸ್ತೆ ಬದಿಯಲ್ಲಿ ಮಾರಾಟ ಮಾಡಲಾಗುತ್ತಿದೆ. ತಮಿಳುನಾಡಿನಲ್ಲಿ ಹೆಚ್ಚಾಗಿ ಬೆಳೆಯುವ ದೇಹಕ್ಕೆ ತಂಪಾದ ತಾಟಿ ನಿಂಗು (palmyra fruit) ಹಣ್ಣಿಗೆ ಜನರು ಮುಗಿ ಬೀಳುತ್ತಿದ್ದು, ಗಾತ್ರಕ್ಕೆ ತಕ್ಕಂತೆ 10–20 ರೂ.ನಂತೆ ಮಾರಾಟವಾಗುತ್ತಿದೆ. ಜೊತೆಗೆ ಎಳನೀರು, ಜ್ಯೂಸ್ ಅಂಗಡಿಗಳಲ್ಲಿಯೂ ಗ್ರಾಹಕರ ಸಂಖ್ಯೆ ಹೆಚ್ಚಾಗಿದೆ.

ದುಬಾರಿ ಬೆಲೆಯ ಮಾವಿನ ಹಣ್ಣಿನ ಬಾಕ್ಸ್ ಕದ್ದೊಯ್ದಿದ್ದ ಪೋಲೀಸ್ ವಜಾ

ತಿರುವನಂತಪುರಂ: ಸಿವಿಲ್ ಪೊಲೀಸ್ ಅಧಿಕಾರಿಯೊಬ್ಬರು ಅಂಗಡಿಯೊಂದರಿಂದ 10 ಕೆಜಿ ಮಾವಿನ ಹಣ್ಣಿನ ಪೆಟ್ಟಿಗೆಯನ್ನು ಕದ್ದೊಯ್ದಿದ್ದಾರೆ ಎಂಬ ಸುದ್ದಿ ಹೊರಬಿದ್ದ ನಂತರ, ಕೇರಳದ ಪೊಲೀಸ್ ಇಲಾಖೆ ಬುಧವಾರ ಆ ಅಧಿಕಾರಿಯನ್ನು ಸೇವೆಯಿಂದ ವಜಾಗೊಳಿಸಿದೆ. ಇಡುಕ್ಕಿಯ ಪೊಲೀಸ್ ಅಧೀಕ್ಷಕ ಪಿ.ವಿ.ಶಿಹಾಬ್ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಕೊಟ್ಟಾಯಂ ಜಿಲ್ಲೆಯ ಕಂಜಿರಪಲ್ಲಿಯ ಅಂಗಡಿಯೊಂದರ ಮುಂಭಾಗ ಇರಿಸಲಾಗಿದ್ದ ಮಾವಿನ ಹಣ್ಣಿನ ಪೆಟ್ಟಿಗೆಯನ್ನು ಒಯ್ಯುತ್ತಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿತ್ತು. ಆಗ ಕೆಜಿ ಮಾವಿನ ಹಣ್ಣಿಗೆ 500 ರೂ.ಗೂ ಅಧಿಕ ಬೆಲೆಯಿತ್ತು. ಬಳಿಕ ಅವರು, ತಮ್ಮ ದ್ವಿಚಕ್ರ ವಾಹನದ ಮೇಲೆ ಬಾಕ್ಸ್ ಇಟ್ಟುಕೊಂಡು ಓಡಿಸುತ್ತಿದ್ದ ದೃಶ್ಯಗಳು ಕಂಡುಬಂದಿದ್ದವು.



ಅಂಗಡಿಯವನು ಮರುದಿನ ತನ್ನ ಅಂಗಡಿ ತೆರೆಯಲು ಬಂದಾಗ, ಮಾವಿನ ಹಣ್ಣಿನ ಪೆಟ್ಟಿಗೆ ಕಾಣೆಯಾಗಿರುವುದು ಗಮನಕ್ಕೆ ಬಂದಿದೆ. ಬಳಿಕ ಅವರು ತಮ್ಮ ಸಿಸಿಟಿವಿ ಪರಿಶೀಲಿಸಿದಾಗ ಪೊಲೀಸರು ಹಣ್ಣನ್ನು ತೆಗೆದುಕೊಂಡು ಹೋಗಿರುವುದನ್ನು ಕಂಡು ಗಾಬರಿಗೊಂಡಿದ್ದರು. ವಿಡಿಯೋ ವೈರಲ್ ಆದ ನಂತರ, ಇಡುಕ್ಕಿ ಸಶಸ್ತ್ರ ಮೀಸಲು ಶಿಬಿರ ಪೊಲೀಸ್ ಘಟಕಕ್ಕೆ ನಿಯೋಜಿಸಿದ್ದ ಶಿಹಾಬ್ ನಾಪತ್ತೆಯಾಗಿದ್ದರು. ಕೂಡಲೇ ಆತನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಂತರ ಇಡುಕ್ಕಿ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಅಮಾನತುಗೊಳಿಸಿದ್ದಾರೆ.

ವರುಣ ಕ್ಷೇತ್ರದಲ್ಲಿ ಸೋಮಣ್ಣ ಭರ್ಜರಿ ರೋಡ್ ಶೋ

ನಿರೀಕ್ಷೆಗೂ ಮೀರಿ ಸೇರಿದ ಜನಸಾಗರ, ಅದ್ದೂರಿ ಸ್ವಾಗತ, ಪಟಾಕಿ ಸಿಡಿಸಿ ಸಂತಸ, ಪುಷ್ಪವೃಷ್ಟಿ

ತಿ.ನರಸೀಪುರ/ನಂಜನಗೂಡು, ಏ.26– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಕ್ಷೇತ್ರವಾದ ವರುಣ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಭರ್ಜರಿ ರೋಡ್ ಶೋ ಮಾಡಿ ಮತ ಯಾಚಿಸಿದರು.



ವರುಣ ಕ್ಷೇತ್ರ ವ್ಯಾಪ್ತಿಯ ಕಾರ್ಯ ಗ್ರಾಮದ ಹೊರವಲಯದ ಬೆಟ್ಟದ ಮೇಲಿರುವ ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯದಲ್ಲಿ ನೂರಾರು ಮಂದಿ ಕಾರ್ಯಕರ್ತರು ಮತ್ತು ಅಭಿಮಾನಿಗಳೊಂದಿಗೆ ಪೂಜೆ ಸಲ್ಲಿಸಿ ನಂತರ ಬೃಹತ್ ರೋಡ್ ಶೋಗೆ ಚಾಲನೆ ನೀಡಲಾಯಿತು.

ರಾಜ್ಯದಲ್ಲಿಯೇ ಹೈ ವೋಲ್ಟೇಜ್ ಕ್ಷೇತ್ರವೆಂದು ಬಿಂಭಿತವಾಗಿರುವ ವರುಣ ವಿಧಾನಸಭಾ ಕ್ಷೇತ್ರದಲ್ಲಿ ವಿ.ಸೋಮಣ್ಣ ನಡೆಸಿದ ರೋಡ್ ಶೋಗೆ ನಿರೀಕ್ಷೆಗೂ ಮೀರಿದ ಬೆಂಬಲ ವ್ಯಕ್ತವಾಯಿತು. ಸಾವಿರಾರು ಸಂಖ್ಯೆಯಲ್ಲಿ ಸೋಮಣ್ಣರವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಹಾಗೂ ಕ್ಷೇತ್ರದ ಮುಂಚೂಣಿ ನಾಯಕರು ವಿ.ಸೋಮಣ್ಣರಿಗೆ ಸಾಥ್ ನೀಡಿ ಅವರ ಪರ ಮತಯಾಚಿಸಿದರು.

ಸಿದ್ದೇಶ್ವರ ಬೆಟ್ಟದಿಂದ ಆರಂಭಗೊಂಡ ರೋಡ್ ಶೋ ಕಾರ್ಯ ಗ್ರಾಮದ ಪ್ರಮುಖ ರಸ್ತೆಯಲ್ಲಿ ಸಂಚರಿಸಿ ಕಾ.ಪು.ಸಿದ್ದಲಿಂಗಸ್ವಾಮಿ ಅವರ ನಿವಾಸದ ಬಳಿ ಅಂತ್ಯಗೊಂಡಿತು. ತೆರೆದ ವಾಹನದಲ್ಲಿ ಮುಂಚೂಣಿ ನಾಯಕರೊಂದಿಗೆ ರೋಡ್ ಶೋನಲ್ಲಿ ಪಾಲ್ಗೊಂಡ ಸೋಮಣ್ಣರಿಗೆ ಗ್ರಾಮದಲ್ಲಿ ಭರ್ಜರಿ ಬೆಂಬಲ ವ್ಯಕ್ತ ವಾಯಿತು. ಪ್ರಮುಖ ವೃತ್ತಗಳಲ್ಲಿ ಅಭಿಮಾನಿಗಳು ಕಾರ್ಯಕರ್ತರು ಪಟಾಕಿ ಸಿಡಿಸಿ, ಬೃಹತ್ ಗಾತ್ರದ ಹೂವಿನ ಹಾರ ಹಾಕಿ ಸ್ವಾಗತ ಕೋರಿದರು. ಜೆಸಿಬಿ ಯಂತ್ರದಿಂದ ಪುಷ್ಪ ವೃಷ್ಟಿ ಮಾಡಿ ಬೆಂಬಲ ವ್ಯಕ್ತ ಪಡಿಸಲಾಯಿತು.


ಗ್ರಾಮದ ಮಹರ್ಷಿ ವಾಲ್ಮೀಕಿ ನಾಮಫಲಕ ಹಾಗು ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪುತ್ಥಳಿಗೆ ಸೋಮಣ್ಣ ಮಾಲಾರ್ಪಣೆ ಮಾಡಿ ಗೌರವ ಸೂಚಿಸಿದರು. ಸಿದ್ದರಾಮಯ್ಯ ಹಾಗೂ ವಿ.ಸೋಮಣ್ಣ ಸ್ಪರ್ಧೆಯಿಂದಾಗಿ ವರುಣಾ ಕ್ಷೇತ್ರ ರಾಜ್ಯದಲ್ಲಿ ಹೈ ವೋಲ್ಟೇಜ್ ಕ್ಷೇತ್ರವಾಗಿ ಮಾರ್ಪಟ್ಟಿದ್ದು, ಎಲ್ಲರ ಗಮನ ಕ್ಷೇತ್ರದ ಮೇಲೆ ಇದೆ. ಸ್ವತಃ ಸಿದ್ದರಾಮಯ್ಯರವರ ತವರು ಕ್ಷೇತ್ರದಲ್ಲಿ ವಿ.ಸೋಮಣ್ಣ ಬುಧವಾರ ಭರ್ಜರಿ ರೋಡ್ ಷೋ ಮೂಲಕ ಕ್ಷೇತ್ರದಲ್ಲಿ ಸಂಚಲನ ಉಂಟು ಮಾಡಿದ್ದಾರೆ.ಸೋಮಣ್ಣರಿಗೆ ಕ್ಷೇತ್ರದ ಪರಿಚಯವೇ ಇಲ್ಲ ಎಂಬ ಸಿದ್ದರಾಮಯ್ಯ ಆರೋಪಕ್ಕೆ ವಿರುದ್ಧವಾಗಿ ಇಂದು ಕ್ಷೇತ್ರದ ಜನರು ಸೋಮಣ್ಣರಿಗೆ ಭರ್ಜರಿ ಸ್ವಾಗತ ನೀಡಿದ್ದಾರೆ. ಕ್ಷೇತ್ರದ ಎಲ್ಲೆಡೆ ಅವರಿಗೆ ನಿರೀಕ್ಷೆಗೂ ಮೀರಿದ ಜನಬೆಂಬಲ ವ್ಯಕ್ತವಾಗಿರುವುದು ಕಂಡು ಬಂತು.

ರೋಡ್ ಶೋನಲ್ಲಿ ಭಾಗವಹಿಸಿದ್ದ ಗ್ರಾಮಸ್ಥರು ಹಾಗೂ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಸೋಮಣ್ಣ, ವರುಣ ಕ್ಷೇತ್ರ ನನಗೆ ಹೊಸತಾದರೂ ಇನ್ನೆರಡು ತಿಂಗಳಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಇತಿಹಾಸ ಹೇಳುತ್ತೇನೆ. ಕಳೆದ 15 ವರ್ಷದಿಂದ ಸಿದ್ದರಾಮಯ್ಯ, ಯತೀಂದ್ರ ಅವರನ್ನು ಬೆಂಬಲಿಸುತ್ತಾ ಬಂದಿರುವ ನೀವು ಇದೊಂದು ಬಾರಿ ನನಗೆ ಅವಕಾಶ ಮಾಡಿಕೊಡಿ, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಜವಾಬ್ದಾರಿಯನ್ನು ನನಗೆ ಬಿಡಿ, ಬೆಂಗಳೂರಿನ ಗೋವಿಂದರಾಜ ನಗರ ಮಾದರಿಯಲ್ಲಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿ ರಾಜ್ಯದಲ್ಲಿಯೇ ವರುಣ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುತ್ತೇನೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಸಿದ್ದವೀರಪ್ಪ, ಮಾಜಿ ಸದಸ್ಯ ಬಿ.ಎನ್. ಸದಾನಂದ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್ ಮಹದೇವಸ್ವಾಮಿ, ಕ್ಷೇತ್ರ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್.ಮಾಜಿ ಅಧ್ಯಕ್ಷ ಶಿವಯ್ಯ, ಕಾರ್ಯದರ್ಶಿ ರಂಗೂನಾಯಕ್, ಗುತ್ತಿಗೆದಾರ ಜಯಶಂಕರ್, ಶರತ್ ಪುಟ್ಟ ಬುದ್ಧಿ, ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಉಮರ್, ಕೆಂಪಯ್ಯನ ಹುಂಡಿ ಅಂದಾನಿ ಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಚಿನ್ನಂಬಳ್ಳಿ ಮಂಜು, ಜಗದೀಶ್ ಸೇರಿದಂತೆ ನೂರಾರು ಮಂದಿ ಕಾರ್ಯಕರ್ತರು ರೋಡ್ ಶೋನಲ್ಲಿ ಭಾಗವಹಿಸಿದ್ದರು.

ತಂದೆ ಸಿದ್ದರಾಮಯ್ಯ ಪರ ಪುತ್ರ ಯತೀಂದ್ರ ಮತಯಾಚನೆ

ವರುಣದಲ್ಲಿ ನಡೆಯುತ್ತಿರುವುದು ಸತ್ಯದ ಪರ ಚುನಾವಣೆ



ನಂಜನಗೂಡು, ಏ.26– ಬಿಜೆಪಿ ಪಕ್ಷ ಭ್ರಷ್ಟಾಚಾರದಲ್ಲಿ ತೊಡಗಿ ಇಡೀ ರಾಜ್ಯವನ್ನು, ಲೂಟಿ ಮಾಡುತ್ತಾ ಬಡವರ ಶೋಷಣೆ ಮಾಡುತ್ತಿದೆ. ಭ್ರಷ್ಟಾಚಾರವನ್ನು ಕಿತ್ತೊಗೆದು ಬಡವರ ಬದುಕು ಸುಧಾರಣೆಗಾಗಿ ಸಿದ್ದರಾಮಯ್ಯ ನವರಿಗೆ ಮತ ನೀಡಿ ಹೆಚ್ಚಿನ ಮತಗಳಿಂದ ಗೆಲ್ಲಿಸಬೇಕು ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿಕೊಂಡಿದ್ದಾರೆ.

ತಾಲೂಕಿನ ಕೆಂಪಿಸಿದ್ದನಹುಂಡಿ, ಬಸವನಪುರ, ಹೆಜ್ಜಿಗೆ, ತೊರೆಮಾವು, ಇಮ್ಮಾವು, ಇಮ್ಮಾವುಹುಂಡಿ, ಬೊಕ್ಕಹಳ್ಳಿ, ಹಳಿಮಾವು ಗ್ರಾಮಗಳಲ್ಲಿ ತಂದೆ ಸಿದ್ದರಾಮಯ್ಯ ಪರವಾಗಿ ಮತಪ್ರಚಾರ ನಡೆಸಿ ಅವರು ಮಾತಾನಾಡಿದರು.

ಬಿಜೆಪಿ ಪಕ್ಷ ಬಡವರಿಗಾಗಿ ಯೋಜನೆ ಕೊಡಲು ಸಹಿಸುವುದಿಲ್ಲ ಅನ್ನಭಾಗ್ಯ ಕೊಟ್ಟಾಗ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಾರೆ ಎಂದು, ನಿಮ್ಮಗಳ ಸಾಲಮನ್ನಾ ಮಾಡಿದಾಗ ಸಾಲಮನ್ನಾದಿಂದ ರಾಜ್ಯಕ್ಕೆ ಆರ್ಥಿಕ ಹೊರೆ ಹೊರೆಸುತ್ತೀರೆಂದು ಟೀಕೆ ಮಾಡಿದ್ದರು. ಆದರೆ ಅಂಬಾನಿ, ಅದಾನಿ, ನೀರವ್ ಮೋದಿರಂತಹ ಶ್ರೀಮಂತರು ಬ್ಯಾಂಕ್‌ಗಳನ್ನು ವಂಚಿಸಿದ್ದರೂ ಸಹ ಅವರ ಸಾಲವನ್ನು ಮನ್ನಾ ಮಾಡಿ ಕಾರ್ಪೋರೇಟ್ ತೆರಿಗೆಯನ್ನೂ ಕಡಿತಗೊಳಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ ಬಡವರ ಜಿಎಸ್ಟಿ ತೆರಿಗೆ ಹೆಚ್ಚಿಸುವ ಮೂಲಕ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡವರ ಬದುಕನ್ನೇ ಮೂರಾಬಟ್ಟೆಯನ್ನಾಗಿಸಿದೆ ಎಂದರು.

ವರುಣದಲ್ಲಿ ಆಟ ನಡೆಯದು: ಶೋಷಿತರ ಪರ ಧ್ವನಿಯಾಗಿರುವ ಸಿದ್ದರಾಮಯ್ಯ ಅವರನ್ನು ಸೋಲಿಸಿ ರಾಜಕೀಯದಿಂದ ದೂರ ಉಳಿಸಬೇಕೆಂದು ಭಟ್ಟಭದ್ರ ಇಚ್ಛಾಶಕ್ತಿಗಳು ಕುತಂತ್ರ ಮಾಡುತ್ತಿವೆ. ಯಾರೇ ಎಷ್ಟು ಕುತಂತ್ರ ಮಾಡಿದರೂ ಸಹ ವರುಣ ಕ್ಷೇತ್ರದ ಜನತೆ ಕೈಬಿಡುವುದಿಲ್ಲ, ಜನಪರ ಕೆಲಸ ನೋಡಿ ಮತ ನೀಡುತ್ತಾರೆ ಎಂಬ ಅಚಲ ವಿಶ್ವಾಸವಿದೆ. ಈ ಚುನಾವಣೆ ಸತ್ಯದ ಪರವಾದ ಚುನಾವಣೆ ಸಿದ್ದರಾಮಯ್ಯರವರ ಕೊನೆಯ ಚುನಾವಣೆಯೂ ಆಗಿರುವುದರಿಂದ ಅವರಿಗೆ ಗೆಲುವಿನ ಕೊಡುಗೆ ನೀಡುವ ಮೂಲಕ ಗೌರವಯುತ ರಾಜಕೀಯ ನಿವೃತ್ತಿಯಾಗಲು ಮಾಡಿ ಎಂದರು.

ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಎಚ್.ಸಿ.ಬಸವರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯರಂಗಸ್ವಾಮಿ, ಯುವ ಕಾಂಗ್ರೆಸ್ ಮುಖಂಡ ರಾಕೇಶ್, ಮುಖಂಡರಾದ ಇಂಧನ್‌ಬಾಬು, ಗಿರಿಧರ್, ಪ್ರಸನ್ನಕುಮಾರ್, ಕಲ್ಮಳ್ಳಿ ಬಾಬು, ಬಿ.ಪಿ.ಮಹದೇವ್ರು, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ ಟಿಎಪಿಸಿಎಂಎಸ್ ಉಪಾಧ್ಯಕ್ಷ ಚಿನ್ನಂಬಳ್ಳಿರಾಜು, ಗ್ರಾಪಂ ಅಧ್ಯಕ್ಷ ನಂಜಯ್ಯ, ಜಿಪಂ ಮಾಜಿ ಸದಸ್ಯ ದಯಾನಂದಮೂರ್ತಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಹುಂಡಿಯಲ್ಲಿ 2.23 ಕೋಟಿ ರೂ. ಸಂಗ್ರಹ

ನಂಜನಗೂಡು, ಏ.26– ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಬುಧವಾರ ದೇವಾಲಯದ 25 ಹುಂಡಿಗಳನ್ನು ತೆರೆದು ಏಣಿಕೆ ಕಾರ್ಯ ನಡೆಸಲಾಗಿದ್ದು, 2,23,47,797 ರೂ. ಸಂಗ್ರಹವಾಗಿದೆ. ಚಿನ್ನ 121 ಗ್ರಾಂ, ಬೆಳ್ಳಿ 10 ಕೆಜಿ ಹಾಗೂ 26 ವಿದೇಶಿ ಕರೆನ್ಸಿಗಳು ಲಭ್ಯವಾಗಿವೆ.

ಬ್ಯಾಂಕ್ ಅಫ್ ಬರೋಡದ ಸಿಬ್ಬಂದಿ, ಮಹಿಳಾ ಸ್ತ್ರೀ ಶಕ್ತಿ ಸಂಘದ 100ಕ್ಕೂ ಹೆಚ್ಚು ಸದಸ್ಯರು ಹಾಗೂ ದೇವಾಲಯದ ಸಿಬ್ಬಂದಿ ಏಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ಚಾಮುಂಡಿಬೆಟ್ಟ ದೇವಾಲಯದ ಇಓ ಗೋವಿಂದರಾಜು, ಶ್ರೀಕಂಠೇಶ್ವರ ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ವೆಂಕಟೇಶ್ ಪ್ರಸಾದ್, ಬ್ಯಾಂಕ್ ಅಫ್ ಬರೋಡ ವ್ಯವಸ್ಥಾಪಕ ಟಿ.ಕೆ.ನಾಯಕ್ ಉಪಸ್ಥಿತರಿದ್ದರು.

ಬಹುಮತದಿಂದ ಸಾ.ರಾ.ಮಹೇಶ್ ಗೆಲುವು ಖಚಿತ: ಮಂಜೇಗೌಡ ಭವಿಷ್ಯ



ಚುಂಚನಕಟ್ಟೆ, ಏ.26– ಕೆ.ಆರ್. ನಗರ ಕ್ಷೇತ್ರದಲ್ಲಿ ಶಾಸಕ ಸಾ.ರಾ. ಮಹೇಶ್ ಪರ ಅಲೆಯಿದ್ದು, ಪ್ರತಿ ಮನೆಗಳಲ್ಲೂ ಅವರಿಗೇ ಆದ ಸ್ಥಾನವನ್ನು ನೀಡಿರುವುದರಿಂದ ಈ ಬಾರಿ ಭರ್ಜರಿ ಬಹುಮತದಿಂದ ಅವರು ಆಯ್ಕೆಯಾಗಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಭವಿಷ್ಯ ನುಡಿದಿದ್ದಾರೆ.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಹೋಬಳಿಯಲ್ಲಿ ಚುನಾವಣಾ ಪ್ರಚಾರ ಕೈಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತೆ ಜೆಡಿಎಸ್ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು, ಈ ಕ್ಷೇತ್ರದಲ್ಲಿ ಮತ್ತೊಮ್ಮೆ ಸಚಿವ ಸ್ಥಾನ ಪಡೆಯುವ ಅವಕಾಶವಿದೆ. ಶಾಸಕ ಸಾರಾ ಅವರಿಗೆ ಮತದಾರರೊಂದಿಗೆ ಜಾತಿ, ಧರ್ಮ ಮೀರಿದ ಅನುಬಂಧವಿದ್ದು ಈ ಬಾರಿ ಚುನಾವಣೆಯಲ್ಲಿ ಅದು ಸಾಬೀತಾಗಲಿದೆ ಎಂದರು.

ಕ್ಷೇತ್ರದಲ್ಲಿ ನೀರಾವರಿ, ರಸ್ತೆ, ಪ್ರವಾಸೋದ್ಯಮ, ಶ್ರೀ ರಾಮಸಕ್ಕರೆ ಕಾರ್ಖಾನೆ ಆರಂಭ ಸೇರಿದಂತೆ ಎಲ್ಲಾ ವಿಭಾಗಗಳಲ್ಲಿಯೂ ಅಭಿವೃದ್ಧಿ ಕೈಗೊಂಡು ತಮ್ಮ ಸ್ವಂತ ಹಣದಲ್ಲಿ ಗಾರ್ಮೆಂಟ್ಸ್ ಆರಂಭಿಸಿ ಗ್ರಾಮೀಣ ಭಾಗದ ಮಹಿಳೆಯರನ್ನು ಸ್ವಾವಲಂಬಿಯಾಗಿಸುತ್ತಿರುವ ಸಾ.ರಾ. ಕಾರ್ಯಕ್ರಮಗಳು ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರಿದೆ ಎಂದರು.

ಹೋಬಳಿಯ ಚಿಕ್ಕಹನಸೋಗೆ, ನಾಡಪ್ಪನಹಳ್ಳಿ, ಕಗ್ಗಳ, ದಮ್ಮನಹಳ್ಳಿ, ಹೊಸೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಂಜೇಗೌಡರು ಪ್ರಚಾರ ನಡೆಸಿದರು.

ಈ ಸಂಧರ್ಭದಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಅಣ್ಣೇಗೌಡ, ಹಳಿಯೂರು ಮಧುಚಂದ್ರ, ಬಿ.ರಮೇಶ್, ಎಪಿಎಂಸಿ ಮಾಜಿ ನಿರ್ದೇಶಕ ಬಂಡಳ್ಳಿ ಕುಚೇಲ್, ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ಸುದರ್ಶನ್, ತಾಪಂ ಮಾಜಿ ಸದಸ್ಯ ಲೋಕೇಶ್, ಗ್ರಾಪಂ ಮಾಜಿ ಸದಸ್ಯ ಶಿವಣ್ಣ, ಸಿ.ಕೆ. ಜಗದೀಶ್, ಮುಖಂಡರಾದ ಮಹದೇವ್, ರಾಘವೇಂದ್ರ, ರಾಜೇಶ್, ಪ್ರಮೋದ್, ಅಭಿಷೇಕ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ದಲಿತರು, ಹಿಂದುಳಿದವರು, ರೈತರು ಸ್ವಾವಲಂಬಿ ಜೀವನ ನಡೆಸಲು ಕಾಂಗ್ರೆಸ್ ಗೆಲ್ಲಿಸಬೇಕು

ತಿ.ನರಸೀಪುರ, ಏ.26– ದಲಿತರು, ಹಿಂದುಳಿದವರು, ರೈತರು ಸ್ವಾವಲಂಬಿ ಜೀವನ ನಡೆಸಬೇಕಾದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕಿದೆ ಎಂದು ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.



ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ದೊಡ್ಡೇಬಾಗಿಲು, ಬೂದಹಳ್ಳಿ, ನಾಗಲಗೆರೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಅವರು ಮಾತನಾಡಿದರು.

ರಾಜ್ಯದ ಯಾವುದೇ ಕುಟುಂಬವು ತಾವು ಜೀವನ ಮಾಡಲು ಸಾಧ್ಯವಿಲ್ಲ ಎಂಬ ಪರಿಸ್ಥಿಗೆ ಬರಬಾರದೆಂಬ ದೃಷ್ಟಿಯಿಂದ ನಾನು ಮತ್ತು ಸಿದ್ದರಾಮಯ್ಯ ಹಲವಾರು ಜನೋಪಯೋಗಿ ಯೋಜನೆಗಳ ಜಾರಿಗೆ ಮುಂದಾಗಿದ್ದೇವೆ, ಗೃಹ ಜ್ಯೋತಿ ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ಪ್ರತಿ ಮನೆಯ ಯಜಮಾನಿಗೆ 2000 ರೂಗಳನ್ನು ಖಚಿತವಾಗಿ ನೀಡುವುದು. ಅನ್ನ ಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆಜಿ ಅಕ್ಕಿ ಹಾಗೂ ಯುವ ನಿಧಿ ಯೋಜನೆಯಲ್ಲಿ ಪದವೀಧರರಿಗೆ 3000 ಹಾಗೂ ಡಿಪ್ಲೋಮಾ ಪದವೀಧರರಿಗೆ 1500 ರೂ.ಗಳನ್ನು ಕೊಡಲು ನಿರ್ಧರಿಸಲಾಗಿದೆ ಎಂದರು.

ಗ್ರಾಮಗಳಲ್ಲಿ ಯುವಕರು ಪಕ್ಷದ ಪರವಾಗಿ ಕೆಲಸ ಮಾಡುವಾಗ ಸಣ್ಣಪುಟ್ಟ ವ್ಯತ್ಯಾಸಗಳಾಗಬಹುದು. ವ್ಯತ್ಯಾಸಗಳು ಕಾಂಗ್ರೆಸ್ ಗೆಲ್ಲಬೇಕೆಂಬ ಉದ್ದೇಶಕ್ಕೆ ತೊಂದರೆಯಾಗಬಾರದು. ಯುವಕರು ಪಕ್ಷದ ಕೆಲಸ ಮಾಡಲು ಉತ್ಸುಕರಾಗಿದ್ದಾರೆ. ಹಾಗಾಗಿ ಸಣ್ಣ ಪುಟ್ಟ ವ್ಯತ್ಯಾಸಗಳು ಸಹಜ, ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಕಾಂಗ್ರೆಸ್ ಪಕ್ಷ ಗೆಲ್ಲುವೆಡೆಗೆ ಯುವಕರು ಗಮನಹರಿಸಬೇಕೆಂದು ಸಲಹೆ ನೀಡಿದರು.

ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ, ಕಾರ್ಗಳ್ಳಿ ಶಿವ ಸ್ವಾಮಿ. ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಶಿವಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲಿಪುರ ಎಂ.ರಾಜಣ್ಣ, ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಕ್ಷೇತ್ರ ಅಧ್ಯಕ್ಷ ಎಂ.ಡಿ.ಬಸವರಾಜು, ಸೋಸಲೆ ಪಿಎಸಿಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಡೈರಿ ಕಾರ್ಯದರ್ಶಿ ನಿಂಗಯ್ಯ, ಮುತ್ತಲವಾಡಿ ಗ್ರಾ.ಪಂ.ಅಧ್ಯಕ್ಷ ಕೆ.ಎಂ.ರಮೇಶ್, ಮಾಜಿ ಅಧ್ಯಕ್ಷ ಶಿವರಾಮು, ಎಸ್ಸಿ, ಎಸ್ಟಿ ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ಒಕ್ಕಲಿಗರ ಸಂಘದ ಉಪಾಧ್ಯಕ್ಷ ಮಹೇಶ್, ನಾಗಲಗೆರೆ ಶಾಂತರಾಜು, ಆರ್ಮುಗಂ, ಮೂಗೂರು ಗುರು ಸಿದ್ದಪ್ಪ, ಕರಿಯಪ್ಪ ಮತ್ತಿತರರು ಇದ್ದರು.

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್‌ಗೆ ನೇಮಕ



ಮೈಸೂರು, ಏ.26– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಹಿರಿಯ ಕಾರ್ಯದರ್ಶಿಯಾಗಿ ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಚುನಾವಣಾ ನಿರ್ವಹಣೆಯ ಹೆಚ್ಚುವರಿ ಜವಾಬ್ದಾರಿಯನ್ನಾಗಿ ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ಕುಪ್ಪರವಳ್ಳಿ ಬಿ.ಶಿವಣ್ಣ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಚಿಕ್ಕದೇವಮ್ಮ, ಚಾಮುಂಡೇಶ್ವರಿ ಆಶೀರ್ವಾದದಿಂದ ಟಿಕೆಟ್ ಸಿಕ್ಕಿದೆ

ಹೆಚ್.ಡಿ.ಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ ಪ್ರಚಾರ



ಹೆಚ್.ಡಿ.ಕೋಟೆ, ಏ.26– ಕೋಟೆ ಕ್ಷೇತ್ರದಲ್ಲಿ ನನ್ನನ್ನು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂದು ಹಲವಾರು ಕಾಣದ ಕೈಗಳು ಷಡ್ಯಂತರ ನಡೆಸಿದ್ದವು. ತಾಯಿ ಚಿಕ್ಕದೇವಮ್ಮ ಮತ್ತು ಚಾಮುಂಡೇಶ್ವರಿ ಆಶೀರ್ವಾದದಿಂದ ನನಗೆ ಬಿಜೆಪಿ ಟಿಕೆಟ್ ಸಿಕ್ಕಿದೆ ಎಂದು ಬಿಜೆಪಿ ಅಭ್ಯರ್ಥಿ ಕೆ.ಎಂ. ಕೃಷ್ಣನಾಯಕ ತಿಳಿಸಿದ್ದಾರೆ.

ತಾಲೂಕಿನ ಜಿ.ಬಿ.ಸರಗೂರು ಗ್ರಾಮದ ಕಾಶಿ ವಿಶ್ವನಾಥ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮುದ್ದಯ್ಯನಹುಂಡಿ ಸರ್ಕಲ್‌ನಲ್ಲಿರುವ ಕೆಂಪೇಗೌಡ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಚುನಾವಣಾ ಪ್ರಚಾರ ಆರಂಭಿಸಿ ಅವರು ಮಾತನಾಡಿದರು.

ಕೋಟೆ ಕ್ಷೇತ್ರದಲ್ಲಿ ನನ್ನನ್ನು ಹಲವಾರು ಕಾಣದ ಕೈಗಳು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡಲು ಸತತ ಪ್ರಯತ್ನ ಪಟ್ಟಿದ್ದವು. ಹಲವಾರು ವರ್ಷಗಳಿಂದ ತಾಲೂಕಿನ ಜನತೆಯ ಒಡನಾಟದೊಂದಿಗೆ ಕೆಲಸ ಮಾಡಿಕೊಂಡು ಕೋಟೆ ಮತ್ತು ಸರಗೂರು ತಾಲೂಕಿನ ಮುಖ್ಯ ಕೇಂದ್ರ ಭಾಗದಲ್ಲಿ ತಾಲೂಕಿನ ಕೂಲಿ ಕಾರ್ಮಿಕರಿಗೆ ಬಡ ಕುಟುಂಬ ವರ್ಗದವರಿಗೆ ಶಾಲಾ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ಯಾಂಟೀನ್ ತೆರೆದು 10 ರೂಪಾಯಿಗೆ ತಿಂಡಿ, ಊಟ, ಕೊಡುವ ವ್ಯವಸ್ಥೆ ಮಾಡಿದ್ದೇನೆ ಕೊರೋನಾ ಸಂದರ್ಭದಲ್ಲಿ ಆಹಾರ ಕಿಟ್, ಔಷಧಿ ಕಿಟ್‌ಗಳನ್ನು ತಾಲೂಕಿನ ಬಡ ಕುಟುಂಬದ ರೈತರಿಗೆ ಸ್ಪಂದಿಸುವುದರ ಮೂಲಕ ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ಗುರುತಿಸಿಕೊಂಡು ಬಂದಿದ್ದೇನೆ. ಆದ್ದರಿಂದ ದೇವರ ಅನುಗ್ರಹದಿಂದ ಹಾಗೂ ತಾಲೂಕಿನ ಜನತೆ ಆಶೀರ್ವಾದ ನನ್ನನ್ನು ಕೈ ಬಿಡದೆ ಬಿಜೆಪಿ ಪಕ್ಷದಿಂದ ಟಿಕೆಟ್ ಸಿಕ್ಕಿದೆ ಎಂದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಉತ್ತಮ ಆಡಳಿತ ಕೊಟ್ಟಿದೆ, ಪ್ರಧಾನ ಮಂತ್ರಿ ಮೋದಿ ಅವರ, ಆಡಳಿತ ಎಲ್ಲ ಜನತೆಗೂ ಇಷ್ಟವಾದ್ದರಿಂದ ಈ ಬಾರಿಯೂ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ, ಹೆಚ್.ಡಿ. ಕೋಟೆಯಲ್ಲೂ ಈ ಬಾರಿ ಬಿಜೆಪಿ ಜಯಗಳಿಸಿ ಇತಿಹಾಸವನ್ನು ಸೃಷ್ಟಿ ಮಾಡುವುದಕ್ಕೆ ತಾಲೂಕಿನ ಜನತೆ ನಿಮ್ಮ ಸೇವೆ ಮಾಡಲು ನನಗೆ ಈ ಬಾರಿ ಆಶೀರ್ವದಿಸಿ ಎಂದು ಮನವಿ ಮಾಡಿದರು.

ಚುನಾವಣಾ ಉಸ್ತುವಾರಿ ಇ. ಅಶ್ವತ್ ನಾರಾಯಣ್ ಮಾತನಾಡಿ, ಈಗಾಗಲೇ ರೋಡ್ ಶೋ, ಮತದಾರರ ಮನೆ–ಮನೆಗಳ ಸಂಪರ್ಕವನ್ನು ಬಿಜೆಪಿ ವತಿಯಿಂದ ಮಾಡಲಾಗಿದೆ.

ಕರಪತ್ರಗಳ ವಿತರಣೆ, ಸಾರ್ವಜನಿಕ ಸಭೆ, ಚುನಾವಣಾ ನಿರ್ವಹಣಾ ಸಭೆ, ಮಹಾಪುರುಷರಿಗೆ ಮಾಲಾರ್ಪಣೆ, ತಾಲೂಕಿನ ಎಂಟು ಮಹಾ ಶಕ್ತಿ ಕೇಂದ್ರಗಳಲ್ಲಿ ಏರ್ಪಡಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಟೌನ್ ಅಧ್ಯಕ್ಷ ನಂದೀಶ್, ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಎಸ್‌ಟಿ ಮೋರ್ಚಾ ಅಧ್ಯಕ್ಷ ರಾಜು ಚುನಾವಣಾ ಸಂಚಾಲಕ ಜೆ.ಪಿ.ಯೋಗೇಶ್, ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್, ಚೆನ್ನಪ್ಪ, ಜಿಪಂ ಮಾಜಿ ಸದಸ್ಯರಾದ ವೆಂಕಟಸ್ವಾಮಿ, ಎಚ್.ಸಿ.ಲಕ್ಷ್ಮಣ್, ಮುಖಂಡರಾದ ಸಿ.ವಿ. ನಾಗರಾಜ್, ಡಾ.ಎಚ್.ವಿ.ಕೃಷ್ಣಸ್ವಾಮಿ, ಶಿವರಾಜಪ್ಪ, ಕೆಂಡಗಣ್ಣಸ್ವಾಮಿ, ಬಸವರಾಜಪ್ಪ, ಸೋಮಾಚಾರಿ, ಗೋಪಾಲಯ್ಯ, ಗೋವಿಂದಾಚಾರಿ, ಸ್ವಾಮಿ, ಶಿವಯ್ಯ, ಮಹೇಶ್, ಅರಸ್ ಚಾಮರಾಜು, ರಘು ಗೌಡ, ಕಾಳಪ್ಪಜಿ, ರವೀಶ, ಶಿವರಾಜಪ್ಪ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2 ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3 ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4 ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2 ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3 ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4 ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಯಾದಿಸೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಿಲ್ಲರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಶಿವಾಜಿ ಸೂರತ್ಕಲ್–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಸಿಕಾ ಬೈ ಕಿಸಿಕಿ ಜಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಇಂಗ್ಲೀಷ್ ಮಂಜ (ಕ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೋಲಾ (ಹಿ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು



ಹೆಚ್.ಡಿ.ಕೋಟೆ ತಾಲೂಕಿನ ಕಂಚಮಳ್ಳಿ ಗ್ರಾಪಂ ವ್ಯಾಪ್ತಿಯ ಹತ್ತೋಳು, ಚಿಕ್ಕನಂದಿ, ಚಾಮಳ್ಳಿ, ಕಂಚಮಳ್ಳಿ, ಹಿರನಂದಿ, ಕಾರೇಹುಂಡಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶಾಸಕ, ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಚಿಕ್ಕಮಾದು ಪ್ರಚಾರ ನಡೆಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ರಮ್ಯಾ, ಉಪಾಧ್ಯಕ್ಷ ರಂಗಸ್ವಾಮಿ, ಸದಸ್ಯರಾದ ಶೇಖರ್, ಕುಮಾರ್, ನಂಜುಂಡಸ್ವಾಮಿ, ಮುಖಂಡರಾದ ಈರೇಗೌಡ, ಶ್ರೀನಿವಾಸ್, ಚಂದ್ರು, ಸದಾಶಿವಪ್ಪ, ಶಿವರಾಜ್ ಇನ್ನಿತರರಿದ್ದರು.

ಸರಗೂರಲ್ಲಿ ತಾಲೂಕು ಬಿಜೆಪಿ ನೂತನ ಕಚೇರಿ ಉದ್ಘಾಟನೆ



ಸರಗೂರು, ಏ.26– ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದು, ತಾಲೂಕಿನಲ್ಲಿ ಬಿಜೆಪಿ ಗೆಲ್ಲಿಸುವ ಮೂಲಕ ಸರಕಾರ ರಚನೆಗೆ ಮುನ್ನುಡಿ ಬರೆಯಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ, ಹೆಚ್.ಡಿ. ಕೋಟೆ ಬಿಜೆಪಿ ಚುನಾವಣಾ ಉಸ್ತುವಾರಿ ಇ.ಅಶ್ವಥ್ ನಾರಾಯಣ ಮನವಿ ಮಾಡಿದರು.

ಪಟ್ಟಣದ ಎರಡನೇ ಮುಖ್ಯ ರಸ್ತೆಯಲ್ಲಿ ತಾಲೂಕು ನೂತನ ಬಿಜೆಪಿ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರಕಾರ ಉತ್ತಮ ಆಡಳಿತ ನಡೆಸುತ್ತಿದ್ದು, ಮುಂದಿನ ಬಾರಿಯೂ ರಾಜ್ಯದಲ್ಲಿ ಬಿಜೆಪಿ ಸರಕಾರ ರಚನೆಯಾಗಲಿದೆ. ಹೀಗಾಗಿ ತಾಲೂಕಿನ ಅಭಿವೃದ್ಧಿಗೆ ಕೋಟೆ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಮುಖಂಡ ಡಾ.ಎಚ್.ವಿ.ಕೃಷ್ಣಸ್ವಾಮಿ ಮಾತನಾಡಿದರು. ಬಿಜೆಪಿ ಟೌನ್ ಅಧ್ಯಕ್ಷ ನಾಗರಾಜರಾಮ್, ಬಿಜೆಪಿ ಕಾರ್ಯಕಾರಿಣಿ ಸದಸ್ಯೆ ಸುನಂದರಾಜು, ಪಪಂ ಅಧ್ಯಕ್ಷೆ ರಾಧಿಕ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಉಮಾ ರಾಮು, ನೂರಾಳಸ್ವಾಮಿ, ನವೀನ್, ವೀರೇಶ್, ಹಂಚೀಪುರ ಬಸವಣ್ಣ, ಪಪಂ ಮಾಜಿ ಅಧ್ಯಕ್ಷ ಶಿವರಾಜು, ಸವಿತಾ ಸಮಾಜದ ಮಾಜಿ ಅಧ್ಯಕ್ಷ ಕುಮಾರ್, ಚೌಡೇಶ್ವರಿ ಸೌಂಡ್ಸ್ ಮಾಲಿಕ ರಂಗಸ್ವಾಮಿ, ಸೋಮು ರೈ, ದೇವಯ್ಯ, ಸುಬ್ರಂಹ್ಮಣ್ಯ, ಕಾರ್ಯಕರ್ತರಾದ ಅನಿಲ್‌ಕುಮಾರ್, ಎಸ್.ನಾರಾಯಣ್, ಪ್ರತಾಪ್, ರಂಗಸ್ವಾಮಿ, ಬಾಡಗ ಸಿದ್ದಪ್ಪ, ದಂದಲಿಕೆ ಗುರುಸ್ವಾಮಿ, ಕಾರ್ಯದರ್ಶಿ ರಾಜೇಶ್, ಮಂಡಲ ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ವಿವೇಕ, ರಾಕಿ ಪ್ರಕಾಶ್, ರವಿಕುಮಾರ್, ಶ್ಯಾಮ್ ಶಿವಾಜಿ, ಮೈಲಾರಿ ಅನಂದ್ ಸೇರಿದಂತೆ ಶಕ್ತಿ ಕೇಂದ್ರದ ಬೂತ್ ಅಧ್ಯಕ್ಷರು, ಕಾರ್ಯಕರ್ತರು ಹಾಜರಿದ್ದರು.

ಮತಗಟ್ಟೆಗಳ ಮೂಲ ಸೌಕರ್ಯದ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಳ್ಳಿ

ಚುನಾವಣಾ ಸಿಬ್ಬಂದಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ



ಮೈಸೂರು, ಏ.26(ಎಸ್‌ಬಿಡಿ)– ಮತಗಟ್ಟೆಗಳಲ್ಲಿ ಮೂಲ ಸೌಕರ್ಯ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ 'ಚುನಾವಣೆ ಸಂಬಂಧ ಸೆಕ್ಟರ್ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳು' ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಮತಗಟ್ಟೆಯಲ್ಲಿ ವಿದ್ಯುತ್ ಸಂಪರ್ಕ, ಮತದಾನಕ್ಕೆ ಬರುವವರಿಗೆ ಕುಡಿಯುವ ನೀರು, ಸರದಿಯಲ್ಲಿ ನಿಲ್ಲುವ ಸ್ಥಳದಲ್ಲಿ ನೆರಳು, ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಸೇರಿದಂತೆ ಎಲ್ಲಾ ರೀತಿಯ ಮೂಲ ಸೌಕರ್ಯಗಳ ವ್ಯವಸ್ಥೆ ಮಾಡುವಂತೆ ಈ ಹಿಂದೆಯೇ ಸೂಚಿಸಲಾಗಿತ್ತು. ಮತದಾನ ದಿನ ಸಮೀಪಿಸುತ್ತಿದ್ದು, ಎಲ್ಲಾ ವ್ಯವಸ್ಥೆಯನ್ನೂ ಪರಿಶೀಲಿಸಿ, ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು.

ನಿಗಾ ವಹಿಸಿ: ನೈತಿಕ ಮತದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಅಭ್ಯರ್ಥಿಗಳು ಅಥವಾ ರಾಜಕೀಯ ಪಕ್ಷಗಳ ವತಿಯಿಂದ ಮತದಾರರಿಗೆ ಊಟದ ವ್ಯವಸ್ಥೆ, ಮದ್ಯ, ಹಣ, ಉಡುಗೊರೆ ಹಂಚುವುದರ ಬಗ್ಗೆ ತೀವ್ರ ನಿಗಾ ಇಡಬೇಕು. ಅಂತಹ ಘಟನೆಗಳು ಕಂಡುಬಂದರೆ ತಕ್ಷಣ ಕ್ರಮ ವಹಿಸಿ, ವಸ್ತುಗಳನ್ನು ವಶಪಡಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮತಗಟ್ಟೆಗೆ ಬರುವಂತಹ ವಿಶೇಷ ಚೇತನರು ಹಾಗೂ ವೃದ್ಧರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಯಾವ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂಬುದರ ಬಗ್ಗೆ ಇದೇ ವೇಳೆ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಮತದಾನ ದಿನದಂದು ಎದುರಾಗಬಹುದಾದ ತಾಂತ್ರಿಕ ಸಮಸ್ಯೆಗಳನ್ನು ತಕ್ಷಣವೇ ಬಗೆಹರಿಸಿಕೊಳ್ಳುವ ಬಗ್ಗೆ ಮಾರ್ಗ ದರ್ಶನ ನೀಡಿದರು. ಸಭೆಯಲ್ಲಿ ಚುನಾವಣಾ ವೀಕ್ಷಕಿ ಯಶು ರುಸ್ತಗಿ, ಚುನಾವಣಾ ವೆಚ್ಚ ವೀಕ್ಷಕ ಪ್ರೀತಮ್ ಕುಮಾರ, ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಎಸ್.ಕುಸುಮಾ ಕುಮಾರಿ, ತಹಶೀಲ್ದಾರ್ ಕುಂ.ಇ.ಅಹಮ್ಮದ್, ಕಾರ್ಯನಿರ್ವಾಹಕ ಅಧಿಕಾರಿ ಎಂ.ಗಂಗಣ್ಣ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ಲೋಕನಾಯಕನಗರದಲ್ಲಿ ಚಾಮರಾಜ ಕ್ಷೇತ್ರದ ಜಾ.ದಳ ಅಭ್ಯರ್ಥಿ ಎಚ್.ಕೆ.ರಮೇಶ್ ಮನೆ ಮನೆಗೆ ತೆರಳಿ ಮತ ಯಾಚಿಸಿದರು. ಈ ವೇಳೆ ಜಾ.ದಳ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಮುಖಂಡರಾದ ಬೋರೇಗೌಡ, ಸ್ವಾಮಿಗೌಡ, ದೀಪುಗೌಡ, ಚಂದ್ರ, ಮಂಜಣ್ಣ ಇತರರಿದ್ದರು.

ಬೈಕ್ ರ್‍ಯಾಲಿ ಮೂಲಕ ಮತದಾನ ಜಾಗೃತಿ

ಮೈಸೂರು, ಏ.26(ಎಂಕೆ)– ಮೈಸೂರು ತಾಪಂ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಜಯಪುರ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಬೈಕ್ ರ್‍ಯಾಲಿ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ. ಗಿರೀಶ್ ನೇತೃತ್ವದಲ್ಲಿ ಸಿಂದುವಳ್ಳಿ ಗ್ರಾಪಂನಿಂದ ಆರಂಭವಾದ ಬೈಕ್ ರ್‍ಯಾಲಿ ಉದ್ಬೂರು, ದೂರ, ಮಾರ್ಬಳ್ಳಿ, ಹಾರೋಹಳ್ಳಿ, ಜಯಪುರ, ಧನಗಳ್ಳಿ, ಗೋಪಾಲಪುರ, ಬೀರಿಹುಂಡಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಸಾಗಿ ಕುಮಾರಬೀಡು ಗ್ರಾಮದಲ್ಲಿ ಅಂತ್ಯಗೊಂಡಿತು.



ಮಾರ್ಗದುದ್ದಕ್ಕೂ ಮತದಾನದ ಮಹತ್ವ ತಿಳಿಸುವ ಕರ ಪತ್ರಗಳ ವಿತರಣೆ ಹಾಗೂ ಧ್ವನಿವರ್ಧಕಗಳ ಮೂಲಕ ಕಡ್ಡಾಯವಾಗಿ ಮತದಾನ ಮಾಡುವಂತೆ ತಿಳಿಸಲಾಯಿತು. ಈ ವೇಳೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಮಾತನಾಡಿ, ಮೇ 10 ರಂದು ಎಲ್ಲರೂ ತಪ್ಪದೇ ಮತದಾನ ಮಾಡುವ ಮೂಲಕ ಸಂವಿಧಾನವು ನಮಗೆ ನೀಡಿರುವ ಹಕ್ಕನ್ನು ವಿವೇಚನೆಯಿಂದ ಚಲಾಯಿಸಬೇಕು. ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೆ ನೈತಿಕವಾಗಿ ಮತದಾನ ಮಾಡಬೇಕು ಎಂದು ಕರೆ ನೀಡಿದರು. ಮತಗಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯ ಸೌಕರ್ಯಗಳ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿಕುಮಾರ್, ಜ್ಯೋತಿ, ಕುಳ್ಳೇಗೌಡ, ಬಸವಣ್ಣ, ನರಹರಿ, ಡಿ.ಸಿ.ಶಿವಣ್ಣ, ರಾಮದಾಸ್, ಕುಮಾರ್, ಆನಂದ್ ಮತ್ತಿತರರು ಭಾಗವಹಿಸಿದ್ದರು.

ಆಪರೇಷನ್ ಕಾವೇರಿ

3ನೇ ಬ್ಯಾಚ್‌ನಲ್ಲಿ 135 ಮಂದಿ ಸುರಕ್ಷಿತ ಪ್ರಯಾಣ



ನವದೆಹಲಿ: ಸುಡಾನ್ ಸೇನಾ ಸಂಘರ್ಷದಲ್ಲಿ ಸಿಲುಕಿರುವ ಭಾರತೀಯರನ್ನು ವಾಪಸ್ ತವರಿಗೆ ಕರೆತರುವ ಆಪರೇಷನ್ ಕಾವೇರಿ ಮುಂದುವರೆದಿದ್ದು, ಐಎಎಫ್‌ನ ಎರಡನೇ ವಿಮಾನ ಅ–130ಎದಲ್ಲಿ 135 ಭಾರತೀಯರ 3ನೇ ಬ್ಯಾಚ್ ಬುಧವಾರ ಸುಡಾನ್‌ನಿಂದ ಹೊರಟಿದೆ. ಏತನ್ಮಧ್ಯೆ, ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ.ಮುರಳೀಧರನ್, ಸುಡಾನ್‌ನಿಂದ ಆಗಮಿಸಿದ 148 ಭಾರತೀಯರ 2ನೇ ಬ್ಯಾಚ್ ಅನ್ನು ಸ್ವಾಗತಿಸಿದರು. ಇದಕ್ಕೂ ಮುನ್ನ ನೌಕಾಪಡೆಯ ನೌಕೆ ಐಎನ್‌ಎಸ್ ಸುಮೇಧಾ 278 ಭಾರತೀಯರನ್ನು ಜೆಡ್ಡಾ ಬಂದರಿಗೆ ತಲುಪಿಸಿತ್ತು. ಆಪರೇಷನ್ ಕಾವೇರಿ ಸಂಪೂರ್ಣ ಸ್ವಿಂಗ್‌ನಲ್ಲಿದೆ. ಐಎಎಫ್‌ನ ಅ–130ಎ 2ನೇ ವಿಮಾನವು ಪೋರ್ಟ್ ಸುಡಾನ್‌ನಿಂದ ಜೆಡ್ಡಾಗೆ ಹೊರಡುತ್ತಿದೆ. ಈ ವಿಮಾನದಲ್ಲಿ 135 ಪ್ರಯಾಣಿಕರಿದ್ದು, ಆಪರೇಷನ್ ಕಾವೇರಿ ಅಡಿಯಲ್ಲಿ ಸ್ಥಳಾಂತರಿಸಲ್ಪಟ್ಟ 3ನೇ ಬ್ಯಾಚ್ ಆಗಿದೆ ಎಂದು ಎಂಇಎ ಟ್ವೀಟ್ ಮಾಡಿದೆ.



ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಹೂಟಗಳ್ಳಿ ಹೆಚ್.ಎಸ್.ಚಂದ್ರಶೇಖರ್, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಹಿನಕಲ್ ಹೆಚ್.ಇ.ಗುರುಸ್ವಾಮಿ, ಹೂಟಗಳ್ಳಿ ರಾಮಚಂದ್ರ, ಕೌಶಿಕ್, ಧನುಷ್, ಸ್ವಾಮಿ, ಸಂಪತ್ತು, ನವೀನ್, ದರ್ಶನ್, ರಘು, ರವಿ ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ಬೆಳವಾಡಿ ಶಿವಮೂರ್ತಿ, ರಾಮಚಂದ್ರು, ಹೂಟಗಳ್ಳಿ ಸುರೇಶ್, ಆರ್‌ಎಂಪಿ ರಾಮಚಂದ್ರು, ಕೂರ್ಗಳ್ಳಿ ನಂಜುಂಡೇಗೌಡ, ಪಟೇಲ್ ರಾಮಣ್ಣ, ಸತೀಶ್‌ಬಾಬು, ಧನು, ಭಕ್ತ, ದೀಪು, ಹಿನಕಲ್ ಜಗದೀಶ್, ಈಶ್ವರಪ್ಪ ಹಾಜರಿದ್ದರು.



ಮೈಸೂರು ತಾಲೂಕಿನ ಜಯಪುರದಲ್ಲಿ ಕಾಂಗ್ರೆಸ್ ಮುಖಂಡ ಜೈಲಾಬುದ್ದೀನ್ ಮಹಿಳೆಯರಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಹಂಚಿಕೆ ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಪಕ್ಷ ಕೈ ಬಿಡಬೇಡಿ

ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಮನವಿ




ಮೈಸೂರು,ಏ.26(ಎಸ್‌ಬಿಡಿ)–ಕಾಂಗ್ರೆಸ್ ಪಕ್ಷದ ಇತಿಹಾಸವನ್ನೊಮ್ಮೆ ಸ್ಮರಿಸಿಕೊಂಡು ಮತ ಚಲಾಯಿಸುವಂತೆ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮನವಿ ಮಾಡಿದ್ದಾರೆ.

ವರುಣ ಕ್ಷೇತ್ರ ವ್ಯಾಪ್ತಿಯ ಹುಳಿಮಾವು, ಹದಿನಾರು ಮೋಳೆ ಗ್ರಾಮದಲ್ಲಿ ಆದಿಜಾಂಬವ ಸಮುದಾಯದವರನ್ನು ಭೇಟಿ ಮಾಡಿ, ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯನವರ ಪರ ಮತಯಾಚಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ. ಸಮಾಜವಾದಿ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದ ಮೊದಲ ಪ್ರಧಾನಿ ನೆಹರೂ ಅವರು ರೂಪಿಸಿದ ಪ್ರಗತಿಪರ ಯೋಜನೆಗಳು ದೇಶದ ಅಭಿವೃದ್ಧಿಗೆ ಭದ್ರ ಬುನಾದಿಯಾಗಿವೆ. ಶ್ರೀಮತಿ ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದಾಗ 20 ಅಂಶದ ಕಾರ್ಯಕ್ರಮಗಳು ಉನ್ನತಿಗೆ ದಿಕ್ಸೂಚಿಯಾದವು. ಮಲ ಹೊರುವ ಪದ್ಧತಿ, ಜೀತ ಪದ್ಧತಿಯಂತಹ ಅನಿಷ್ಟ ಆಚರಣೆಗಳನ್ನು ನಿರ್ಮೂಲನೆ ಮಾಡುವುದರ ಜೊತೆಗೆ ಉಳುವವನೇ ಭೂಒಡೆಯ ಸೇರಿದಂತೆ ಹಲವು ದಿಟ್ಟ ನಿರ್ಧಾರಗಳ ಮೂಲಕ ಬಡವರು ಹಾಗೂ ದಲಿತರ ಉದ್ಧಾರಕ್ಕೆ ಪ್ರಾಮಾಣಿಕವಾಗಿ ಶ್ರಮಿಸಿದರು ಎಂದರು.

ಕರ್ನಾಟಕದಲ್ಲಿ ಡಿ.ದೇವರಾಜ ಅರಸು ಕೂಡ ದಲಿತರ ಅಭಿವೃದ್ಧಿಗೆ ಪೂರಕವಾದ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ದಾರಿಯಲ್ಲಿ ಸಾಗುತ್ತಿರುವ ಸಿದ್ದರಾಮಯ್ಯರವರು ಮುಖ್ಯಮಂತ್ರಿಯಾಗಿದ್ದಾಗ ಎಸ್‌ಸಿಪಿ, ಟಿಎಸ್‌ಪಿ ಯೋಜನೆ ಜಾರಿ ಮಾಡುವ ಮೂಲಕ ಬಜೆಟ್‌ನಲ್ಲಿ ಎಸ್ಸಿ ಸಮುದಾಯಕ್ಕೆ ಮೀಸಲಾದ ಅನುದಾನ ಅನ್ಯ ಉದ್ದೇಶಕ್ಕೆ ಬಳಸದಂತೆ ನಿಯಮ ಜಾರಿಗೆ ತಂದರು. ಅನ್ನಭಾಗ್ಯ ಸೇರಿದಂತೆ ಹಲವು ಮಹತ್ವದ ಯೋಜನೆಗಳ ಮೂಲಕ ಸರ್ವರ ಅಭಿವೃದ್ಧಿಗೆ ಶ್ರಮಿಸಿದರು. ನಾಡಿನ ಜನಪರ ನಾಯಕರಾದ ಇವರನ್ನು ಮತ್ತೆ ಗೆಲ್ಲಿಸಬೇಕೆಂದು ಡಾ.ತಿಮ್ಮಯ್ಯ ಮನವಿ ಮಾಡಿದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ




ಶ್ರೀಮತಿ ಶಾರದಮ್ಮ ರವರು

ಇವರು ದಿನಾಂಕ 17.04.2023 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 27.04.2023 ಗುರುವಾರ ಬೆಳಗ್ಗೆ 10.30 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮಕ್ಕಳು, ಅಣ್ಣ ತಮ್ಮಂದಿರು, ನಾದಿನಿಯರು, ತಂಗಿಯರು, ಭಾವಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಪಡುವಾರಹಳ್ಳಿ ಗ್ರಾಮಸ್ಥರು.

ಭೋಜನ: ಮಧ್ಯಾಹ್ನ 1 ಗಂಟೆಗೆ, ಸ್ಥಳ: ಶ್ರೀ ಬಸವೇಶ್ವರ ಛತ್ರ, 1ನೇ ಮೇನ್, ಪಡುವಾರಹಳ್ಳಿ, ಮೈಸೂರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪಾಪನಾಯಕ ರವರು

ಇವರು ದಿನಾಂಕ 17.04.2023 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 27.04.2023 ಗುರುವಾರ ಬೆಳಗ್ಗೆ 10.30 ಗಂಟೆಗೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ತಾಯಿ ಶ್ರೀಮತಿ ರತ್ನಮ್ಮ, ಮೃತರ ಪತ್ನಿ ಶ್ರೀಮತಿ ಸವಿತ ಹಾಗೂ ಕುಟುಂಬವರ್ಗದವರು.

ಸ್ಥಳ: ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ, ಕಾವೇರಿ ಶಾಲೆ ಎದುರು. ಭೋಜನ: ಮಧ್ಯಾಹ್ನ 1 ಗಂಟೆಗೆ

9ನೇ ವರ್ಷದ ಸವಿನೆನಪು



ಶ್ರೀಮತಿ ಸಿ.ಬಿ. ಪವಿತ್ರ

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,

ಇಂತಿ ದುಃಖತಪ್ತರು: ತಂದೆ: ಬೀರೇಗೌಡ ಬಿ. ನಿವೃತ್ತ ಎಎಸ್‌ಐ, ಪೋಲೀಸ್ ಇಲಾಖೆ ತಾಯಿ: ಸಾವಿತ್ರಮ್ಮ ಮತ್ತು ತಂಗಿಯರು, ಮಕ್ಕಳಾದ ನಯನ, ವಂದನ ಮತ್ತು ಕುಟುಂಬವರ್ಗ.

ಅಭಿನಂದನೆಗಳು



ಇವರು ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 89.17% ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು ಇವರಿಗೆ ಅಭಿನಂದನೆಗಳು

ತಮನ್.ಆರ್.ಪೌಲ್

ಗೋಪಾಲಸ್ವಾಮಿ ಪಿಯು ಕಾಲೇಜು

ಅಭಿನಂದಿಸುವವರು: ತಂದೆ-ತಾಯಿ ಹಾಗೂ ಕುಟುಂಬವರ್ಗ

100% ORIGINAL
NeemBOND PLATINUM
NEEM PLYWOOD & FACTORY MADE DOORS
@ FACTORY DEPOT RATES
10 YEARS WARRANTY
9901291267, 9845426862

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ನ್ಯೂ ಸಯ್ಯಾಜಿ ರಾವ್ ರಸ್ತೆ, ಕೆ.ಆರ್. ಆಸ್ಪತ್ರೆ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463 / 9632467311

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ನಂಬರ್ 985, 3ನೇ ಅಡ್ಡ ರಸ್ತೆ, ಅಶೋಕ ರಸ್ತೆ, ಕುಂಬಾರಗೇರಿ, ಲಷ್ಕರ್ ಮೊಹಲ್ಲಾ, ಮೈಸೂರು, ಇಲ್ಲಿ ವಾಸವಾಗಿರುವ ಲೇಟ್. ಶ್ರೀನಿವಾಸ ರವರ ಮಗನಾದ ಶ್ರೀ. ಎಸ್. ರಾಘವೇಂದ್ರ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಕುಂಬಾರಗೇರಿ, ಸಿದ್ದಪ್ಪಾಜಿ ಗುಡಿ ಬೀದಿ, ಅಶೋಕ ವೆಸ್ಟ್ ಕ್ರಾಸ್–5, ಇಲ್ಲಿರುವ ಪೂರ್ವ–ಪಶ್ಚಿಮ: 12 ಅಡಿ, ಉತ್ತರ–ದಕ್ಷಿಣ: 10 ಅಡಿ, ಒಟ್ಟು ವಿಸ್ತೀರ್ಣ: 120 ಚದರ ಅಡಿ ಅಳತೆಯ ನಿವೇಶನ ಮತ್ತು ಇದರಲ್ಲಿ ಕಟ್ಟಿರುವ 120 ಚದರ ಅಡಿ ನೆಲ ಅಂತಸ್ತು, 120 ಚದರ ಅಡಿ ಮೊದಲನೇ ಅಂತಸ್ತು, ಆರ್.ಸಿ.ಸಿ. ಚಾವಣಿ, ರೆಡ್ ಆಕ್ಸೆಡ್ ನೆಲಹಾಸು, ಹೊಂದಿರುವ ವಾಣಿಜ್ಯ ಸ್ವತ್ತಿನ ಸಂಖ್ಯೆ: 985 ಎಲ್–38 ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ:– ಗಲ್ಲಿ, ಪಶ್ಚಿಮಕ್ಕೆ:– ಜಯಲಕ್ಷ್ಮಿ ರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: – ಜಯಲಕ್ಷ್ಮಿ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ:– ಸಾಕಮ್ಮ ರವರಿಗೆ ಸೇರಿದ ಸ್ವತ್ತು

Sd/- M N Prakash Kalappa, KAR- 1996-2000, Advocate & Legal Consultant, 67/7A, PRI Complex, No.2&3 floor, new Sayyaji Rao Road, Fort mohalla, Mysuru-570004, Cell: 9343112535, Email: mnprakashkalappa@gmail.com

ಮೈಸೂರು : 25.04.2023

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

WE'RE HIRING
SERVICE JUNCTION
ISO Certified 9001-2015
AC Technician
Plumber
Refrigerator Technician
Washing Machine Technician
Salary 15000/- to 18000/-
Bogadi, Mysore. Ph : 81237 88840

Summer Sale
SMART SURVEILLANCE SECURITY SOLUTIONS
BUY 4 HD CAMERA
FULL SET INSTALLATION
Starts From Rs. 14,999
GET 1 Wifi Camera year Service FREE
Call : 97429 74449
KUVEMPUNAGAR, MYSORE
* T&C Apply



RUNNING HOUSEFULL
Mysore Show list

Mysore	DRC	01	01:15 PM
Mysore	INOX Centro	01	12:50 PM
Periyapatna	Mahadeswara	04	

ವೈದ್ಯರ ಸಮುದಾಯ ಭವನ

ಆಲನಹಳ್ಳಿ, ಟಿ.ನರಸೀಪುರ ರಸ್ತೆ, ಮೈಸೂರು–28

ಸಭೆ, ಸಮಾರಂಭ ನಡೆಸಲು ಸುಸಜ್ಜಿತವಾದ ಸಭಾಂಗಣ, ಜನರೇಟರ್ ಹಾಗೂ ವಾಹನ ನಿಲುಗಡೆ ಸೌಲಭ್ಯವಿರುವ ಸಮುದಾಯ ಭವನ ದೊರೆಯುತ್ತದೆ. ಸಂಪರ್ಕಿಸಿ:

Off: 94495-61722 / Mob: 96111-72148

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

rProcess is Hiring.....Walk in Drive

Data Annotators - 50 Positions for Day/Night Shift

Diploma / Any Graduates - Looking for Freshers / Experienced with good computer & Communications skills, detail & result oriented.

Walk-in with all Documents:

9AM to 2PM from 27th April to 5th May 2023

Walk-in Venue: "Meghna Havens", Alanahalli, T N Pura Road, Mysore or Gunamba Towers, Lakshmi Puram, Mysore

Email: careers@rprocess.net

Contact: 99800 07732 / 78295 73628 / 99011 08886

www.rprocess.in

PUBLIC NOTICE

Notice is hereby issued to the general public that (1) Mrs. RIZWANA KHANUM, W/O. Mr. Yakoob Shariff, Residing at # 1337, B. N. Street, Mandi Mohalla, Mysuru (2) Mrs. SEEMA KHUTEJA SHERIFF, W/O. Mr. Ayub Sheriff, Residing at # 76, 3rd Cross, 3rd Main, Bannimantap 'A' Layout, Mysuru (3) Mrs. AYESHA HUMERA, W/O. Mr. D. R. Sadiq Sheriff, Residing at # 4540, L12, 2nd Cross, Saint Marys Road, N. R. Mohalla, Mysuru (4) Mrs. RUKHSANA SIDDIQUI, W/O. Mr. Mahaboob Shariff, Residing at # 4, J M J Apartments, Near HDFC Bank, Old Airport Road, Vimanapura, Bengaluru and (5) Mrs. SHAMSHAD BANO, W/O. Mr. Mirza Showkath Ali Baig, Residing at # 2534, Main Road, Nalabandwadi, Nalabandwadi Mohalla, Beside Govt. Urdu Primary School, Ramanagaram have agreed to sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

schedule: All that piece and parcel of property bearing no. 1337 m-5, (having pid no. 150702 & property no. 29-2-542- 309A) measuring east to west 33'3" feet and north to south 8' 3" feet and attached to it east to west 37 feet and north to south 25' 3" feet and attached to it east to west 5'10" feet and north to south 24 feet, totally measuring 1348.48 square feet, situated at sarkaji road, benki nawab road, mandi mohalla, mysuru comprising of ground floor and first floor building and bounded on: east by: property belonging to siddamma, west by: property belonging to siddachar & private property, north by: private property, south by: road

Sd/-M. Sanjay Jain, BBM, LLB, CCL, CMJFS Advocate, # L, 50/2A, 1st Floor, Ashoka Road, Mysore-570001,Email: msjl86@yahoo.co.in

Place: Mysuru mo: 93414-64636

Date: 25.04.2023

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರುಗಳಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದಲ್ಲಿ ವಾಸವಾಗಿರುವ ಲೇಟ್. ದ್ಯಾವನಾಯ್ಕ ರವರ ಮಗ ಲೇಟ್. ಸಿದ್ದನಾಯ್ಕ ಮತ್ತು ಲೇಟ್. ಸಿದ್ದಮ್ಮ ರವರ ವಾರಸುದಾರರುಗಳಾದ, (1)ಶ್ರೀ. ಮಂಚನಾಯ್ಕ, ಬಿನ್. ಲೇಟ್. ಸಿದ್ದನಾಯ್ಕ, (2)ಶ್ರೀಮತಿ. ಶಿವಮ್ಮ, ಕೋಂ. ಶ್ರೀ. ಮಂಚನಾಯ್ಕ, (3)ಶ್ರೀಮತಿ. ಚಿಕ್ಕಿ, ಬಿನ್. ಶ್ರೀ. ಮಂಚನಾಯ್ಕ, (4) ಶ್ರೀ. ಚಿಕ್ಕಣ್ಣ, ಬಿನ್. ಶ್ರೀ. ಮಂಚನಾಯ್ಕ, (5)ಶ್ರೀಮತಿ. ಚಿಂತಾಮಣಿ, ಕೋಂ. ಶ್ರೀ.ಚಿಕ್ಕಣ್ಣ, (6)ಶ್ರೀಮತಿ. ಸುಂದು, ಬಿನ್. ಶ್ರೀ. ಮಂಚನಾಯ್ಕ, (7) ಶ್ರೀ. ಮಾರನಾಯ್ಕ, ಬಿನ್. ಲೇಟ್. ಸಿದ್ದನಾಯ್ಕ, (8) ಶ್ರೀಮತಿ. ಜಯಮ್ಮ, ಕೋಂ. ಶ್ರೀ. ಮಾರನಾಯ್ಕ, (9) ಶ್ರೀಮತಿ. ದೇವಮ್ಮ, ಬಿನ್. ಶ್ರೀ. ಮಾರನಾಯ್ಕ, (10) ಶ್ರೀ. ಸ್ವಾಮಿ, ಬಿನ್. ಶ್ರೀ. ಮಾರನಾಯ್ಕ, (11) ಶ್ರೀಮತಿ. ಶಾಂತ, ಕೋಂ. ಶ್ರೀ. ಸ್ವಾಮಿ, (12) ಶ್ರೀ. ಮಂಜು, ಬಿನ್. ಶ್ರೀ. ಮಾರನಾಯ್ಕ, (13) ಶ್ರೀಮತಿ. ಮಾದೇವಿ, ಕೋಂ. ಶ್ರೀ. ಮಂಜು, (14) ಶ್ರೀ. ಮಾರಣ್ಣ, ಬಿನ್. ಶ್ರೀ. ಮಾರನಾಯ್ಕ, (15) ಶ್ರೀಮತಿ. ಸ್ಮೃತಿ, ಕೋಂ. ಶ್ರೀ. ಮಾರಣ್ಣ, (16) ಶ್ರೀಮತಿ. ಸಿದ್ದಮ್ಮ, ಬಿನ್. ಲೇಟ್. ಸಿದ್ದನಾಯ್ಕ, (17) ಶ್ರೀಮತಿ. ಸಣ್ಣಮಂಚಮ್ಮ, ಬಿನ್. ಲೇಟ್. ಸಿದ್ದನಾಯ್ಕ, (18) ಶ್ರೀಮತಿ. ದೇವಮ್ಮ, ಬಿನ್. ಲೇಟ್. ಸಿದ್ದನಾಯ್ಕ, (19) ಶ್ರೀ. ದೇವಣ್ಣ, ಬಿನ್. ಲೇಟ್. ಸಿದ್ದನಾಯ್ಕ, (20) ಶ್ರೀಮತಿ. ಜವನಮ್ಮ, ಕೋಂ. ಶ್ರೀ. ದೇವಣ್ಣ, (21) ಶ್ರೀ. ಸಿದ್ದಪ್ಪ, ಬಿನ್. ಶ್ರೀ. ದೇವಣ್ಣ, (22) ಶ್ರೀಮತಿ. ಸುನಿ, ಕೋಂ. ಶ್ರೀ. ಸಿದ್ದಪ್ಪ ಮತ್ತು (23) ಶ್ರೀ. ನಾಗರಾಜ, ಬಿನ್. ಶ್ರೀ. ದೇವಣ್ಣ ರವರುಗಳೊಂದಿಗೆ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಂಡಿದ್ದು, ಸದರಿ ಪತ್ರವು ದಿನಾಂಕ 24-12-2014 ರಂದು 4ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಡಬ್ಲ್ಯು–4–00330/2014–15 ಆಗಿ, ಸಿ.ಡಿ. ನಂಬರ್ ಎಂವೈಡಬ್ಲ್ಯುಡಿ–40 ನೇದರಲ್ಲಿ ಮೈಸೂರು ಪಶ್ಚಿಮ ಉಪನೋಂದಣಾಧಿಕಾರಿಗಳವರ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ. ತದನಂತರ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರುಗಳ ಜೊತೆ ದಿನಾಂಕ 22.12.2016 ರಂದು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಆದ್ದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಷೆಡ್ಯೂಲ್ ಸ್ವತ್ತುಗಳ ಸಂಬಂಧವಾಗಿ ಯಾರೂ ಮೇಲ್ಕಂಡ ವ್ಯಕ್ತಿಗಳ ಜೊತೆ ಕ್ರಯದ ಒಪ್ಪಂದ, ಸಾಮಾನ್ಯ ಅಧಿಕಾರ ಪತ್ರ ಈ ತರಹದ ಯಾವುದೇ ವ್ಯವಹಾರವನ್ನು ಮಾಡಬಾರದು. ಷೆಡ್ಯೂಲ್ ಸ್ವತ್ತುಗಳ ಸಂಬಂಧವಾಗಿ ಯಾರಾದರೂ ವ್ಯವಹಾರ ಮಾಡಿದಲ್ಲಿ ಅದು ಸಿಂಧುವಾಗತಕ್ಕದ್ದಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದಲ್ಲಿರುವ ವ್ಯವಸಾಯದ ಜಮೀನುಗಳಾದ ಸರ್ವೆ ನಂಬರುಗಳು (1) 33/4ರ ವಿಸ್ತೀರ್ಣ 01 ಎಕರೆ 38 ಗುಂಟೆ (02 ಗುಂಟೆ ಖರಾಬು ಹೊರತುಪಡಿಸಿ) ಮತ್ತು (2) 33/5 ರ ವಿಸ್ತೀರ್ಣ 01 ಎಕರೆ 36 ಗುಂಟೆ (01 ಗುಂಟೆ ಖರಾಬು ಹೊರತುಪಡಿಸಿ) – ಒಟ್ಟು 03 ಎಕರೆ 34 ಗುಂಟೆ (03 ಗುಂಟೆ ಖರಾಬು ಹೊರತುಪಡಿಸಿ) ಸದರಿ ಸ್ವತ್ತುಗಳು ಒಂದಕ್ಕೊಂದು ಲಗತ್ತಾಗಿದ್ದು, ಅದರ ಚಕ್ಕುಬಂದಿ: ಪೂರ್ವಕ್ಕೆ: ಅಪ್ಪಣ್ಣ ರವರ ಜಮೀನು; ಪಶ್ಚಿಮಕ್ಕೆ: ಓಣಿ ಮತ್ತು ರಂಗನ ಕುಚ್ಚಯ್ಯ ರವರ ಜಮೀನು; ಉತ್ತರಕ್ಕೆ: ದೇವನಾಯ್ಕ ಮತ್ತು ಮಾರಯ್ಯ ರವರ ಜಮೀನು; ದಕ್ಷಿಣಕ್ಕೆ: ಕುಂಬಾರ ತೆಟ್ಟಿ ರವರ ಜಮೀನು.

ಸಹಿ/– ಡಿ.ಜಿ. ನಾಗೇಂದ್ರ ಪ್ರಸಾದ್, ವಕೀಲರು, ಕೆಎಆರ್ 1609/2005, ನಂ. 405, 4ನೇ ಮುಖ್ಯ ರಸ್ತೆ, ಎಸ್.ವಿ.ಪಿ. ನಗರ, ಟಿ. ನರಸೀಪುರ ರಸ್ತೆ, ಮೈಸೂರು – 570028. ಮೊ: 9916139244. e-mail: nagendraprasad.dg@gmail.com

ಸ್ಥಳ : ಮೈಸೂರು